



ಗೌರಿ
ರಂಜನೆ ಬೋಧನೆ ಪ್ರಚೋದನೆ
ಲಂಕೇಶ್
21 ಡಿಸೆಂಬರ್ 2016 ಪುಟ 20 ರೂ. 15/-

ದಾಖಲೆ ನಿರ್ಮಿಸಿದ ರಾಯಚೂರು ಸಾಹಿತ್ಯ ಸಮ್ಮೇಳನ



ಎಂದೆಂದಿಗೂ ಅಮ್ಮ

ಶಿವಮೊಗ್ಗ: ಕಾಗೋಡು ಕಸರತ್ತು: ಕಾಂಗ್ರೆಸ್‌ಗೆ ಆಪತ್ತು!

ಚಿತ್ರದುರ್ಗ: ಆಂಜನೇಯ ಬೆಂಕಿ ಇಟ್ಟಿದ್ದು ಯಾರ ಬಾಲಕ್ಕೆ?





ಮೈಸೂರು ಮೇಯರ್‌ಗಿರಿ: ಅದೇ ರಾಗ, ಹೊಸ ಮುಖ!




ರೋಣ ರಂಗೇರಿದ ರಾಜಕಾರಣದಲ್ಲಿ 'ಪಾಟೀಲ'ರ 'ಬಂಡಿ'!



ರೈತರ ಕುರಿತು ಸಮಾಜದ ಮೊಸಳೆ ಕಣ್ಣ

ಅಂಚಿನಿಂದ.....



ಡಾ.ವಾಸು ಎಚ್.ವಿ.

ಯುಬಿ ಸಿಟಿ ಎಂಬುದು ಕೇವಲ ವಿಜಯ್ ಮಲ್ಯರ ಒಡೆತನದ ಒಂದು ಕಟ್ಟಡ ಮಾತ್ರವಲ್ಲ, ಅದು ಶ್ರೀಮಂತರ ದುಡ್ಡಿನ ಮದದ, ಅಹಂಕಾರದ ಸಂಕೇತವೂ ಹೌದು. ಅದರ ಮಾಲೀಕ ಮಲ್ಯ ಆ ಕಟ್ಟಡದ ಮೌಲ್ಯಕ್ಕಿಂತ ಸ್ವಲ್ಪ ಹೆಚ್ಚು ಪ್ರಮಾಣದ ಸಾಲವನ್ನು ಪಡೆದು, ತೀರಿಸದೇ ಇಂಗ್ಲೆಂಡಿಗೆ ಹೋಗಿ ನೆಲೆಸಿದ್ದಾರೆ. ಆತನ ಒಡೆತನದ ಇಂತಹ ಕೆಲವು ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಂಡು ಹರಾಜು ಹಾಕಿದರೆ, ಆ ಸಾಲ ವಸೂಲಾತಿ ಮಾಡುವುದು ಕಷ್ಟವೇನಲ್ಲ. ಆದರೆ, ದೇಶದ ಸರ್ಕಾರವು ಅಂತಹ ಕ್ರಮಗಳಿಗೆ ಮುಂದಾಗುತ್ತಿಲ್ಲ. ಹೀಗಾಗಿ ರೈತರ ಸಾಲಮನ್ನಾ ಹಕ್ಕೊತ್ತಾಯವನ್ನು ಮುಂದಿಟ್ಟುಕೊಂಡು ಹೋರಾಡುತ್ತಿರುವ ಸಂಘಟನೆಗಳು ಕಳೆದ ವಾರ ಯುಬಿ ಸಿಟಿಯ ಅಣಕು ಹರಾಜು ಕಾರ್ಯಕ್ರಮವನ್ನಿಟ್ಟುಕೊಂಡಿದ್ದವು. ಆ ಮೂಲಕ ದೇಶವನ್ನಾಳುತ್ತಿರುವ ಸರ್ಕಾರಗಳ ಮಾನ ಹರಾಜು ಹಾಕುವ ಆಲೋಚನೆ ಅವರದ್ದಾಗಿತ್ತು, ಅದರೊಂದಿಗೆ ಸಮಾಜದ ಆತ್ಮಸಾಕ್ಷಿಯನ್ನು ಕೆಣಕುವ ಉದ್ದೇಶವೂ ಅದರಲ್ಲಿತ್ತು, ಆದರೆ, ಅದು ಎಷ್ಟರ ಮಟ್ಟಿಗೆ ಸಫಲವಾಯಿತು?

ಅದನ್ನು ಮಾಡದೇ ಇದ್ದಿದ್ದರೆ ಯಾವ ಸುದ್ದಿಯೂ ಆಗುತ್ತಿರಲಿಲ್ಲ; ಈಗ ಅದು ಒಂದು ಮಟ್ಟಿಗಿನ ಸುದ್ದಿಯಾಯಿತು ಎಂಬುದನ್ನು ಬಿಟ್ಟರೆ, ಆತ್ಮಸಾಕ್ಷಿಯನ್ನು ಎಚ್ಚರಿಸುವಂತಹ ದೊಡ್ಡ ಪರಿಣಾಮವೇನೂ ಅದರಿಂದ ಆಗಲಿಲ್ಲ, ಅಂತಹ ದೊಡ್ಡ ಸುದ್ದಿಯೂ ಆಗಲಿಲ್ಲ, ವಿಜಯ್ ಮಲ್ಯ ಮೋಜು ಮಸ್ತಿಗೆ, ಶ್ರೀಮಂತಿಕೆಯ ದುರಹಂಕಾರಕ್ಕೆ ಮಾತ್ರವಲ್ಲದೇ, ಕಾರ್ಪೊರೇಟ್ ಕಂಪೆನಿಗಳ ಎನ್‌ಪಿಎ **(Non-performing asset)** ಎಂಬ ಹೆಸರಿನ, ಹಿಂತಿರುಗಿಸದ ಸಾಲದ ಪ್ರತೀಕವೂ ಆಗಿದ್ದಾರೆ. ಸುದ್ದಿಯಲ್ಲೂ ಇದ್ದಾರೆ. ಅವರ ಅತ್ಯಂತ ಐಷಾರಾಮಿ ಕಟ್ಟಡದ ಅಣಕು ಹರಾಜು ಎಂಬ ನಾಟಕೀಯ ಕಾರ್ಯಕ್ರಮಕ್ಕಿರಬಹುದಾದ ಸುದ್ದಿ ಮೌಲ್ಯ **(News value)** ಸಹಾ ಸುದ್ದಿ ಮಾಧ್ಯಮಗಳ ಗಮನ ಸೆಳೆಯಲಿಲ್ಲ.

ಬಹುಶಃ ಇದಕ್ಕೆ ಎರಡು ಕಾರಣಗಳಿರಬಹುದು; ಒಂದು, ಕಾರ್ಪೊರೇಟ್‌ಗಳನ್ನು ಗುರಿ ಮಾಡುವ ಯಾವುದನ್ನೇ ಆದರೂ ದೊಡ್ಡ ಸುದ್ದಿಯನ್ನಾಗಿಸುವುದು ಸ್ವತಃ ಕಾರ್ಪೊರೇಟ್ ಕಂಪೆನಿಗಳೇ ಆಗಿರುವ ಮಾಧ್ಯಮ ಸಂಸ್ಥೆಗಳಿಗೆ ಇಷ್ಟವಿರುವುದಿಲ್ಲ, ಎರಡು, ಅವರುಗಳಿಗೆ ರೈತರ ಸಂಕಷ್ಟ, ಸಾಲಮನ್ನಾ ಇತ್ಯಾದಿಗಳು ಅಂತಹ ಆಕರ್ಷಕ ಸರಕು ಅಲ್ಲ. ಈ ವಿಷಯದಲ್ಲಿ ಸುದ್ದಿ ಮಾಧ್ಯಮದ್ದು ಮಾತ್ರ ತಪ್ಪಿದೆಯೆಂದು ಹೇಳಲಾಗದು. ಏಕೆಂದರೆ, ಈ ಕ್ಷೇತ್ರವು ಸಮಾಜದಲ್ಲಿ ಒಂದು ಪ್ರತ್ಯೇಕಿತ ಅಂಗವೇನೂ ಅಲ್ಲ, ಒಂದು ರೀತಿಯಲ್ಲಿ ಸಮಾಜದ 'ಮುಖ್ಯವಾಹಿನಿ'ಯ ತುತ್ತೂರಿಯಾಗಿಯಷ್ಟೇ ಅದು ಕೆಲಸ ಮಾಡುತ್ತದೆ. ಹೀಗಿರುವಾಗ ನಾವು ಈ 'ಮುಖ್ಯವಾಹಿನಿ'ಯ ಮೌಲ್ಯಪ್ರಜ್ಞೆಯನ್ನು ವಿಶ್ಲೇಷಣೆಗೆ ಒಳಪಡಿಸದೆ, ತುತ್ತೂರಿಯನ್ನಷ್ಟೇ ಬೈದು ಅಂತಹ ಪ್ರಯೋಜನವೇನೂ ಇಲ್ಲ.

ಆದರೆ, ಈ ವಿಚಾರಕ್ಕೆ ಸಂಬಂಧಿಸಿದಂತೆ ಒಂದು ಬಗೆಯ ಆಷಾಢಭೂತಿತನ ಸಮಾಜದಲ್ಲಿ ಎದ್ದು ಕಾಣುತ್ತದೆ. ಅದನ್ನು ನಾವು ವಿಶ್ಲೇಷಣೆಗೆ ಒಳಪಡಿಸುವ ಅಗತ್ಯವಂತೂ ಇದೆ. ಇವೆಲ್ಲವೂ ನಡೆಯುತ್ತಿರುವ ಸಂದರ್ಭದಲ್ಲಿ ಕನ್ನಡದ ಅತ್ಯಂತ ಹೆಚ್ಚು ಟಿಆರ್‌ಪಿ ಉಳ್ಳ ಚಾನೆಲ್ ಒಂದು ಕಾರ್ಯಕ್ರಮವನ್ನು ಏರ್ಪಡಿಸಿತು. ಕಾರ್ಯಕ್ರಮ ಆ ಚಾನೆಲ್‌ನ 10ನೇ ವಾರ್ಷಿಕೋತ್ಸವ ಕಾರ್ಯಕ್ರಮವಾಗಿತ್ತು, ಅದಕ್ಕೆ ಅತಿಥಿಗಳನ್ನು, ಪ್ರೇಕ್ಷಕರನ್ನು ಕಲೆಹಾಕುವಾಗ ಈ ರೀತಿ ಹೇಳಲಾಯಿತು: "ನಾವು ರೈತರ ಸಂಕಷ್ಟದ ಕುರಿತು ಒಂದು ಕಾರ್ಯಕ್ರಮವನ್ನು ಏರ್ಪಡಿಸುತ್ತಿದ್ದೇವೆ. ಕಾರ್ಯಕ್ರಮಕ್ಕೆ ರೈತರ ಬಗ್ಗೆ ಇತ್ತೀಚೆಗೆ 'ವಿವಾದಾಸ್ಪದ ಕಾಳಜಿ'ಯನ್ನು ತೋರಿರುವ ನಾಯಕ ನಟನೊಬ್ಬನನ್ನೂ ಆಹ್ವಾನಿಸುತ್ತಿದ್ದೇವೆ. ಕಾರ್ಯಕ್ರಮದಲ್ಲಿ ಮುಕ್ತಚರ್ಚೆ ಇರುತ್ತದೆ. ನೀವು ಬರಬೇಕು. ನಿಮ್ಮ ಅನಿಸಿಕೆಗಳನ್ನೂ ಹೇಳಬಹುದು". ಇದು ತಮ್ಮ ಚಾನೆಲ್‌ನ 10ನೇ ವರ್ಷದ ಕಾರ್ಯಕ್ರಮ ಎಂಬುದನ್ನು ಅವರು ಮುಚ್ಚಿಟ್ಟಿದ್ದರು. ಅಲ್ಲಿಗೆ ಹೋದ ನಂತರ ಕಾರ್ಯಕ್ರಮದ ಕುರಿತು ಪ್ರಾಸ್ತಾವಿಕ ಮಾತುಗಳನ್ನು ಆಡಿದಾಗಷ್ಟೇ ಅದು ಹೋದವರಿಗೆ ಗೊತ್ತಾಯಿತು. 'ಈ ಕಾರ್ಯಕ್ರಮವನ್ನು ನಾವು ರೈತರಿಗೆ ಅರ್ಪಿಸುತ್ತಿದ್ದೇವೆ' ಎಂದು ಹೇಳಲಾಯಿತಾದರೂ, 'ಇಲ್ಲಿ ಯಾವುದೇ ಚರ್ಚೆ ಇರುವುದಿಲ್ಲ' ಎಂದು ಆರಂಭದಲ್ಲೇ ಘೋಷಿಸಲಾಯಿತು.


ಎಲ್ಲಾ ಬಿಟ್ಟು, ಈ ಚಾನೆಲ್‌ನವರು 'ರೈತರ ಸಂಕಷ್ಟ'ವನ್ನೇ ಯಾಕೆ ಆಯ್ದುಕೊಂಡರು? ಈ ಆಯ್ಕೆಯ ಹಿಂದೆ ಕೆಲಸ ಮಾಡಿರುವುದು ಸಮಾಜದಲ್ಲಿ ಈಗಾಗಲೇ ಚಾಲ್ತಿಯಲ್ಲಿರುವ ಒಂದು ಮೌಲ್ಯ, ಅದು ಅನ್ನದಾತರ ಕುರಿತು ಕಾಳಜಿ ತೋರಿಸುವುದು ನಮ್ಮ ಕರ್ತವ್ಯವೆಂಬ ಸ್ಥಾಪಿತ ಮೌಲ್ಯ. ಆದರೆ, ಯಾವ ರೀತಿಯಲ್ಲೂ ಅನ್ನದಾತರ ಸಂಕಷ್ಟಕ್ಕೆ ಮಿಡಿಯದ ತೋರಿಕೆಯ ಸಂಗತಿಯಾಗಿ ಮಾತ್ರ ಅದು ವ್ಯಕ್ತವಾಗುತ್ತಿರುವುದು ದುರಂತ.

ಈ ವರ್ಷದ ಬರ ಪರಿಸ್ಥಿತಿಗೆ ಸಮಾಜದ ವಿವಿಧ ವಿಭಾಗಗಳು ಪ್ರತಿಕ್ರಿಯಿಸಿರುವ ರೀತಿ ನೋಡಿದರೆ ಅದು ಸ್ಪಷ್ಟವಾಗುತ್ತದೆ. ಈ ಸಾರಿಯ ವಿಧಾನಮಂಡಲ ಅಧಿವೇಶನದಲ್ಲಿ ಆದದ್ದು ಅದಕ್ಕೆ ಸಾಕ್ಷಿ ಒದಗಿಸುತ್ತದೆ. ಬೆಳಗಾವಿಯ ಸುವರ್ಣಸೌಧದಲ್ಲಿ ಅಧಿವೇಶನದ ದಿನಾಂಕ ನಿಗದಿಯಾದಾಗ ಎಲ್ಲರೂ ಭಾವಿಸಿದ್ದು, ಬಿಜೆಪಿ ಪಕ್ಷವು ಆರೆಸ್ಸೆಸ್ ಕಾರ್ಯಕರ್ತರ ಹತ್ಯೆ ವಿಚಾರವನ್ನು ಮುಂದಿಟ್ಟುಕೊಂಡು ಅಧಿವೇಶನದಲ್ಲಿ ಗಲಾಟೆ ಮಾಡುತ್ತದೆ ಎಂದು. ಅದರ ನಡುವೆ ಇನ್ನೊಂದು ಘಟನೆ ನಡೆಯಿತು. ಬಿಜೆಪಿ ಸದಾ ವಿರೋಧಿಸಲು ಬಯಸುವ ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದ ಸಚಿವ ತನ್ವೀರ್ ಸೇಠ್ ಸರ್ಕಾರೀ ಟಿಪ್ಪು ಜಯಂತಿ ಕಾರ್ಯಕ್ರಮದಲ್ಲಿ ಮೊಬೈಲ್ ಪರದೆ ವೀಕ್ಷಿಸುತ್ತಿದ್ದರು. ಆಗ, ಅದರಲ್ಲಿ ನಗ್ನ ಚಿತ್ರವೊಂದನ್ನು ಸ್ಕ್ರೋಲ್ ಮಾಡಿದ್ದು ಟಿವಿ ಕ್ಯಾಮೆರಾಗಳ ಕಣ್ಣಿಗೆ ಸಿಕ್ಕಿಬಿದ್ದಿತು. ಆ ಮೂಲಕ ಅಧಿವೇಶನವನ್ನು ದಾರಿ ತಪ್ಪಿಸಲು ಬಿಜೆಪಿಗೆ ಇನ್ನೂ ಒಂದು ಒಳ್ಳೆಯ ಅವಕಾಶ ದಕ್ಕಿತು.

ಇದನ್ನು ಸರ್ಕಾರವು ನಿರ್ವಹಿಸಿದ ರೀತಿ ನೋಡಿದರೆ, ಪರಿಸ್ಥಿತಿಯ ವ್ಯಂಗ್ಯದ ಅರಿವಾಗುತ್ತದೆ. ಸರ್ಕಾರವು ಕಲಾಪ ಸಲಹಾ ಸಮಿತಿಯಲ್ಲಿ ಮೊದಲ ಎರಡು ದಿನ ರಾಜ್ಯದ ಬರ ಪರಿಸ್ಥಿತಿಯ ಕುರಿತು ಚರ್ಚೆ, ಆ ನಂತರದ ಎರಡು ದಿನಗಳು ಮಹಾದಾಯಿ ನದಿ ವಿವಾದದ ಕುರಿತ ಚರ್ಚೆ ಎಂಬ ಪ್ರಸ್ತಾಪವನ್ನು ಮುಂದಿಟ್ಟಿತು. ರಾಜ್ಯವನ್ನು ಬರಗಾಲವು ತೀವ್ರವಾಗಿ ಕಾಡುತ್ತಿರುವ ಸಂದರ್ಭ, ಅನ್ನದಾತರ ಸಂಕಷ್ಟಕ್ಕೆ ಸ್ಪಂದಿಸುವುದು ಸದನದ ಕರ್ತವ್ಯ ಎಂದು ಹೇಳಿದರೆ, ಬೇಡ ಎನ್ನುವ ಧೈರ್ಯ ವಿಪಕ್ಷಗಳಿಗಿರುವುದಿಲ್ಲ! ಅಂತಿಮವಾಗಿ ಬರದ ಕುರಿತು ಚರ್ಚೆ ಮತ್ತು ಸರ್ಕಾರದ ಉತ್ತರವನ್ನೇ ನಾಲ್ಕು ದಿನಗಳು ಎಳೆಯಲಾಯಿತು!!

ಆ ಚರ್ಚೆ ನಡೆದ ರೀತಿಯು ಬರದ ಪರಿಸ್ಥಿತಿಯನ್ನು ಅಪಹಾಸ್ಯ ಮಾಡಿದಂತಿತ್ತು. ಸಾಲಮನ್ನಾ ಮತ್ತು ಬೆಳೆ ನಷ್ಟ ಪರಿಹಾರದ ಬೇಡಿಕೆಯನ್ನು ಎರಡು ಪ್ರಮುಖ ವಿರೋಧ ಪಕ್ಷಗಳು ಮುಂದಿಟ್ಟವು. ಬರ ಪರಿಸ್ಥಿತಿಯ ಒಟ್ಟಾರೆ ನಿರ್ವಹಣೆಯನ್ನು ಸರ್ಕಾರವು ಸೂಕ್ತವಾಗಿ ಮಾಡುತ್ತಿಲ್ಲವೆಂತಲೂ ಆರೋಪಗಳನ್ನು ಮಾಡಿದವು. ಕೊನೆಯಲ್ಲಿ ಸರ್ಕಾರದ ಪರವಾಗಿ ಕಂದಾಯ ಸಚಿವರು ಉತ್ತರ ಕೊಟ್ಟರು. ಇದೇ ಸರ್ಕಾರದ ಇದೇ ಇಲಾಖೆಯು, ಬರ ಪರಿಸ್ಥಿತಿಯ ಸಮೀಕ್ಷೆ ಮಾಡಲು ಬಂದಿದ್ದ ಕೇಂದ್ರ ತಂಡಕ್ಕೆ ಒಂದು ವರದಿ ಕೊಟ್ಟಿತ್ತು, ಅದರಲ್ಲಿ ಬರ ಎಷ್ಟು ದಾರುಣ ಸ್ಥಿತಿಯನ್ನು ನಿರ್ಮಿಸಿದೆ ಎಂಬ ಕುರಿತು ಸಾಕಷ್ಟು ಮಾಹಿತಿ ಇತ್ತು, 2001ರಿಂದ, ಕಳೆದ 16 ವರ್ಷಗಳಲ್ಲಿ 13 ವರ್ಷ ಕರ್ನಾಟಕದ ಒಂದಿಲ್ಲೊಂದು ಕಡೆ ಬರ ಇದ್ದೇ ಇತ್ತು, 11 ವರ್ಷ ಅರ್ಧಕ್ಕೂ ಹೆಚ್ಚು ಭಾಗಗಳಲ್ಲಿ ಬರ ತಲೆದೋರಿದೆ. ದೇಶದಲ್ಲೇ ಕರ್ನಾಟಕವು ಎರಡನೇ ಅತೀ ಹೆಚ್ಚು ಬರಪೀಡಿತ ಪ್ರದೇಶವನ್ನು ಹೊಂದಿದೆ ಇತ್ಯಾದಿ ಇತ್ಯಾದಿ. ಆದರೆ, ಅದೇ ಗಂಭೀರತೆ ಬರದ ನಿರ್ವಹಣೆಯನ್ನು ಮಾಡುವಲ್ಲಿ ಸರ್ಕಾರಕ್ಕಿರಲಿಲ್ಲ; ಅದನ್ನು ಸೂಕ್ತವಾಗಿ ಬಿಚ್ಚಿಡುವ ಕಾಳಜಿ ವಿರೋಧ ಪಕ್ಷಗಳಿಗೂ ಇರಲಿಲ್ಲ, 'ಒಳ್ಳೆಯ ಬರ ಎಂದರೆ ಎಲ್ಲರಿಗೂ ಇಷ್ಟ' ಎಂಬಂತೆ ಸರ್ಕಾರದ ಕ್ರಮಗಳಲ್ಲಿ ಸಂಬಂಧಪಟ್ಟ ಎಲ್ಲರಿಗೂ ದುಡ್ಡು ದುಡಿದು ಕೊಡುವ ಕ್ರಮಗಳೇ ಎದ್ದು ಕಂಡವು. ಕಂದಾಯ ಸಚಿವರ ಉತ್ತರದಲ್ಲಿ ಹೆಚ್ಚಿನಂಶ ಅಂಥವೇ ಇತ್ತು, ಸಚಿವರ ಈ ಉತ್ತರವನ್ನು 'ಅದ್ಭುತ'ವಾಗಿ ಉತ್ತರ ಕೊಟ್ಟಿದ್ದಾರೆ ಎಂದು ಮುಖ್ಯಮಂತ್ರಿಗಳು ಕೊಂಡಾಡಿದರು!!





ಸಾಲಮನ್ನಾ ಮತ್ತು ಬೆಳೆ ನಷ್ಟಕ್ಕೆ ಪರಿಹಾರದ ವಿಚಾರಕ್ಕೆ ಬಂದಾಗ, ಕೇಂದ್ರ ಸರ್ಕಾರ ಕೊಟ್ಟರೆ ನಾನು ಕೊಡುತ್ತೇನೆ ಎಂದು ಮುಖ್ಯಮಂತ್ರಿಗಳು ಹೇಳಿದರು. ಕೇಂದ್ರದಲ್ಲಿ ಅಧಿಕಾರ ನಡೆಸುತ್ತಿರುವ ಬಿಜೆಪಿ ಪಕ್ಷದ ಇಲ್ಲಿನ ನಾಯಕರೂ ಸಹ, 'ಅವರು ಕೊಡುತ್ತಾರೆ. ಮೊದಲು ನೀವು ಕೊಡಿ. ನಂತರ ಅವರು ಕೊಡದಿದ್ದರೆ, ನಾವೂ ನಿಮ್ಮೊಂದಿಗೆ ಕೇಂದ್ರ ಸರ್ಕಾರವನ್ನು ಕೇಳುತ್ತೇವೆ' ಎಂದರು. ಹಾಗಿದ್ದ ಮೇಲೆ ಇಬ್ಬರೂ ಸೇರಿ, ರಾಜ್ಯ ಸರ್ಕಾರ ಇಂತಿಷ್ಟು ಕೊಡುತ್ತದೆ; ಕೇಂದ್ರ ಇಷ್ಟು ಕೊಡಬೇಕೆಂದು ಒತ್ತಾಯಿಸುತ್ತೇವೆ ಎಂಬ ನಿರ್ಣಯವನ್ನು ಅಂಗೀಕರಿಸಬಹುದಾಗಿತ್ತು, ಅಂಥದ್ದೇನೂ ನಡೆಯಲಿಲ್ಲ, ಸರ್ಕಾರದ ನಿಲುವನ್ನು ಖಂಡಿಸಿ ಸಭಾತ್ಯಾಗ ಮಾಡಿದರು. ಕಡೆಯ ದಿನ ಇದೇ ಅರ್ಥದ ನಿರ್ಣಯವನ್ನು ಪುಟ್ಟಣ್ಣಯ್ಯನವರು ಮಂಡಿಸಿದಾಗ, ಬಿಜೆಪಿಯು ತನ್ವೀರ್ ಸೇಠ್ ರಾಜೀನಾಮೆಗೆ ಒತ್ತಾಯಿಸಿ ಗದ್ದಲ ಮಾಡುತ್ತಿತ್ತು, ಅಧಿವೇಶನವನ್ನು ಮುಂದೂಡಲಾಗಿದೆ ಎಂದು ಸ್ಪೀಕರ್ ಬೇಗ ಘೋಷಿಸಿದರೆ, ನಮ್ಮ ದಾರಿ ನೋಡಿಕೊಳ್ಳೋಣ ಎಂದು ಎಲ್ಲರೂ ಕಾಯುತ್ತಿದ್ದರು.

ಸರ್ಕಾರವೇ ಹೇಳಿರುವಂತೆ ರಾಜ್ಯದ ರೈತರ ಒಟ್ಟು ಸಾಲ **45,000** ಕೋಟಿ. ಕಳೆದ **3-4** ವರ್ಷಗಳಲ್ಲಿ ಕರ್ನಾಟಕದ ರೈತರ ಒಟ್ಟು ಬೆಳೆ ನಷ್ಟದ ಮೌಲ್ಯವೇ ಸುಮಾರು **50,000** ಕೋಟಿ. ನೈಸರ್ಗಿಕ ಪ್ರಕೋಪದಿಂದ ಈ ರಾಜ್ಯದ ರೈತರು ಈ ಪ್ರಮಾಣದ ಬೆಳೆ ಕಳೆದುಕೊಂಡಿದ್ದಾರೆಂದರೆ, ಅದರ ಪರಿಣಾಮವೇನಾಗಿರಬಹುದು? ಏನಾದರೂ ವಿಶೇಷ ಪ್ಯಾಕೇಜ್ ಕೊಟ್ಟು ಅವರನ್ನು ಉಳಿಸೋಣ ಎಂಬ ಬಗ್ಗೆ ವಿಧಾನಮಂಡಲದ ಯಾವ ಪಕ್ಷಗಳೂ ಗಂಭೀರವಾಗಿರಲಿಲ್ಲ, ಈ ವರ್ಷ ಬೆಳೆ ನಷ್ಟ ಸುಮಾರು **16,000** ಕೋಟಿ ರೂ.ಗಳಷ್ಟಾಗಿದೆ, ನಾವು ನಿಯಮಗಳ ಪ್ರಕಾರ **4,337** ಕೋಟಿ ರೂ.ಗಳ ನೆರವನ್ನು ಕೇಳಿದ್ದೇವೆಂದು ಮುಖ್ಯಮಂತ್ರಿಗಳು ಹೇಳಿದರು. ಕೇಂದ್ರ ಸರ್ಕಾರವು ಅದರಲ್ಲಿ ಅರ್ಧದಷ್ಟನ್ನೂ ಕೊಡುವುದಿಲ್ಲವೆಂದು ಎಲ್ಲರಿಗೂ ಗೊತ್ತಿದೆ. ಬೆಳೆ ಬೆಳೆಯಲು ಎಷ್ಟು ಖರ್ಚಾಗುತ್ತದೆಂದು ಲೆಕ್ಕ ಹಾಕಲು ಇದೇ ಸರ್ಕಾರವು 'ಕೃಷಿ ಬೆಲೆ ನಿಗದಿ ಆಯೋಗ'ವನ್ನು ರಚಿಸಿದೆ, ಅದು ಲೆಕ್ಕ ಹಾಕಿ ಈಗಾಗಲೇ ವರದಿಯೊಂದನ್ನು ಸಲ್ಲಿಸಿದೆ. ಪರಿಹಾರ ನೀಡುವಾಗಿ ಈ ಲೆಕ್ಕ ಯಾರಿಗೂ ಬೇಕಿಲ್ಲ.




ಬರ ನಿರ್ವಹಣೆಯನ್ನು ಹೇಗೆ ಮಾಡ
ಕುರಿತು 2009ರಲ್ಲಿ ತಜ್ಞರು 'ಕೇಂದ್ರ ಬ
ಮಾರ್ಗಸೂಚಿ'ಯನ್ನು ಮಾಡಿಕೊಟ್ಟಿದ್ದಾರೆ. ಅ
ಬೇಕಿಲ್ಲ, ಬೇರೆ ರಾಜ್ಯಗಳ ಕಥೆ ಹೋಗಲಿ
ಎರಡನೇ ಅತೀ ಹೆಚ್ಚು ಬರಪೀಡಿತ
ಹೊಂದಿರುವ ಕರ್ನಾಟಕದ ಜನಪ್ರತಿನಿಧಿಗಳಿಗ
ಬೇಡವೇ? ಬೇಡ. 'ರೈತರೇ ದೇಶದ
'ಅನ್ನದಾತರ ಸಂಕಷ್ಟದ ಸಂದರ್ಭದಲ್ಲಿ ನಾವಿದ್ದ
ಜನ್ಮ ದೊಡ್ಡದು, ರೈತರ ಜನ್ಮ ಇನ್ನೂ ದೊ
ಘೋಷಣೆಗಳಿಂದ ಎಲ್ಲವೂ ಸರಿ ಹೋಗಿಬಿಡು
ಕಣ್ಣೀರು ಯಾರನ್ನು ಸಮಾಧಾನಿಸುವುದಿಲ್ಲ, ಆ
ತೋರಿಕೆಯ ಮಾತುಗಳಿಂದ ನಮ್ಮ ಕರ್ತವ್ಯ ನ
ಎಂಬ ನಾಟಕ ಆಡುತ್ತಾರೆ.

ಪರಿಸ್ಥಿತಿಯ ಗಾಂಭೀರ್ಯತೆ
ಅರ್ಥವಾಗಿಲ್ಲವೆಂಬ ಪಟ್ಟ ಮಾಡಿದರೆ, ಅದ
ವಿರೋಧ ಪಕ್ಷಗಳು, ಮಾಧ್ಯಮ, ನಾಗರಿ
ಸಂಘಟನೆಗಳು ಮಾತ್ರವಲ್ಲದೇ, ಸ್ವತಃ ರೈತರು
ಅವರು 'ಯಾರೂ ರೈತರ ಪರವಾಗಿಲ್ಲ' ಎಂದ
ಇವೇ ರಾಜಕೀಯ ಪಕ್ಷಗಳ ಬಾಲಂಗೋಚಿ
ಚಟುವಟಿಕೆಗಳನ್ನು ಮಾಡಿಕೊಂಡು ಬರುತ
ರೀತಿಯ ಕೃಷಿ ವಿಧಾನವು ಈ ರೀತಿಯ
ತರಬಲ್ಲದು ಎಂದು ನಂಬಲು ಸಿದ್ಧರಿಲ್ಲ;
ನೀರಿನ ಬಳಕೆಯು ನೀರಿನ ಕೊರತೆಯನ್ನು
ಎಂದು ಒಪ್ಪಲು ಸಿದ್ಧರಿರುವುದಿಲ್ಲ, ಮೊಸ
ಗೋಸುಂಬೆತನವನ್ನು ತಾವು ಸಹಿಸಿಕೊಳ್ಳು
ಸ್ಪಷ್ಟ ಸಂದೇಶವನ್ನು ಕೊಡುವಷ್ಟು ಗಟ್ಟಿಯ
ಪರಿಸ್ಥಿತಿಯು ಮತ್ತಷ್ಟು ಬಗಡಾಯಿಸುವಂ
ಹೀಗಾಗಿ ನಾವು ನಿತ್ಯ ದುರಂತಸ್ಥಿತಿಯ
ಹಾಕುತ್ತಲೇ ಇದ್ದೇವೆ. ದೇಶದ ಬಗ್ಗೆ, ಗ್ರಾಮ
ಬಗ್ಗೆ ಕಾಳಜಿ ಇರುವ ಯಾರೇ ಆದರೂ,
ನಿಭಾಯಿಸುವ ಸವಾಲನ್ನು ಕೈಗೆ
ಮುಂದುವರಿಯಬೇಕಾಗುತ್ತದೆ.

ಕೊನೆಯದಾಗಿ- ಕುತೂಹಲಕಾರಿಯ
ಆತಂಕವನ್ನೂ ಉಂಟುಮಾಡುವ ಸಂಗತಿಯ
ರಾಜ್ಯದಲ್ಲಿ ಹೆಚ್ಚಿನ ಭೂಹಿಡುವಳಿ
ಜಾತಿಗಳೆಂದರೆ ಮೇಲ್ಜಾತಿ ಅಥವಾ ಬಲಾಢ್ಯ
ಕರೆಯಬಲ್ಲ ಸಮುದಾಯಗಳೇ ಆಗಿರುವುದು
ದಲಿತರನ್ನೂ ಒಳಗೊಂಡಂತೆ ಉಳಿದ ಜಾತಿ
ಸ್ವಲ್ಪ ಸ್ವಲ್ಪ ಜಮೀನು ಇದೆ. ಕೆಲವು ಭಾಗಗಳ
ಪ್ರಮಾಣದ ಭೂಮಿ ಮಧ್ಯಮ ಜಾತಿಗಳ
ಇದೆ. ಆದರೂ, ರೈತ ಹೋರಾಟವೆಂದರೆ
ಜಾತಿಗಳಿಗೆ ಮಾತ್ರ ಸೀಮಿತವಾಗಿರುವುದು
ವಿಚಿತ್ರವೆಂದರೆ, ಆಂಧ್ರದ ಗಡಿಗೆ ಅಂಟಿಕೊಂಡ
ಜಿಲ್ಲೆಗಳಲ್ಲಿ 'ರೈತರು' ಎಂಬ ಪದವನ್ನ
ಮೇಲ್ಜಾತಿಯನ್ನು ಸೂಚಿಸಲು ಬಳಸಲಾಗುತ್ತದೆ.
ರೈತರಾಗಿರುವ ಹಿಂದುಳಿದ ಮತ್ತು ದಲಿತ
ದವರು ಈ ರೀತಿ ಪದಬಳಕೆ ಮಾಡುವುದ
ತರುತ್ತದೆ. ರೈತರ ಕುರಿತು ಮೊಸಳೆ ಕ
ಹರಿಯುತ್ತದೆ.

ಇತರ ದಮನಿತ ಸಮುದಾಯಗ
ಪೂರ್ವಗ್ರಹ ಮತ್ತು ಅಸಹನೆ ಮಾತ್ರ
ಸಮಾಜದಲ್ಲಿ ಎಲ್ಲರನ್ನೂ ಒಟ್ಟಿಗೆ ಒಯ್ಯಲು
ಚಳವಳಿಯ ಸ್ವರೂಪ ಹೇಗಿರಲು ಸಾಧ್ಯ? ಬರ
ನಿರ್ವಹಣೆಯಷ್ಟೇ ಗಂಭೀರ ಪ್ರಶ್ನೆ ಇದೂ

ದೇಶವನ್ನೇ ಮೋದಿ ಹರಾಜು ಹಾಕಲಿದ್ದಾನೆ



ಕಂಡಹಾಗೆ

• ಗೌರಿ ಲಂಕೇಶ್
editorlankesh@gmail.com

ನರೇಂದ್ರ ಮೋದಿ ಈ ದೇಶದ ಜನರಿಗೆ ಅದೆಂತಹ ಮಂಕುಬೂದಿ ಎರಚಿದ್ದಾನೋ ಗೊತ್ತಿಲ್ಲ. 500 ಮತ್ತು ಒಂದು ಸಾವಿರ ರೂಪಾಯಿ ನೋಟುಗಳು ರದ್ದಾಗಿ ಒಂದು ತಿಂಗಳ ನಂತರವೂ ಲಕ್ಷಾಂತರ ಜನರು ಜೇಬಲ್ಲಿ ಹಣವಿಲ್ಲದೆ ಬ್ಯಾಂಕ್ ಮತ್ತು ಎಟಿಎಂಗಳ ಮುಂದೆ ಗಂಟೆಗಟ್ಟಲೆ ಕಾದು ನಿಂತರೂ, ಈಗಾಗಲೇ ನೂರಕ್ಕೂ ಹೆಚ್ಚು ಜನ ಸತ್ತುಹೋಗಿದ್ದರೂ, ಬಡವರು ಕೈಯಲ್ಲಿ ಕಾಸಿಲ್ಲದೆ ಕಂಗಾಲಾಗಿದ್ದರೂ "ಪರವಾಗಿಲ್ಲ, ಇದೆಲ್ಲ ಸಮಸ್ಯೆಗಳು ಕೆಲ ದಿನಗಳ ಮಟ್ಟಿಗೆ ಮಾತ್ರ. ಇದರಿಂದ ನಮ್ಮ ದೇಶಕ್ಕೆ ಒಳ್ಳೆಯದಾಗುತ್ತೆ. ಕಪ್ಪುಹಣ ನಿರ್ನಾಮವಾಗುತ್ತೆ. ಅಚ್ಛೇ ದಿನ್‌ಗಳು ಬಂದೇಬರುತ್ತವೆ" ಎಂಬ ಭ್ರಮೆಯಲ್ಲಿಯೇ ಇನ್ನೂ ಇದ್ದಾರೆ.

ಆದರೆ ಸತ್ಯವಾಗಲೂ ಕಪ್ಪುಹಣ ನಿರ್ನಾಮವಾಗುತ್ತದೆಯೇ? ಅದೇ ಮೋದಿಯ ಅಸಲಿ ಉದ್ದೇಶವಾಗಿತ್ತೇ?

ಇತ್ತೀಚಿಗೆ 500 ಮತ್ತು 1,000 ರೂಪಾಯಿಗಳ ರದ್ದತಿಯ ಹಿಂದೆ ಮೋದಿಯ ಅಸಲಿ ಉದ್ದೇಶವೇನಾಗಿದ್ದಿರಬಹುದು ಎಂದು ತರ್ಕಿಸಿ ಪ್ರವೀಣ್ ಚಕ್ರವರ್ತಿ ಎಂಬುವವರು 'ಇಂಡಿಯಾಸ್ಪೆಂಡ್' ಎಂಬ ವೆಬ್‌ಸೈಟಿನಲ್ಲಿ ಒಂದು ಲೇಖನ ಬರೆದಿದ್ದರು. ಅದರ ಸಾರಾಂಶ ಹೀಗಿದೆ:

"ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು ನವೆಂಬರ್ 8ರಂದು ದೇಶವನ್ನು ಉದ್ದೇಶಿಸಿ ಮಾಡಿದ ಭಾಷಣದಲ್ಲಿ 500 ಮತ್ತು 1,000 ರೂಪಾಯಿ ನೋಟುಗಳನ್ನು ರದ್ದು ಮಾಡಿರುವುದಾಗಿ ಘೋಷಿಸಿದರು. ಇಂಗ್ಲಿಷ್‌ನಲ್ಲಿ ಅವರು ಮಾಡಿದ ಭಾಷಣದ ಅವಧಿ 25 ನಿಮಿಷಗಳಾಗಿತ್ತು. ಆ ಭಾಷಣದಲ್ಲಿ ಪ್ರಧಾನ ಮಂತ್ರಿಗಳು 'ಕಪ್ಪು ಹಣ'ದ ಬಗ್ಗೆ 18 ಬಾರಿ ಪ್ರಸ್ತಾಪಿಸಿದರು. ಹಾಗೆಯೇ 'ನಕಲಿ ನೋಟು'ಗಳ ಬಗ್ಗೆ ಐದು ಭಾರಿ ಪ್ರಸ್ತಾಪಿಸಿದರು. ಇದ್ದಕ್ಕಿದ್ದಂತೆ ದೇಶದ ಶೇ. 86ರಷ್ಟು ನೋಟುಗಳನ್ನು ರದ್ದುಪಡಿಸಿದ್ದರ ಉದ್ದೇಶ ಕಪ್ಪು ಹಣದ ಹಾವಳಿಯನ್ನು ತಡೆಯುವುದಾಗಿತ್ತು ಎಂಬುದು ಅವರ ಭಾಷಣದಿಂದಲೇ ಸ್ಪಷ್ಟವಾಗಿತ್ತು.

ಮಾರನೆ ದಿನದ ಪತ್ರಿಕೆಗಳು ಇದನ್ನು "ಕಪ್ಪುಹಣ ವಿರುದ್ಧದ ಸಮರ" ಎಂದು ಸಾರಿದವು. ಪೇಟಿಎಂ ಎಂಬ ಮೊಬೈಲ್ ಮೂಲಕ ಹಣವನ್ನು ಪಾವತಿಸುವ ಆ್ಯಪ್ ದಿನಪತ್ರಿಕೆಗಳಲ್ಲಿ ಒಂದು ಪುಟದಷ್ಟು ದೊಡ್ಡದಾದ ಜಾಹೀರಾತನ್ನು ತೆಗೆದು ಈ ನಿರ್ಧಾರವನ್ನು ಸ್ವಾಗತಿಸಿತು ಮತ್ತು ಅವತ್ತೇ ಪ್ರಧಾನಮಂತ್ರಿಗಳು ಜಪಾನಿಗೆ ತೆರಳಿದರು.

ಜಪಾನ್‌ನಿಂದ ಪ್ರಧಾನಿಗಳು ವಾಪಸ್ ಆಗುವ ಹೊತ್ತಿಗೆ ಈ ಪ್ರಕ್ರಿಯೆಗೆ ಇಂಗ್ಲಿಷ್‌ನಲ್ಲಿ 'ಡಿಮಾನಿಟೈಸೇಶನ್' ಎಂದೂ, ಹಿಂದಿಯಲ್ಲಿ 'ನೋಟ್‌ಬಂದಿ' ಎಂದೂ ನಾಮಕರಣ ಮಾಡಲಾಗಿತ್ತಲ್ಲದೆ ದೇಶಾದ್ಯಂತ ಯುದ್ಧ ಕಾಲದಲ್ಲಿ ಚಲಾವಣೆಯಲ್ಲಿರುವ ನೋಟುಗಳನ್ನು ಕಾಪಿಟ್ಟುಕೊಳ್ಳುವಂತೆ ಜನ ನೋಟುಗಳನ್ನು ಸಂಗ್ರಹಿಸುವ ಪರಿಸ್ಥಿತಿ ನಿರ್ಮಾಣವಾಗಿತ್ತು.

ಪ್ರಧಾನಿಗಳ ವೈಯಕ್ತಿಕ ವೆಬ್‌ಸೈಟ್ ಪ್ರಕಾರ ಅವರು ತಮ್ಮ ರೇಡಿಯೋ ಭಾಷಣ 'ಮನ್ ಕಿ ಬಾತ್' ಸೇರಿದಂತೆ ನವೆಂಬರ್ 13ರಿಂದ ನವೆಂಬರ್27ರ ತನಕ ದೇಶದ ವಿವಿಧ ಕಡೆ ಅನಾಣ್ಯೀಕರಣ ಕುರಿತು ಆರು ಬಾರಿ ಮಾತನಾಡಿದರು. ಅವರ ಈ ಎಲ್ಲಾ ಭಾಷಣಗಳ ಸಂಪೂರ್ಣ ಪಠ್ಯ ಅವರ ವೆಬ್‌ಸೈಟಿನಲ್ಲಿ ಲಭ್ಯವಿದೆ.


ಅವರ ಈ ಭಾಷಣಗಳ ವಿಶ್ಲೇಷಣೆ ಈ ಅನಾಣ್ಯೀಕರಣದ ಉದ್ದೇಶ ಹೇಗೆ ಬದಲಾಗುತ್ತಿದೆ ಎಂಬುದನ್ನು ತೋರಿಸುತ್ತದೆ.

ಈಗಾಗಲೇ ಹೇಳಿರುವಂತೆ ನವೆಂಬರ್ 8ರಂದು, ಪ್ರಧಾನಿಗಳು ಈ ಅನಾಣ್ಯೀಕರಣದ ಬಗ್ಗೆ ಘೋಷಿಸಿದಾಗ 'ಕಪ್ಪು ಹಣ'ದ ಬಗ್ಗೆ 'ನಕಲಿ ನೋಟು'ಗಳಿಗಿಂತ ನಾಲ್ಕು ಪಟ್ಟು ಹೆಚ್ಚು ಬಾರಿ ಪ್ರಸ್ತಾಪಿಸಿದ್ದರು. ಆದರೆ ನವೆಂಬರ್ 27ರ ಹೊತ್ತಿಗೆ ಅವರು 'ಕಪ್ಪು ಹಣ'ಕ್ಕಿಂತಲೂ 'ಡಿಜಿಟಲ್/ನಗದು ರಹಿತ' ಎಂಬ ಪದಗಳನ್ನು ಮೂರು ಪಟ್ಟು ಹೆಚ್ಚು ಬಾರಿ ಪ್ರಸ್ತಾಪಿಸಿದರಲ್ಲದೆ 'ನಕಲಿ ನೋಟು'ಗಳ ಬಗ್ಗೆ ಚಕಾರವೆತ್ತಲಿಲ್ಲ. ನೆನಪಿಡಿ, ನವೆಂಬರ್ 8ರ ಭಾಷಣದಲ್ಲಿ 'ಡಿಜಿಟಲ್/ನಗದು ರಹಿತ' ಎಂದು ಒಮ್ಮೆಯೂ ಅವರು ಹೇಳಿರಲಿಲ್ಲ."

ಹೀಗೆ ವಿವರಿಸುವ ಪ್ರವೀಣ್ ಚಕ್ರವರ್ತಿ ಒಂದು ಚಾರ್ಟ್ ಕೊಟ್ಟಿದ್ದಾರೆ. ಅದರ ಪ್ರಕಾರ ನವೆಂಬರ್ 8ರಿಂದ 27ರ ಹೊತ್ತಿಗೆ ಮೋದಿಯ ಭಾಷಣಗಳಲ್ಲಿ 'ಕಪ್ಪು ಹಣ' ಎಂಬ ಪದಪ್ರಯೋಗ ಶೇ. 75ರಿಂದ ಶೇ.25ಕ್ಕೆ ಕುಸಿದಿದೆ. ಹಾಗೆಯೇ 'ನಕಲಿ ನೋಟು'ಗಳ ಪ್ರಸ್ತಾವನೆ ಶೇ. 25ರಿಂದ ಶೇ. ಸೊನ್ನೆ ತಲುಪಿದೆ. ಅಚ್ಚರಿಯೆಂದರೆ ಇದೇ ಅವಧಿಯಲ್ಲಿ 'ಡಿಜಿಟಲ್/ನಗದು ರಹಿತ' ಪದಗಳ ಪ್ರಯೋಗ ಶೇ. ಸೊನ್ನೆಯಿಂದ ಶೇ. 72ಕ್ಕೆ ಏರಿದೆ!

ಪ್ರವೀಣ್ ಚಕ್ರವರ್ತಿಯವರು ಕೊಟ್ಟಿರುವ ಮಾಹಿತಿಯನ್ನು ಹೀಗೆ ತರ್ಕಿಸಬಹುದು:

ನಕಲಿ ನೋಟುಗಳು ಭಯೋತ್ಪಾದನೆಯನ್ನು ಹೆಚ್ಚಿಸುತ್ತಿವೆ ಎಂದಿದ್ದ ಮೋದಿಯವರು ನವೆಂಬರ್ 27ರ ಹೊತ್ತಿಗೆ ಅದರ ಬಗ್ಗೆ ಪ್ರಸ್ತಾಪಿಸದೇ ಇರುವುದು ಏನನ್ನು



ಸೂಚಿಸುತ್ತದೆ? ಈ ಅನಾಣ್ಯೀಕರಣದ ಮೂಲ ಉದ್ದೇಶ ಅಥವಾ ಎರಡನೇ ಪ್ರಾಶಸ್ತ್ಯ ಭಯೋತ್ಪಾದನೆ ತಡೆಯುವುದಾಗಿರಲಿಲ್ಲ ಎಂದು ಸ್ವತಃ ಪ್ರಧಾನಿಯವರೇ ಈಗ ನಂಬಿದ್ದಾರೆಯೇ?

ಹಾಗೆಯೇ ಮೋದಿಯ ಭಾಷಣಗಳಲ್ಲಿ 'ಕಪ್ಪು ಹಣ' ಕುರಿತ ಪ್ರಸ್ತಾವನೆ ಬರೋಬ್ಬರಿ ಶೇ. 75ರಿಂದ ಕೇವಲ ಶೇ. 25ಕ್ಕೆ ಕುಸಿದಿರುವುದನ್ನೂ ಅನಾಣ್ಯೀಕರಣದ ನಿಜ ಉದ್ದೇಶ ಈಗ 'ಕಪ್ಪು ಹಣದ ವಿರುದ್ಧ ಸಮರ'ವಾಗಿರದೇ 'ಎಲ್ಲಾ ನೋಟುಗಳ ವಿರುದ್ಧದ ಯುದ್ಧ'ವಾಗಿದೆ ಎಂದು ಅರ್ಥಮಾಡಿಕೊಳ್ಳಬಹುದೇ?

ಮುಂದುವರೆದು ಪ್ರವೀಣ್ ಚಕ್ರವರ್ತಿಯವರು "ನವೆಂಬರ್ 8ರಿಂದ ನವೆಂಬರ್ 27ರ ತನಕ ಪ್ರಧಾನ ಮಂತ್ರಿಯವರ ಭಾಷಣಗಳು ಸ್ಪಷ್ಟಪಡಿಸಿರುವಂತೆ ಈ ಅನಾಣ್ಯೀಕರಣದ ಉದ್ದೇಶ ಕಪ್ಪು ಹಣದ ನಿರ್ನಾಮವನ್ನು ತೊರೆದು ಈಗ ನಗದು ರಹಿತ ವಹಿವಾಟಿನತ್ತ ಸಾಗಿದೆ" ಎನ್ನುತ್ತಾರೆ.



ಇದೆಲ್ಲದರ ಅರ್ಥ ಇಷ್ಟೇ. ಕಪ್ಪುಹಣವನ್ನು ನಿರ್ನಾಮ ಮಾಡುವುದು, ನಕಲಿನೋಟಿನ ಹಾವಳಿಯನ್ನು ತಡೆಯುವುದು ಮೋದಿಯ ಉದ್ದೇಶವಾಗಿರಲಿಲ್ಲ, ಬದಲಾಗಿ ಪೇಟಿಎಮ್ ತರಹದ ಕಂಪನಿಗಳ ಲಾಭ ಹೆಚ್ಚಿಸುವುದೇ ಆಗಿತ್ತು. ಇದನ್ನು ಅರ್ಥಮಾಡಿಕೊಳ್ಳಬೇಕಾದರೆ ಈ ಅನಾಣ್ಯೀಕರಣದಿಂದ ಎಷ್ಟು ಹಣ ಮೋದಿ ನಿರೀಕ್ಷಿಸಿದ್ದರು ಮತ್ತು ವಾಸ್ತವವಾಗಿ ಸರ್ಕಾರಕ್ಕೆ ಎಷ್ಟು ಸಿಗಲಿದೆ ಎಂದು ನೋಡಬೇಕು.

500 ಮತ್ತು ಸಾವಿರ ರೂಪಾಯಿ ನೋಟುಗಳನ್ನು ಅನಾಣ್ಯೀಕರಿಸಿದಾಗ 'ಅರ್ಥಶಾಸ್ತ್ರಜ್ಞ' ಮೋದಿ ಸಾಹೇಬರು ಈ ದೇಶದಲ್ಲಿ ಚಲಾವಣೆಯಲ್ಲಿರುವ ರೂಪಾಯಿಗಳಲ್ಲಿ 10 ಲಕ್ಷ ಕೋಟಿ ರೂಪಾಯಿಗಳು ಕಪ್ಪುಹಣವಾಗಿದ್ದು ಅದನ್ನು ಜನ ಘೋಷಿಸುವುದಿಲ್ಲವಾದ್ದರಿಂದ ಅದೆಲ್ಲ ಸರ್ಕಾರದ ಬೊಕ್ಕಸಕ್ಕೆ ಜಮೆ ಆಗುತ್ತದೆ ಎಂದು ಲೆಕ್ಕ ಹಾಕಿದ್ದ. ಹಾಗೆಯೇ ಸುಪ್ರೀಮ್‌ಕೋರ್ಟಿಗೆ ಸಲ್ಲಿಸಿದ ಅಫಿಡವಿಟ್‌ನಲ್ಲಿ ಈ ಅನಾಣ್ಯೀಕರಣದಿಂದ 10 ಲಕ್ಷ ಕೋಟಿ ಬರುತ್ತದೆ ಎಂದು ಹೇಳುವ ಮೂಲಕ ತನ್ನ ಕ್ರಮವನ್ನು ಸಮರ್ಥಿಸಿಕೊಂಡಿದ್ದ.

ಆದರೆ ವಾಸ್ತವವೇ ಬೇರೆ ಆಗಿದೆ. ಎಸ್‌ಬಿಐ ನಡೆಸಿರುವ ಅಧ್ಯಯನದ ಪ್ರಕಾರ ಅನಾಣ್ಯೀಕರಣದ ಮುನ್ನ ದೇಶದಲ್ಲಿ ಚಲಾವಣೆಯಲ್ಲಿ ಇದ್ದದ್ದು 500 ರೂಪಾಯಿಗಳ 17,165 ಮಿಲಿಯನ್ ನೋಟುಗಳು ಮತ್ತು 1,000 ರೂಪಾಯಿಗಳ 6,858 ಮಿಲಿಯನ್ ನೋಟುಗಳು. ಇವೆರಡರ ಒಟ್ಟು ಮೌಲ್ಯ 15.44 ಲಕ್ಷ ಕೋಟಿಗಳು. ಮೋದಿಯ ದುರಾದೃಷ್ಟಕ್ಕೆ ಕೇವಲ 20 ದಿನಗಳಲ್ಲಿ ಭಾರತೀಯರು 8.45 ಲಕ್ಷ ಕೋಟಿ ರೂಪಾಯಿಗಳನ್ನು ಬ್ಯಾಂಕುಗಳ ವ್ಯವಹಾರಕ್ಕೆ ಈಗಾಗಲೇ ಜಮೆ ಮಾಡಿ ಆಗಿದೆ: ಇನ್ನುಳಿದಿರುವ ನಾಲ್ಕು ವಾರಗಳಲ್ಲಿ - ಎಸ್‌ಬಿಐ ಅಂದಾಜಿಸಿರುವಂತೆ - ಇನ್ನೆರಡು ಲಕ್ಷ ಕೋಟಿಗಳು ಜಮೆಯಾಗುವ ಸಾಧ್ಯತೆಗಳಿವೆ. ಅದಾದನಂತರ ಇನ್ನೊಂದು ಲಕ್ಷ ಕೋಟಿ ರೂಪಾಯಿಗಳು 'ಸೆಲ್ಫ್ ಡಿಸ್ಕ್ಲೋಜರ್ ಸ್ಕೀಮ್' ಅಡಿ ಬ್ಯಾಂಕುಗಳ ಲೆಕ್ಕಕ್ಕೆ ಜಮೆ ಆಗಲಿವೆ. ಒಟ್ಟಾರೆ ಎಸ್‌ಬಿಐ ಪ್ರಕಾರವೇ ಈ ಅನಾಣ್ಯೀಕರಣದಿಂದಾಗಿ ಕೇಂದ್ರ ಸರ್ಕಾರಕ್ಕೆ ಸಿಗುವುದು ಬರೋಬ್ಬರಿ 10 ಲಕ್ಷ ಕೋಟಿಗಳಲ್ಲ... ಬದಲಾಗಿ ಜುಜುಬಿ 2.5 ಲಕ್ಷ ಕೋಟಿಗಳು ಮಾತ್ರ. ಎಲ್ಲಿಯ 10 ಲಕ್ಷ ಕೋಟಿ, ಎಲ್ಲಿಯ 2.5 ಲಕ್ಷ ಕೋಟಿ?!

ಮಿತ್ರ ಶಿವಸುಂದರ್ ಅವರು ಇದನ್ನು ಇನ್ನೊಂದು ದೃಷ್ಟಿಕೋನದಿಂದ ನೋಡಿದ್ದಾರೆ. ಅವರ ಪ್ರಕಾರ "ತಾತ್ಕಾಲಿಕವಾಗಿ ಅನಾಣ್ಯೀಕರಣದಿಂದ ಕೇಂದ್ರ ಸರ್ಕಾರಕ್ಕೆ ಸಿಗುವುದು ಕೇವಲ 50,000 ಕೋಟಿ ರೂಪಾಯಿಗಳು. ಆದರೆ ಕಳೆದ ಒಂದು ದಶಕದಲ್ಲಿ ಸ್ವಯಂಪ್ರೇರಿತ ಅನಾವರಣ ಸ್ಕೀಮುಗಳಡಿ 65,000 ಕೋಟಿ ರೂಪಾಯಿಗಳು ಸರ್ಕಾರದ ಬೊಕ್ಕಸಕ್ಕೆ ಬಂದಿವೆ. ಅದೂ ಈ ಅನಾಹುತಕಾರಿ ಅನಾಣ್ಯೀಕರಣಕ್ಕಿಂತಲೂ ಶೇ. 30 ಹೆಚ್ಚು. ಅದಕ್ಕಿಂತ ಮುಖ್ಯವಾಗಿ ಸಾಮಾನ್ಯ ಜನರ ಬದುಕನ್ನು ಕಂಗಾಲಾಗಿಸದೆ ಮತ್ತು ಆರ್ಥಿಕ ವ್ಯವಸ್ಥೆಯನ್ನು ಭಂಗ ಮಾಡದೆ ಬಂದ ಹಣ ಅದು.

ಜೊತೆಗೆ ಬರುವ ಆರು ತಿಂಗಳಲ್ಲಿ ಸಿಎಮ್‌ಐಆರ್ ಪ್ರಕಾರ 1.25 ಲಕ್ಷ ಕೋಟಿಯಷ್ಟು ಆರ್ಥಿಕ ನಷ್ಟ ಸಂಭವಿಸಲಿದೆ. ಹಾಗೆಯೇ ಜಿಡಿಪಿ ಶೇ. 2ರಷ್ಟು ಕುಸಿಯಲಿದ್ದು ಅದರಿಂದಾಗಿ ಮೂರರಿಂದ ನಾಲ್ಕು ಲಕ್ಷ ಕೋಟಿ ರೂಪಾಯಿಗಳಷ್ಟು ನಷ್ಟವಾಗಲಿದೆ. (1.25 ಲಕ್ಷ ಕೋಟಿ ಪ್ಲಸ್ 3-4 ಲಕ್ಷ ಕೋಟಿ ಎಂದರೆ 4.25-5.25 ಲಕ್ಷ ಕೋಟಿಯಷ್ಟು ಲುಕ್ಸಾನು!) ಅಂದರೆ ಒಟ್ಟಾರೆಯಾಗಿ ಸರ್ಕಾರಕ್ಕೆ ಲಾಭವಾಗುವ ಬದಲು ಮೂರು ಲಕ್ಷ ಕೋಟಿಯಷ್ಟು ನಷ್ಟ ಆಗಲಿದೆ.

ಎಲ್ಲಕ್ಕಿಂತ ಮುಖ್ಯವಾಗಿ ಯಾವುದೇ ಆರ್ಥಿಕ ಚಮತ್ಕಾರದಿಂದಲೂ ಈಗಾಗಲೇ ಸತ್ತಿರುವ 80 ಜನರ ಪ್ರಾಣಗಳು ಮತ್ತೆ ವಾಪಸ್ ಬರುವುದಿಲ್ಲ."

ಇಷ್ಟೆಲ್ಲ ಎಡವಟ್ಟುಗಳೊಂದಿಗೆ ಇನ್ನೊಂದು ಎಡವಟ್ಟೂ ಆಗಿದೆ. ಅದು ಹಳೆ ನೋಟುಗಳಿಂದಾಗಿ ಮತ್ತು ಹೊಸ ನೋಟುಗಳಿಂದಾಗಿ ಆಗುವ ಆರ್ಥಿಕ ಹೊರೆ. ಹಳೆಯ 500 ರೂಪಾಯಿ ನೋಟುಗಳನ್ನು ಮುದ್ರಿಸಲು ಆರ್‌ಬಿಐ 3,917 ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಿತ್ತು. ಹಾಗೆಯೇ ಹಳೆಯ 1,000 ರೂಪಾಯಿಗಳ ನೋಟುಗಳನ್ನು ಮುದ್ರಿಸಲು 632 ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿತ್ತು. ಈಗ ಅದೆಲ್ಲ ವೇಸ್ಟ್. ಹಾಗೆಯೇ ಸ್ವತಃ ಆರ್‌ಬಿಐ ಒಪ್ಪಿಕೊಂಡಿರುವಂತೆ ಹೊಸ 500 ರೂಪಾಯಿ ನೋಟುಗಳನ್ನು ಮುದ್ರಿಸಲು ಮತ್ತೆ 3,917 ಕೋಟಿ ರೂಪಾಯಿಗಳನ್ನು ತೆತ್ತಬೇಕಿದೆ. ಜೊತೆಗೆ 2000 ಮುಖಬೆಲೆಯ ಹೊಸ ನೋಟುಗಳನ್ನು ಮುದ್ರಿಸಲು 2,000 ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಬೇಕಿದೆ. ಅಂದರೆ ಈ ಹಳೆ ನೋಟು ಮತ್ತು ಹೊಸ ನೋಟುಗಳ ರಗಳೆಯಿಂದಾಗಿ ಒಟ್ಟು 10,466 ಕೋಟಿ ರೂಪಾಯಿಗಳು ಸಂಪೂರ್ಣವಾಗಿ ವೇಸ್ಟ್.

ಸಾಮಾನ್ಯ ಜನರಿಗೆ ನಷ್ಟ ಕಷ್ಟ, ಬ್ಯಾಂಕ್ ಉದ್ಯೋಗಿಗಳಿಗೆ ನರಕಯಾತನೆ, ಸರ್ಕಾರದ ಬೊಕ್ಕಸಕ್ಕೆ ಮತ್ತಷ್ಟು ಹೊರೆ, ಅನಾಣ್ಯೀಕರಣದಿಂದಾಗಿ ಕಪ್ಪುಹಣವೂ ನಿರ್ನಾಮವಾಗುವುದಿಲ್ಲ, ಜೊತೆಗೆ ಸದ್ಯದಲ್ಲೇ ಹೊಸ ನೋಟುಗಳ ನಕಲಿ ನೋಟುಗಳೂ ಪ್ರತ್ಯಕ್ಷವಾಗಲಿವೆ... ಇದೆಲ್ಲಕ್ಕಿಂತ ಮಿಗಿಲಾಗಿ ಸರ್ಕಾರದ ಬೊಕ್ಕಸಕ್ಕೆ ಸೇರಲಿರುವ ಹಣ ಅಷ್ಟಕ್ಕಷ್ಟೇ. ಆದರೆ ಲಾಭ ಅಂತ ಆಗುವುದು ಮೋದಿಯ ಕಾರ್ಪೊರೇಟ್ ಕಂಪನಿಗಳಿಗೆ ಮಾತ್ರ.

ಇದೆಲ್ಲವನ್ನು ಜನ ಈಗಲಾದರೂ ಅರ್ಥಮಾಡಿಕೊಂಡು ಮೋದಿ ಎರಚಿರುವ ಮಂಕುಬೂದಿಯಿಂದ ಹೊರಬಂದು ವಾಸ್ತವವನ್ನು ಅರಿಯಬೇಕಿದೆ. ಇಲ್ಲವೆಂದರೆ ಈತ ಈ ದೇಶವನ್ನೇ ಹರಾಜು ಹಾಕುವ ದಿನ ದೂರವಿಲ್ಲ. ■

ಕರ್ನಾಟಕ ಕೋಮು ಸೌಹಾರ್ದ ವೇದಿಕೆ, ಕಾರ್ಯದರ್ಶಿ ಮಂಡಳಿಯ ಮನವಿ

ಸೌಹಾರ್ದ ಸಂಗಾತಿಗಳೇ,

ನಮ್ಮ ವೇದಿಕೆಯು 2002ರಿಂದಲೂ ಧೀಮಂತವಾಗಿ ಕೋಮುವಾದಿ ಶಕ್ತಿಗಳ ವಿರುದ್ಧ ಒಂದು ಫಲಪ್ರದವಾದ ಚಳವಳಿಯನ್ನು ಕಟ್ಟಿ, ಬೀದಿ ಹಾಗು ಬೌದ್ಧಿಕ
ಹೋರಾಟಗಳನ್ನು ನಡೆಸುತ್ತಿರುವುದು ತಮಗೆಲ್ಲಾ ತಿಳಿದೇ ಇದೆ. 14 ವರ್ಷಗಳ ಈ ಹೋರಾಟವನ್ನು ನಾವು, ನಿಮ್ಮೆದೆಗಳಲ್ಲಿಯೂ-ನಮ್ಮೂರುಗಳ ಸಾರ್ವಜನಿಕ ಬೀದಿಗಳಲ್ಲಿಯೂ, ಕಾರ್ಯಕ್ರಮದ ನಂತರ
ನೆಲೆಗೊಳಿಸಿಕೊಂಡು ನಡೆಸಿಕೊಂಡು ಬಂದಿದ್ದೇವೆ. ನಮ್ಮ ಪ್ರತಿ ಕಾರ್ಯಕ್ರಮಕ್ಕೂ ನಾವು ತಗಲುವ ವೆಚ್ಚವನ್ನು ಲೆಕ್ಕ ಹಾಕಿ, ಅಷ್ಟನ್ನು ಮಾತ್ರ ಸಂಗ್ರಹಿಸಿ, ಸಂಗಾತಿಗಳ ಗಮನಕ್ಕೆ ನೀಡುವ ವಾಡಿಕೆ ಮಾಡಿಕೊಂಡಿದ್ದೇವೆ.
ಪ್ರತಿ ರೂಪಾಯಿಯ ಲೆಕ್ಕವನ್ನು ನಮ್ಮ ಜೊತೆ ಹೆಗಲುಕೊಟ್ಟ

ಇದೀಗ ನಮ್ಮ ಪ್ರತಿರೋಧವು ಮತ್ತೊಂದು ಹಂತಕ್ಕೆ ಜಿಗಿಯಬೇಕಾಗಿದೆ. ಬಂಡವಾಳಶಾಹಿಗಳ ಸಂಪನ್ಮೂಲ ಬೆಂಬಲದಿಂದ ಮದ್ದು ಕೇಡು ಮಾಡುತ್ತಿರುವ ಕೋಮುವಾದಿ
ಶಕ್ತಿಗಳಿಗೆ ಸಮರ್ಥಕ ಪ್ರತಿರೋಧದ ಮಾರ್ಗಗಳನ್ನು ರೂಪಿಸಲು ಬೆಂಗಳೂರಿನಲ್ಲಿ ಒಂದು ಕೇಂದ್ರ ಸಂಪನ್ಮೂಲ ಕಟ್ಟಡದ ವ್ಯವಸ್ಥೆಯನ್ನು ಮಾಡಿಕೊಳ್ಳಬೇಕಾಗಿದೆ.

ಇದಕ್ಕಾಗಿ ಅಂದಾಜು 75 ಲಕ್ಷ ರೂಪಾಯಿಯ ಅವಶ್ಯಕತೆ ಇದೆ. ಸೌಹಾರ್ದ ಬಂಧುಗಳು/ ಸಂಘಟನೆಗಳು ನಿಮ್ಮ ಮಿತಿಗಳ ಅನುಕೂಲದಲ್ಲಿ ಉದಾರವಾಗಿ ಧನಸಹಾಯ ಮಾಡಬೇಕಾಗಿ ವಿನಂತಿಸಿಕೊಳ್ಳುತ್ತಿದ್ದೇವೆ.

ಇಂತಿ,

ಕೆ ಫಣಿರಾಜ್ 9448983294 ಖಜಾಂಚಿಗಳು

ವೇದಿಕೆಯ ಖಾತೆ ವಿವರ:
Karnataka Komu Souharda Vedike,
Lalbhag branch, State Bank of India,
IFC: SBIN0004928
A./C Number: 32716795270


ಸಲಹಾ ಸಮಿತಿ ಪರವಾಗಿ
ಎ.ಕೆ.ಸುಬ್ಬಯ್ಯ, ಗೌರಿ ಲಂಕೇಶ್,
ಇಕ್ಬಾಲ್ ಅಹ್ಮದ್, ಯು.ಎಚ್.ಉಮರ್


ಕಾರ್ಯದರ್ಶಿ ಮಂಡಳಿ ಪರವಾಗಿ
ಸುರೇಶ್ ಭಟ್ ಬಾಕ್ರಬೈಲ್


ಚಿತ್ರದುರ್ಗ: ಆಂಜನೇಯ ಬೆಂಕಿ ಇಟ್ಟಿದ್ದು ಯಾರ ಬಾಲಕ


ಚಿತ್ರದುರ್ಗ ಕಾಂಗ್ರೆಸ್ ರಾಜಕಾರಣದಲ್ಲಿ ತಲ್ಲಣ ಮತ್ತೆ ಮುಗಿಲುಮುಟ್ಟಿದೆ. ಮೊನ್ನೆಯಷ್ಟೇ ನಡೆದ ನಿಗಮ ಮಂಡಳಿಗಳ ನೇಮಕಾತಿಯಲ್ಲಿ ರಾಜಕೀಯ ಹಿರಿತನ, ಪಕ್ಷನಿಷ್ಠೆಗಳನ್ನು ಗಾಳಿಗೆ ತೂರಿ ಜಿಲ್ಲಾ ಮಂತ್ರಿ ಆಂಜನೇಯ ತಮಗಿಷ್ಟ ಬಂದವರಿಗೆ ಗದ್ದುಗೆ ಕರುಣಿಸಿದ್ದಾರೆನ್ನುವ ಆಪಾದನೆ ಪಕ್ಷದೊಳಗೆ ಮನಸ್ತಾಪದ ಕುದಿ ಹುಟ್ಟಿಸಿದೆ. ಇದು ಮುಂಬರಲಿರುವ ವಿಧಾನಸಭಾ ಚುನಾವಣೆಯ ಮೇಲೆ ಪ್ರತಿಕೂಲ ಪರಿಣಾಮ ಬೀರುವ ಸಾಧ್ಯತೆಯನ್ನು ತಳ್ಳಿ ಹಾಕುವಂತಿಲ್ಲ.


ಚಿತ್ರದುರ್ಗ ಜಿಲ್ಲೆಯಲ್ಲಿ ಹಳಿಯೂರಿನ ಶಂಕರ ಮತ್ತು ಹೊಸದುರ್ಗ ವಿಧಾನಸಭಾ ಕ್ಷೇತ್ರದಿಂದ ತಿಪ್ಪೇಶಿ ಎನ್ನುವವರನ್ನು ನಿಗಮ ಮಂಡಳಿಗಳಿಗೆ ನೇಮಕ ಮಾಡಲಾಗಿದೆ. ಈ ಎರಡೂ ನೇಮಕಾತಿಯಲ್ಲಿ ಆಯಾಕ್ಷೇತ್ರದ ಶಾಸಕರು ಮತ್ತು ಮಂತ್ರಿಗಳ ಮರ್ಜಿ ಕೆಲಸ ಮಾಡಿವೆಯೇ ಹೊರತು ಪಾರ್ಟಿಗಾಗಿ ದುಡಿದ ಹಿರಿತನವನ್ನು ಪರಿಗಣಿಸಿಲ್ಲ.





















ಮುಖ್ಯವಾಗಿ ಮಂತ್ರಿ ಆಂಜನೇಯ ವಿರುದ್ಧ ಜಿಲ್ಲೆಯ ಕೈ ಪಡೆಯ ಹಿರಿಯರು ಮುರಕೊಂಡು ಬಿದ್ದಿದ್ದಾರೆ. ಕಾರಣವಿಷ್ಟೆ, ಆಂಜನೇಯರ ಪರಮಾಪ್ತ, ಜಾತ್ಯಸ್ತ ಹಳಿಯೂರಿನ ಶಂಕರನನ್ನು ಲಿಡ್ಕರ್ ಅಧ್ಯಕ್ಷನನ್ನಾಗಿ ನೇಮಕ ಮಾಡಿದ್ದು ಎಲ್ಲರ ಮುನಿಸಿಗೆ ಕಾರಣವಾಗಿದೆ. ಜಿಲ್ಲೆಯಲ್ಲಿ ಎಡಗೈನವರನ್ನೇ ನಿಗಮ ಮಂಡಳಿಗೆ ನೇಮಕ ಮಾಡಬೇಕೆನ್ನುವುದು ಪಕ್ಷದ ಇರಾದೆಯಾಗಿದ್ದರೆ ಆ ಅರ್ಹತೆಯಲ್ಲಿ ಜೆಜಿ ಹಟ್ಟಿ ಡಾ.ತಿಪ್ಪೇಸ್ವಾಮಿ ಮತ್ತು ಎಂ.ಜಯಣ್ಣ ಮೊದಲಿಗರಾಗಿದ್ದರು. ಇವರ ಪಕ್ಷನಿಷ್ಠೆ ಮತ್ತು ಹಿರಿತನದ ಬಗ್ಗೆ ಯಾರೂ ಪ್ರಶ್ನೆ ಮಾಡುವಂತಿಲ್ಲ.

ಜಯಣ್ಣ ಚಿತ್ರದುರ್ಗ ಜಿಲ್ಲೆಯ ಪ್ರಾಮಾಣಿಕ, ದಲಿತಪರ ಹೋರಾಟಗಾರ ಎಂಬ ಹೆಸರು ಪಡೆದಂತವರು. 80ರ ದಶಕದಲ್ಲಿ ದಸಂಸದ ನಾಯಕರಾಗಿದ್ದು ಚಿತ್ರದುರ್ಗ ನೀರಾವರಿ ಹೋರಾಟ ಸಮಿತಿಯನ್ನು ಹುಟ್ಟಾಕಿದವರು. ಅಲ್ಲಿಂದಿಲ್ಲಿಯ ತನಕ ಜಿಲ್ಲೆಗೆ ನೀರಾವರಿ ಬರಬೇಕೆಂದು ಹೋರಾಡುತ್ತಿದ್ದಾರೆ. ಅದೇರೀತಿ ಜೆಜಿ ಹಟ್ಟಿ ಡಾ.ತಿಪ್ಪೇಸ್ವಾಮಿ ಜಿಲ್ಲಾ ದಲಿತ ಸಮುದಾಯದ ಯುವ ಕಾಂಗ್ರೆಸ್ ಜಿಲ್ಲಾ ನಾಯಕ. ಒಮ್ಮೆ ಚಿತ್ರದುರ್ಗ ಪಾರ್ಲಿಮೆಂಟ್ ಚುನಾವಣೆಯಲ್ಲಿ ಕಾಂಗ್ರೆಸ್‌ನಿಂದ ಸ್ಪರ್ಧಿಸಿ ಅತ್ಯಲ್ಪ ಮತಗಳಿಂದ ಸೋತವರು. ಇಂತವರನ್ನು ಪಕ್ಕಕ್ಕಿಟ್ಟು ತನ್ನ ಆಪ್ತನೆನ್ನುವ ಕಾರಣಕ್ಕೆ ಶಂಕರನನ್ನು ಲಿಡ್ಕರ್ ಅಧ್ಯಕ್ಷನನ್ನಾಗಿ ನೇಮಿಸುವ ಮೂಲಕ ಆಂಜನೇಯ ಹಲವರ ಕೆಂಗಣ್ಣಿಗೆ ಗುರಿಯಾಗಿದ್ದಾರೆ.

ಈ ಶಂಕರ ಚಿತ್ರದುರ್ಗದಿಂದ ಕೂಗಳತೆ ದೂರವಿರುವ ಹಳಿಯೂರಿನವನು. ಓದು ಕಾಲು, ಕುಚೇಷ್ಟೆಗಳು ಮುಕ್ಕಾಲು. ಒಂದಷ್ಟು ದುಂಡಾವರ್ತನೆಯ ಇವನಿಗೆ ಪಕ್ಷ, ಸಿದ್ಧಾಂತ, ಹೋರಾಟಗಳೆಲ್ಲವೂ ಆಟಕ್ಕುಂಟು ಲೆಕ್ಕಕ್ಕಿಲ್ಲ. ಮೂರು ವರ್ಷಗಳ ಹಿಂದಷ್ಟೇ ಜೆಡಿಎಸ್ ಬೆಂಬಲಿಗನಾಗಿದ್ದ ಶಂಕರ 2013ರ ಚುನಾವಣೆಯಲ್ಲಿ ಆಂಜನೇಯನ ಬಾಲ ಹಿಡಿದು ಕೈ ಪಾರ್ಟಿಗೆ ವಕ್ಕರಿಸಿಕೊಂಡ. ಬಂದ ಮೂರು ವರ್ಷಗಳಲ್ಲಿ ಮೂರು ಚುನಾವಣೆ ಎದುರಿಸಿ, ಮೂರರಲ್ಲೂ ಹೀನಾಯವಾಗಿ ಮುಗ್ಗರಿಸಿದವನು. ಸ್ಥಳೀಯ ವ್ಯವಸಾಯ ಸಹಕಾರ ಸಂಘದ ನಿರ್ದೇಶಕರ ಚುನಾವಣೆಗೆ ನಿಂತು ಕೇವಲ 4 ಮತ ಪಡೆದು ಹೀನಾಯವಾಗಿ ಸೋತ. ನಂತರ ಹಳಿಯೂರು ಗ್ರಾಮ ಪಂಚಾಯ್ತಿ ಚುನಾವಣೆಯಲ್ಲಿ 20 ಮತ ಪಡೆದು ಮುಖಭಂಗ ಅನುಭವಿಸಿದ್ದ. ನಂತರ ಪಕ್ಷದ ಯುವ ಕಾಂಗ್ರೆಸ್ ಬೂತ್ ಮಟ್ಟದ ಚುನಾವಣೆಗೆ ನಿಂತು ಸ್ವಗ್ರಾಮದಲ್ಲೇ ಸೋತ. ಮತ್ತೊಂದು ಸಂಗತಿಯೆಂದರೆ ಯಾವ ಲಿಡ್ಕರ್‌ಗೆ ಅಧ್ಯಕ್ಷನನ್ನಾಗಿ ಈ ಶಂಕರನನ್ನು ಮಂತ್ರಿ ಆಂಜನೇಯ ನೇಮಕ ಮಾಡಿದ್ದಾರೊ, ಅದೇ ಲಿಡ್ಕರ್ ಸಂಸ್ಥೆಯಿಂದ 5 ಲಕ್ಷ ಸಾಲ ಇವನ ತಲೆ ಮೇಲಿದೆ. ಡಿಟಿಪಿ ಸೆಂಟರ್ ಆರಂಭಿಸುತ್ತೇನೆ ಅಂತ ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ 2016-17ರಲ್ಲಿ ಪಡೆದು ಸಬ್ಸಿಡಿ ಗುಳುಂ ಮಾಡಿ ತೃಪ್ತನಾದವನು. ತಾನು ಸಾಲ ಪಡೆದ ಸಂಸ್ಥೆಗೇ ಅಧ್ಯಕ್ಷನಾಗುತ್ತಾನೆಂದರೆ ಸಾಲದ ಕಥೆಯ ಗತಿಯೇನು? ಇಂತ ಹಿನ್ನೆಲೆಯ ಶಂಕರ್ ಲಿಡ್ಕರ್ ಸಂಸ್ಥೆಗೆ ಅಧ್ಯಕ್ಷನಾಗುತ್ತಾನೆಂದರೆ ಮಂತ್ರಿ ಆಂಜನೇಯರ ದರ್ಬಾರು ಅದೆಷ್ಟು ಹಳ್ಳ ಹಿಡಿದಿದೆ ಅನ್ನೋದು ಅರ್ಥವಾಗುತ್ತೆ. ಸದ್ಯ ಹಿರಿಯ ಕಾಂಗ್ರೆಸ್ಸಿಗರು ಬುಸುಗುಡುತ್ತಿರುವುದೇ ಈ ಕಾರಣಕ್ಕೆ.

ಡಾ. ತಿಪ್ಪೇಸ್ವಾಮಿ ನೇಮಕ ಬದಲಾದದ್ದೇಗೆ?


ಇದೊಂದು ವಿಚಿತ್ರ ರಾಜಕೀಯ ಷಡ್ಯಂತ್ರದ ಪ್ರಸಂಗ. ಜೆಜಿಹಟ್ಟಿ ಡಾ. ತಿಪ್ಪೇಸ್ವಾಮಿ ದೆಹಲಿಯಲ್ಲಿ ಕೈ ಪಾರ್ಟಿಯ ಯುವರಾಜ ರಾಹುಲ್ ಗಾಂಧಿ ಬಳಗದ ಹಾಗಾಗಿಯೇ ಈ ತಿಪ್ಪೇಸ್ವಾಮಿ ಲಿಡ್ಕರ್‌ಗೆ ರಾಹುಲ ಹಸಿರು ನಿಶಾನೆ ಪಡೆದು ಬಂದಿದ್ದ. ಆತನೇ ಅಧ್ಯಕ್ಷನಾಗುವುದು ಬಹುತೇಕ ಖಚಿತವೆಂಬ ಹರಿದಾಡುವ ವೇಳೆಯಲ್ಲೇ ಮಂತ್ರಿ ಆಂ ಕರಾಮತ್ತಿನಿಂದ ಲಿಡ್ಕರ್ ಹುದ್ದೆ ಶಂಕರನಿಗೆ ಆಂಜನೇಯ ಮತ್ತು ಡಾ.ತಿಪ್ಪೇಸ್ವಾಮಿಯ ಪೊಲಿಟಿಕಲ್ ಕೋಲ್ಡ್‌ವಾರ್ ಮೊದಲಿನಿಂದಲ ಒಬ್ಬರ ಮುಖ ಕಂಡರೆ ಮತ್ತೊಬ್ಬರಿಗೆ ಆಗ ಆಂಜನೇಯ ಮಂತ್ರಿಯಾದ ನಂತರ ತಿಪ್ಪೇಸ್ವಾ ಜಿಲ್ಲೆಯ ಪಾರ್ಟಿ ಮಟ್ಟದ ರಾಜಕಾರಣದಿಂದ ಮಾಡಲಾಗಿತ್ತಾದರು ತಿಪ್ಪೇಸ್ವಾಮಿ ರಾಷ್ಟ್ರಮಟ್ಟದ ದೋಸ್ತಿಯಿರುವ ಪ್ರಭಾವಿ. ಇದೇ ಕಾರಣ ರಾಜಕೀಯವಾಗಿ ತಲೆ ಎತ್ತಲು ಬಿಡಬಾರದ ಮಂತ್ರಿಯ ಹುನ್ನಾರ. ಅಸಲಿಗೆ 2014ರಲ್ಲಿ ಚಿ ಪಾರ್ಲಿಮೆಂಟ್ ಚುನಾವಣೆಗೆ ಪಾರ್ಟಿಯಿಂದ



ಲಿಡ್ಕರ್ ಅಧ್ಯಕ್ಷ ಸಾಲ ಪಡೆದಿರುವ ಫಲಾನುಭವಿಗಳ ದಾಖಲೆ

ಚಿತ್ರದುರ್ಗ ನಗರಾಭಿವೃದ್ಧಿ ಗಾದಿ ಮುಸ್ಲಿಮರಿಗೆ?

ಚಿತ್ರದುರ್ಗ ಜಿಲ್ಲಾದ್ಯಂತ ಕೈ ರಾಜಕಾರಣದಲ್ಲಿ ಮುಸ್ಲಿಮರನ್ನು ಕಡೆಗಣಿಸಲಾಗಿದೆ ಎನ್ನುವ ದನಿ ಎದ್ದಿದೆ. ಕಳೆದ ಹಲವು ವರ್ಷಗಳಿಂದ ಮುಸ್ಲಿಂ ಲೀಡರುಗಳಿಗೆ ನಿಗಮ ಮಂಡಳಿಗಳಿಗೆ ನೇಮಕ ಮಾಡುವುದಿರಲಿ, ಯಾವುದೇ ಅಧಿಕಾರಕ್ಕೂ ಪರಿಗಣಿಸಲಿಲ್ಲ ಎನ್ನುವ ಸಿಟ್ಟು ಸದ್ಯ ಮಡುಗಟ್ಟಿದೆ.



ಸದ್ಯ ರಾಜ್ಯದಲ್ಲಿ ನಿಗಮ ಮಂಡಳಿಯ ಸುಗ್ಗಿ ಮುಗಿದಿರುವಾಗಲೇ ಸ್ಥಳೀಯವಾಗಿ ನಗರಾಭಿವೃದ್ಧಿ ಮಂಡಳಿಗಳ ಅಧ್ಯಕ್ಷರ ನೇಮಕಾತಿ ಉಳಿದಿದೆ. ಹಾಗಾಗಿ ಚಿತ್ರದುರ್ಗ ನಗರಾಭಿವೃದ್ಧಿ ಮಂಡಳಿ ಸುದ್ದಿ ಮಾಡಿದೆ. ಮೊನ್ನೆ ಸಾಣೆಹಳ್ಳಿಗೆ ಬಂದಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಈ ಬಾರಿ ಚಿತ್ರದುರ್ಗ ನಗರಾಭಿವೃದ್ಧಿ ಮಂಡಳಿಗೆ ಮುಸ್ಲಿಮರೇ ಅಧ್ಯಕ್ಷರಾಗಬೇಕು ಎನ್ನುವ ಫರ್ಮಾನು ಹೊರಡಿಸಿಹೋಗಿದ್ದಾರೆ. ಹಾಗಾಗಿಯೇ ಚಿತ್ರದುರ್ಗ ಅಲ್ಪಸಂಖ್ಯಾತ ಮುಸ್ಲಿಮರಲ್ಲಿ ಅಧಿಕಾರದ ಕನಸೊಂದು ಚಿಗುರೊಡೆದಿದೆ. ಖುದ್ದು ಮುಖ್ಯಮಂತ್ರಿಗಳೇ ಮುಸ್ಲಿಮರಿಗಿರಲಿ ಎಂದಾದನಂತರ ಉಳಿದ ಯಾವ ಕೋಮಿನವರೂ ಅತ್ತಕಡೆ ಮೂಗು ತೂರಿಸಿಲ್ಲ. ಹಾಗಾಗಿಯೇ ಚಿತ್ರದುರ್ಗ ಮುಸ್ಲಿಂ ನಾಯಕರಲ್ಲೇ ಪೈಪೋಟಿ ಪುಟಿದೆದ್ದು ನಿಂತಿದೆ.

ಚಿತ್ರದುರ್ಗ ನಗರಾಭಿವೃದ್ಧಿ ಮಂಡಳಿಗೆ ಅಧ್ಯಕ್ಷರಾಗಲು ಅಲ್ಪಸಂಖ್ಯಾತರಲ್ಲೇ 8 ಜನ ಸಾಲುಗಟ್ಟಿ ನಿಂತಿದ್ದಾರೆ. ಸದ್ಯ ಅವರೆಲ್ಲರೂ ಬಿಡುವಿಲ್ಲದಂಗೆ ರಾಜ್ಯಮಟ್ಟದ ಕೈ ನಾಯಕರ ಭೇಟಿಗೆ ಅಲೆದಾಡುತ್ತಿದ್ದಾರೆ. ಇಲ್ಲಿ ಇನ್ನೊಂದು ಅಚ್ಚರಿಯ ಸಂಗತಿಯಿದೆ. ಚಿತ್ರದುರ್ಗದವರೇ ಆದ ಆರ್.ಕೆ. ಸರ್ದಾರ್ 30 ವರ್ಷಗಳಿಂದ ಕೈ ರಾಜಕಾರಣದ ನಿಷ್ಠಾವಂತ ಕಾರ್ಯಕರ್ತರಾಗಿರುವವರು. ಹಾಗೆ ನೋಡಿದರೆ ಮುಸ್ಲಿಂ ಸಮುದಾಯವೇ ಅವರ ಬೆಂಬಲಕ್ಕಿದೆ. ಅದಕ್ಕೆ ಸಾಕ್ಷಿ ಎಂಬಂತೆ ಚಳ್ಳಕೆರೆ, ಹೊಸದುರ್ಗ, ಹಿರಿಯೂರು, ಚಿತ್ರದುರ್ಗ ನಗರಸಭಾ ಸದಸ್ಯರುಗಳು ಸರ್ದಾರರನ್ನೇ ನಿಗಮ ಮಂಡಳಿಗೆ ಅಧ್ಯಕ್ಷರನ್ನಾಗಿ ನೇಮಕ ಮಾಡಲು ಮಂತ್ರಿಗೆ ಮನವಿ ನೀಡಿದ್ದಾರೆ. ಅಷ್ಟೊಂದು ಜನಪ್ರಿಯ ಸರ್ದಾರ್, ಮುಸ್ಲಿಂ ನಾಯಕರ ನೆಚ್ಚಿನ ರಾಜಕಾರಣಿ ಎಂಬುದು ಒಂದು ಮಾತು.

ಏನೇ ಆಗಲಿ, ಸ್ವತಃ ಕಾಂಗ್ರೆಸ್ ಯುವರಾಜ ರಾಹುಲ್ ಗಾಂಧಿಯ ಮಾತಿಗೇ ಕ್ಯಾರೇ ಅನ್ನದ ಮಂತ್ರಿ ಆಂಜನೇಯ ಮುಖ್ಯಮಂತ್ರಿ ಆಜ್ಞೆಗೆ ತಲೆದೂಗಿ ಮುಸ್ಲಿಮರಿಗೇ ಹುದ್ದೆ ಕರುಣಿಸುತ್ತಾರೆ ಅನ್ನೋದು ಯಾಕೋ ದೌಟು. ತಮ್ಮ ಮತ್ತೊಬ್ಬ ಚೇಲಾನನ್ನು ಹಿಡಿದುತಂದು ಪಟ್ಟ ಕಟ್ಟಿದರೂ ಅಚ್ಚರಿಯಿಲ್ಲ. ಯಾವುದಕ್ಕೂ ಕಾಲವೇ ಉತ್ತರ ಹೇಳಲಿದೆ.

ತರಲು ತಿಪ್ಪೇಸ್ವಾಮಿ ಸತತ ಪ್ರಯತ್ನ ನಡೆಸಿದ್ದ. ಆದರೆ ಅದಕ್ಕೆ ಅಡ್ಡಗಾಲು ಹಾಕಿದ್ದು ಇದೇ ಆಂಜನೇಯ. ತಿಪ್ಪೇಸ್ವಾಮಿಗೆ ಟಿಕೆಟ್ ತಪ್ಪಿಸಬೇಕೆಂಬ ಏಕೈಕ ಕಾರಣಕ್ಕೆ ಚಿಕ್ಕಮಗಳೂರು ಮೂಲದ, ಮಾಜಿ ಕೇಂದ್ರಮಂತ್ರಿ ಮುನಿಯಪ್ಪನ ಅಳಿಯ ಚಂದ್ರಪ್ಪನನ್ನು ಕರೆತಂದು ಟಿಕೇಟು ದಕ್ಕುವಂತೆ ಮಾಡಲಾಗಿತ್ತು.

ಆಂಜನೇಯನ ಅನುಭವದೆದುರು ಡಾ.ತಿಪ್ಪೇಸ್ವಾಮಿಯ ರಾಜಕೀಯ ಅಂಬೆಗಾಲಿಡುವಂತದ್ದೇ ಅಂದುಕೊಂಡರೂ ಮಂತ್ರಿ ಇವನ ಮೇಲೆ ರಾಜಕೀಯ ಮಾರಣಾಂತಿಕ ಹಗೆ ತೀರಿಸುವ ಅಗತ್ಯವೇನಿರಲಿಲ್ಲ. ಹಾಗೆ ನೋಡಿದರೆ ಆಂಜನೇಯ, ಶಂಕರ್‌ನನ್ನು ನಿಗಮ ಮಂಡಳಿಗೆ ಪರಿಗಣಿಸುವ ಮೂಲಕ ಜಿಲ್ಲಾ ಕೈಪಾರ್ಟಿಯ ಹಿರಿಯರ ಸಿಟ್ಟಿಗೆ ಗುರಿಯಾದರು.

ಇವರನ್ನೂ ಪರಿಗಣಿಸಬಹುದಿತ್ತು

ಚಿತ್ರದುರ್ಗ ಜಿಲ್ಲಾದ್ಯಂತ 60 ಸಾವಿರಕ್ಕೂ ಹೆಚ್ಚು ಮುಸ್ಲಿಂ ಮತದಾರರಿದ್ದಾರೆ. ಚಿತ್ರದುರ್ಗ ವಿಧಾನಸಭಾ ಕ್ಷೇತ್ರದಲ್ಲೇ 40 ಸಾವಿರ ಮತಗಳಿವೆ. ಮಾಜಿ ಕೇಂದ್ರ ಮಂತ್ರಿ ಜಾಫರ್ ಶರೀಫರ ರಾಜಕೀಯ ಪ್ರಭಾವದಿಂದಾಗಿ ಮುಸ್ಲಿಮರು ಕೈ ಪಾರ್ಟಿಯ ಆಸ್ತಿಯಾದರು. ಈ ಹಿಂದೆ 1991ರಲ್ಲಿ ನೂರುಲ್ಲಾ ಶರೀಫ್ ಚಿತ್ರದುರ್ಗ ವಿಧಾನಸಭಾ ಕ್ಷೇತ್ರದಿಂದ ಕೈ ಪಾರ್ಟಿಯಿಂದ ಕಣಕ್ಕಿಳಿದಿದ್ದರು. ಆಗ ಜನತಾದಳದಿಂದ ಮಾಜಿ ಮಂತ್ರಿ ಏಕಾಂತಯ್ಯ ಕಣದಲ್ಲಿದ್ದರು. ಇಬ್ಬರ ನಡುವಿನ ಜಿದ್ದಾಜಿದ್ದಿನ ಚುನಾವಣೆಯಲ್ಲಿ ನೂರುಲ್ಲಾ ಕಡಿಮೆ ಅಂತರದಿಂದ ಸೋತರಾದರೂ ಏಕಾಂತಯ್ಯ ನಿಟ್ಟುಸಿರು ಬಿಡುವಂತೆ ಮಾಡಿದ್ದರು. ನೂರುಲ್ಲಾ ಶರೀಫ್ ಸಭ್ಯ-ಪ್ರಾಮಾಣಿಕ. ಪಾರ್ಟಿಯಿಂದ ಯಾವುದೇ ಸ್ಥಾನಮಾನ ಸಿಗದಿದ್ದರೂ ಪಾರ್ಟಿಯ ವಿರುದ್ಧ ಮಸಲತ್ತು ಮಾಡಿದವರಲ್ಲ. ನಾಯಕರ ಬಗ್ಗೆ ಅಸಮಾಧಾನವಿದ್ದರೂ ಎದುರುನಿಂತು ಜಗಳ ಕಾದವರಲ್ಲ. ಹಾಗೇ 2004ರ ಚುನಾವಣೆಯಲ್ಲಿ ಎಂ.ಕೆ.ತಾಜ್‌ಪೀರ್ ಚಿತ್ರದುರ್ಗ ವಿಧಾನಸಭಾ ಚುನಾವಣೆಗೆ ಕೈ ಪಾರ್ಟಿಯಿಂದ ನಿಂತವರು. ಆಗ ಬಿಜೆಪಿ ಹವಾ ಇತ್ತು, ಸಾಲದಕ್ಕೆ ತಿಪ್ಪಾರೆಡ್ಡಿಯ ಜಣಜಣ ಕಾಂಚಾಣದ ನದಿ ಹರಿದಿತ್ತು, ಸಾಲದಕ್ಕೆ ಧರ್ಮದ ಸನ್ನಿ ಹಿಡಿದಿತ್ತು. ಹಾಗಾಗಿ ತಾಜ್‌ಪೀರ್ ಪರಾಭವಗೊಂಡರು. ಈತನೂ ಪಾರ್ಟಿಯಲ್ಲಿ ಹಿರಿಯ ತಲೆಮಾರಿನವರೇ. ಹಾಗೇ ಶೇಷಣ್ಣ ಕುಮಾರ್, ಬಿ.ಜಿ. ಶ್ರೀನಿವಾಸ್, ಆರ್.ಕೆ.ನಾಯ್ಡು, ಮೈಲಾರಪ್ಪ, ಸೇತುರಾಂರಂತಹ ಹಿರಿಯರಿದ್ದರೂ ಶಂಕರ್‌ನಂಥಾ ಕಾಕಾ ಬಾರಿಸುವವನೇ ಯಾಕೆ ಬೇಕಾದ ಎನ್ನುವುದೇ ಆಂಜನೇಯರನ್ನು ಏಕಾಂಗಿಯಾಗಿಸಿದೆ.

ಹೆಚ್. ಹನುಮಂತಪ್ಪ


ಚಿತ್ರದುರ್ಗದಿಂದ ಕೂಗಳತೆ ದೂರದ ಗುಡ್ಡದರಂಗವ್ವನ ಹಳ್ಳಿಯ ಬಲಗೈ ಪಂಗಡದ ಹೆಚ್.ಹನುಮಂತಪ್ಪ ಚಿತ್ರದುರ್ಗ ಜಿಲ್ಲಾ ಕೈ ರಾಜಕಾರಣದ ದೊರೆಯಂಗೆ ಮೆರೆದವರು. ಇಂದಿರಾ ಗಾಂಧಿ ನಂತರ ರಾಜೀವ್ ಗಾಂಧಿಯವರ ನಿಕಟವರ್ತಿ ಆಗಿದ್ದಲ್ಲದೇ, ಆ ಮೂಲಕ ರಾಜ್ಯ ರಾಜಕಾರಣದಲ್ಲಿ ಪ್ರಭಾವಿಗಳಾಗಿದ್ದವರು. ಅಜಮಾಸು 18 ವರ್ಷ ರಾಜ್ಯಸಭಾ ಸದಸ್ಯರಾಗಿದ್ದವರು. 25 ವರ್ಷ ದುರ್ಗದಲ್ಲಿ ಕೈ ರಾಜಕಾರಣದಲ್ಲಿ ಮೇರುನಾಯಕ, ಪ್ರಶ್ನಾತೀತ ದೊರೆಯಾಗಿ ಮೆರೆದವರು. 25 ವರ್ಷಗಳಿಂದಲೂ ಚಿತ್ರದುರ್ಗದಲ್ಲಿ ಹನುಮಂತಪ್ಪನದೇ ಮಾತು. ಹಾಗೇ ಚಿತ್ರದುರ್ಗ ಜಿಲ್ಲೆಯಲ್ಲಿ ದಾವಣಗೆರೆ ಇದ್ದಾಗ ಆ ಭಾಗದಲ್ಲಿ ಹನುಮಂತಪ್ಪನವರಿಗೆ ಶಾಮನೂರು ಶಿವಶಂಕರಪ್ಪ ಕೂಡ ಪ್ರಶ್ನಾತೀತರಾಗಿದ್ದರು. ಈ ಇಬ್ಬರು ನಾಯಕರ ನಡುವೆ ಜಿಲ್ಲಾ ರಾಜಕಾರಣದ ಸಮನ್ವಯತೆ ಗಾಢವಾಗಿತ್ತು. ಇಂತಹ ಹನುಮಂತಪ್ಪ ರಾಜ್ಯಸಭಾ ಸದಸ್ಯತ್ವದಿಂದ ಮಾಜಿಯಾದ ನಂತರ್ಲ್ಲೇ ರಾಜ್ಯ ರೇಷ್ಮೆ ಮಂಡಳಿ ಅಧ್ಯಕ್ಷರಾದರು. ನಂತರ ಎಸ್ಸಿಎಸ್ಟಿ ನಿಗಮದ ಅಧ್ಯಕ್ಷರಾದರು. ಅದಕ್ಕೂ ಕಾರಣವಿತ್ತು, ಚಿತ್ರದುರ್ಗ ಜಿಲ್ಲಾದ್ಯಂತ ದಲಿತರ ಮತಗಳೇ ರಾಜಕೀಯ ನಿರ್ಣಾಯಕ ಮತಗಳಾಗುತ್ತಿದ್ದವು. ಹನುಮಂತಪ್ಪ ತಮ್ಮ ಹಿರಿಯ ಮಗ ಜಿ.ಹೆಚ್.ಮೋಹನರನ್ನು ರಾಜಕೀಯವಾಗಿ ಬೆಳೆಸಲಿಲ್ಲ, ಮೋಹನ್ ಕೂಡ ಕೈ ರಾಜಕಾರಣದ ಗರಡಿಶಾಲೆಯಲ್ಲಿ ಪಳಗಿದವರು. ಸದ್ಯದ ಪರಿಸ್ಥಿತಿಯಲ್ಲಿ ಮಂತ್ರಿ ಆಂಜನೇಯ, ಮೋಹನ್‌ರವರನ್ನಾದರೂ ನಿಗಮ ಮಂಡಳಿಗೆ ಪರಿಗಣಿಸಬಹುದಿತ್ತು.

ಅದೇನೇಯಿರಲಿ, ಚಿತ್ರದುರ್ಗ ಜಿಲ್ಲಾ ಕೈ ರಾಜಕೀಯ ಪಡಸಾಲೆಯಲ್ಲಿ ತಳಮಳವಿದೆ. 2018ರ ವಿಧಾನಸಭಾ ಚುನಾವಣೆ ಸಮೀಪಿಸುತ್ತಿರುವ ಈ ಸಂದರ್ಭದಲ್ಲಿ ಮಂತ್ರಿ ಆಂಜನೇಯ ತನ್ನ ಬಟ್ಟಂಗಿ ಶಂಕರ್‌ನ ಸೇವಾಕಾರಿಯಿಂದ ಎಡವಿದರಾ ಎನ್ನುವ ಅನುಮಾನ ಶುರುವಾಗಿದೆ. ಅಷ್ಟೇ ಅಲ್ಲ ಚಿತ್ರದುರ್ಗದ ಹಿರಿಯರೆಲ್ಲ ಈಗ ಆಂಜನೇಯನನ್ನು ಅನುಮಾನದಿಂದ ನೋಡುವಂತಾಗಿದೆ. ಆಂಜನೇಯ ಯಾರದೋ ಬಾಲಕ್ಕೆ ಬೆಂಕಿ ಇಡಲು ಹೋಗಿ ಕಾಂಗ್ರೆಸ್ ಬುಡಕ್ಕೇ ಕೊಳ್ಳಿ ಇಟ್ಟುಕೊಂಡರಾ? ಅನ್ನೋದು ಕೆಲವೇ ದಿನಗಳಲ್ಲಿ ಭುಗಿಲೇಳುವ ಭಿನ್ನಮತದಿಂದ ಬಯಲಾಗಲಿದೆ.

■ ಟಿ.ಎನ್. ಷಣ್ಮುಖಿ

ರಾಯಚೂರು

‘ಮದ್ಯ’ದ ಬಾದರ್ಲಿಗೆ ‘ಪಾನ ನಿಷೇಧ’ದ ಬಿಸಿ





ಮದ್ಯಪಾನ ನಿಷೇಧಕ್ಕೆ ಒತ್ತಾಯಿಸಿ ನಡೆದ ಪ್ರತಿಭಟನೆಯ ದೃಶ್ಯ

ಮದ್ಯಪಾನ ನಿಷೇಧ ಚಳವಳಿಗೆ ತನ್ನದೇ ಆದ ಇತಿಹಾಸವಿದೆ. ಮಹಿಳೆಯರು ತಮಗೆ ಸಿಗಬೇಕಾದ ನ್ಯಾಯಯುತ ಹಕ್ಕುಗಳಿಗೋಸ್ಕರ ಮಾಡಬೇಕಿದ್ದ ಹೋರಾಟದ ಶ್ರಮವನ್ನೆಲ್ಲ ಹಲವು ದಶಕಗಳಿಂದ ಮದ್ಯಪಾನ ನಿಷೇಧಕ್ಕೆ ಧಾರೆಯೆರೆಯುತ್ತಾ ಬರುವಂತಾದದ್ದು ವಿಪರ್ಯಾಸ. ಆದರೂ ಕರ್ನಾಟಕವನ್ನಾಳಿದ ಯಾವ ಸರ್ಕಾರಗಳು ಸಹ ಇಂತಹ ಜನಪರ ನಿಲುವು ತೆಗೆದುಕೊಳ್ಳಲು ಸಾಧ್ಯವಾಗಿಲ್ಲ. ಪ್ರತಿಸಲದಂತೆ ಈ ಬಾರಿಯೂ ಕರ್ನಾಟಕಕ್ಕೆ ಬರ ಅಪ್ಪಳಿಸಿದೆ. 139 ತಾಲ್ಲೂಕುಗಳು ಬರಪೀಡಿತ ಮತ್ತು 20 ತಾಲ್ಲೂಕುಗಳು ಪ್ರವಾಹಪೀಡಿತವೆಂದು ರಾಜ್ಯ ಸರ್ಕಾರವೇ ಘೋಷಿಸಿ ಕೇಂದ್ರಕ್ಕೆ ವರದಿ ಸಲ್ಲಿಸಿದೆ. ಇಂತಹ ದುಸ್ಥಿತಿಯಲ್ಲಿ ಬರಪೀಡಿತ ಜಿಲ್ಲೆ ರಾಯಚೂರಿನಲ್ಲಿ ಕಳೆದ ಎರಡು ಮೂರು ತಿಂಗಳಿನಿಂದ ಮದ್ಯಪಾನ ನಿಷೇಧ ಮಾಡಬೇಕೆಂದು ಒತ್ತಾಯಿಸಿ ಮದ್ಯಪಾನ ನಿಷೇಧ ಆಂದೋಲನ-ಕರ್ನಾಟಕ ವತಿಯಿಂದ ಮಹಿಳೆಯರು ಬೃಹತ್ ಪ್ರಮಾಣದ ಹೋರಾಟಕ್ಕೆ ಇಳಿದಿದ್ದಾರೆ. ದುರಂತವೆಂದರೆ, ಇತ್ತ ಈ ಜನರೆಲ್ಲ ಮದ್ಯಪಾನ ನಿಷೇಧಕ್ಕೆ ಹೋರಾಟ ನಡೆಸುತ್ತಿದ್ದರೆ ಅತ್ತ ಕರ್ನಾಟಕ ಸರ್ಕಾರ ಮತ್ತೆ 900 ಹೊಸ ಮದ್ಯದಂಗಡಿಗಳಿಗೆ ಪರವಾನಿಗಿ ನೀಡಿದೆ. ಇದರಿಂದ ನೊಂದ ಮಹಿಳೆಯರ ಸಿಟ್ಟಿನ ಕಟ್ಟೆಯೊಡೆದಿದ್ದು ಈ ಹೋರಾಟ ಪರಿಣಾಮಕಾರಿ ಕ್ರಮಗಳಿಗಾಗಿ ದಿಟ್ಟ ಹೆಜ್ಜೆಗಳನ್ನಿಟ್ಟಿದೆ.

ಐತಿಹಾಸಿಕ ಹೋರಾಟ

ರಾಯಚೂರು ಜಿಲ್ಲೆಯಲ್ಲಿ ಕಳೆದ ಎರಡು ಮೂರು ವರ್ಷಗಳಿಂದ ಬರ ಆವರಿಸಿದೆ. 2009ರಲ್ಲಿ ಇಲ್ಲಿನ ಅತಿವೃಷ್ಟಿ ಜನರ ಬದುಕನ್ನು ಅತಂತ್ರವಾಗಿಸಿದ್ದರೆ ಅದರ ನಂತರದಿಂದ ಸತತ ಬರ ಕಾಡುತ್ತಿದೆ. ಕಳೆದ ವರ್ಷ ಜಿಲ್ಲೆಯಲ್ಲಿ ಹತ್ತಿ ಬೆಳೆದ ರೈತರು ತೀವ್ರ ಸಂಕಷ್ಟಕ್ಕೆ ಸಿಲುಕಿಕೊಂಡಿದ್ದನ್ನು ಯಾರೂ ಮರೆತಿಲ್ಲ. ಕಳಪೆ ಬಿತ್ತನೆ ಬೀಜಗಳ ಕಾರಣಕ್ಕಾಗಿ ಜಿಲ್ಲೆಯಲ್ಲಿ ಸುಮಾರು 500 ಕೋಟಿ ಮೌಲ್ಯದ ಹತ್ತಿ ಬೆಳೆ ಬರಲಿಲ್ಲ. ಇದರಿಂದ ಹತ್ತಿ ಬಿತ್ತಿದ್ದ ರೈತರು ಸೇರಿದಂತೆ ಅದನ್ನು ನಂಬಿಕೊಂಡಿದ್ದ ಕೂಲಿಕಾರರು ತೀವ್ರ ನಷ್ಟಕ್ಕೊಳಗಾಗಿದ್ದರು. ಸಂಸಾರ ನಿಭಾಯಿಸುತ್ತಿದ್ದ ಮಹಿಳೆಯರ ಮೇಲೆ ಇಂತಹ ಸಂಕಷ್ಟಗಳು ಇನ್ನಷ್ಟು ಒತ್ತಡ ಉಂಟುಮಾಡಿದ್ದವು ಮತ್ತು ಮಾಡುತ್ತಲೇ ಇವೆ. ಆದಾಗ್ಯೂ ಸರ್ಕಾರದ ವತಿಯಿಂದ ಸಮಗ್ರ ಬರ ನಿರ್ವಹಣೆಯಾಗಲಿ, ವೈಜ್ಞಾನಿಕ ಬೆಳೆ ನಷ್ಟ ಪರಿಹಾರವಾಗಲಿ ಹಾಗೂ ಸಾಲಮನ್ನಾ ಸೌಲಭ್ಯವಾಗಲಿ ಸಿಗಲೇ ಇಲ್ಲ.

ಜಿಲ್ಲೆಯಲ್ಲಿ ಕುಡಿಯಲು ನೀರು ಇಲ್ಲದಿದ್ದರೂ ವೈನ್‌ಶಾಪ್‌ಗಳಲ್ಲಿ ಮದ್ಯ ವಿಪರೀತ ಪ್ರಮಾಣದಲ್ಲಿ ಬಿಕರಿಯಾಗುತ್ತಿದೆ. ಅಷ್ಟೇ ಅಲ್ಲ ಎಲ್ಲಾ ಜಿಲ್ಲೆಗಳಂತೆ ಇಲ್ಲಿಯೂ ಪ್ರತಿ ತಿಂಗಳು ಇಂತಿಷ್ಟು ಮದ್ಯ ಮಾರಲೇಬೇಕೆಂದು ಅಬಕಾರಿ ಇಲಾಖೆ ಮದ್ಯ ಮಳಿಗೆ/




ಬಾರ್‌ಗಳಿಗೆ ಟಾರ್ಗೆಟ್ ನಿಗದಿಮಾಡಿ ಒತ್ತಡ ಹೇರುತ್ತಾ ಬಂತು: ಹಾಗಾಗಿ ಪರವಾನಗಿ ಪಡೆದಿದ್ದ ಕೆಲವೇ ಕೆಲವು ಮದ್ಯದಂಗಡಿಗಳು ತಮ್ಮ ಟಾರ್ಗೆಟ್ ಪೂರ್ಣಗೊಳಿಸಲು ಪ್ರತಿ ಊರಿಗೂ ಕಾನೂನುಬಾಹಿರವಾಗಿ ಮದ್ಯ ಸರಬರಾಜು ಮಾಡಿ ಗೂಡಂಗಡಿ, ಚಿಕ್ಕಚಿಕ್ಕ ಕಿರಾಣಿ ಅಂಗಡಿಗಳಲ್ಲೆಲ್ಲಾ ಮದ್ಯ ಮಾರಾಟ ಆರಂಭವಾಗುವಂತೆ ಮಾಡಿವೆ. ದಿನೇದಿನೇ ಹೆಚ್ಚುತ್ತಿರುವ ಮದ್ಯ ಮಾರಾಟ ಇಲ್ಲಿನ ಮಹಿಳೆಯರ ಜೀವನವನ್ನು ಹಿಂಡಿ ಹಿಪ್ಪೆ ಮಾಡುತ್ತಿದೆ. ತಿನ್ನಲು ಕೂಳಿಲ್ಲದಿದ್ದರೂ ದುಡಿದುದ್ದೆಲ್ಲವನ್ನು ಮದ್ಯದಂಗಡಿಗೆ ಸುರಿದು ಕಂಠಪೂರ್ತಿ ಕುಡಿದುಬಂದು ಮಹಿಳೆಯರ ಮೇಲೆ ದೌರ್ಜನ್ಯ ನಡೆಸುವುದು, ಬೀದಿಯಲ್ಲಿ ಗಲಾಟೆ ಮಾಡುವುದು ಗಂಡಸರ ಕಾಯಂ ಕಾಯಕದಂತಾಗಿರೋದು ಮಹಿಳೆಯರಲ್ಲಿ ಸಿಟ್ಟು, ನೋವು ಮತ್ತು ಹತಾಶೆ ಮೂಡಿಸಿದೆ. ಮಹಿಳೆಯರ ಈ ನೋವು ಅರ್ಥಮಾಡಿಕೊಂಡ ಜಿಲ್ಲೆಯ ನವಜೀವನ ಮಹಿಳಾ ಒಕ್ಕೂಟ, ಜಾಗೃತ ಮಹಿಳಾ ಸಂಘಟನೆಯಂತಹ ಸಂಘಟನೆಗಳು ಒಂದುಗೂಡಿ ಜಿಲ್ಲೆಯ ಎಲ್ಲಾ ಹಳ್ಳಿಗಳಲ್ಲಿ ಸಂಚರಿಸಿ ಮಹಿಳಾ ಸ್ವ-ಸಹಾಯ ಸಂಘಗಳನ್ನು ಸಂಘಟಿಸಿ "ಮದ್ಯಪಾನ ನಿಷೇಧ ಆಂದೋಲನ- ಕರ್ನಾಟಕ" ಎನ್ನುವ ಬೃಹತ್ ಒಕ್ಕೂಟವನ್ನು ಕಟ್ಟಿದ್ದರು. ಈ ಒಕ್ಕೂಟದ ಮೂಲಕ ಸಂಪೂರ್ಣ ಮದ್ಯಪಾನ ನಿಷೇಧಕ್ಕೆ ಒತ್ತಾಯಿಸಿ ಅಕ್ಟೋಬರ್ 2ರ ಗಾಂಧಿ ಜಯಂತಿಯ ದಿನ ರಾಯಚೂರಿನಲ್ಲಿ 30 ರಿಂದ 40 ಸಾವಿರ ಮಹಿಳೆಯರು ಸೇರಿ ಬೃಹತ್ ಮೆರವಣಿಗೆ ನಡೆಸಿ ನಗರದ ಎಪಿಎಂಸಿ ಮೈದಾನದಲ್ಲಿ ಐತಿಹಾಸಿಕ ಆಂದೋಲನ ನಡೆಸಿದ್ದರು. ಜಿಲ್ಲೆಯ ಬಹಳಷ್ಟು ಹಳ್ಳಿಯ ಮಹಿಳೆಯರು ಈ ಹೋರಾಟದಲ್ಲಿ ಭಾಗವಹಿಸಿ ತಮ್ಮ ಆಕ್ರೋಶ ಹೊರಹಾಕಿದ್ದರು. ಹೆಂಡ ಬೇಡ - ಶಿಕ್ಷಣ ಬೇಕು, ಬಾರ್ ಬೇಡ - ನೀರು ಬೇಕು, ಡ್ರಿಂಕ್ಸ್ ಬೇಡ - ಆರೋಗ್ಯ ಬೇಕು, ಮದ್ಯ ಮಳಿಗೆ ಬೇಡ- ಭೂಮಿ ಬೇಕೆಂಬ ಘೋಷಣೆಗಳು ಮುಗಿಲು ಮುಟ್ಟಿದ್ದವು.

ಉರಿಯುವ ಬೆಂಕಿಗೆ ತುಪ್ಪ ಸುರಿದ ಸರ್ಕಾರ

ಮದ್ಯಪಾನದಿಂದ ಉಂಟಾಗುವ ದುಷ್ಪರಿಣಾಮಗಳ ಬಗ್ಗೆ ವಿವರಿಸಿ ಹೋರಾಟ ನಡೆಸುತ್ತಿರುವ ಮದ್ಯಪಾನ ನಿಷೇಧ ಆಂದೋಲನದಿಂದ ಈ ಬಾರಿಯ ಬೆಳಗಾವಿ ವಿಧಾನಸಭಾ ಅಧಿವೇಶನದಲ್ಲಿಯೂ ತಮ್ಮ ಮನವಿ ಪತ್ರ ನೀಡಿ ನಿಷೇಧಕ್ಕೆ ಒತ್ತಡ ತರುವ ಪ್ರಯತ್ನ ಮಾಡುತ್ತಿದ್ದರೆ ಸರ್ಕಾರ ಅದೇ ಅಧಿವೇಶನದಲ್ಲಿ ರಾಜ್ಯದಲ್ಲಿ 900 ಹೊಸ ಮದ್ಯದಂಗಡಿಗಳನ್ನು ತೆರೆಯಲು ಪರವಾನಗಿ ನೀಡಿದೆ. ಹೊಸದಾಗಿ ಜಿಲ್ಲೆಯ ಎಂಎಸ್‌ಐಎಲ್ ಅಧ್ಯಕ್ಷನಾದ ಸಿಂಧನೂರು ಕ್ಷೇತ್ರದ ಶಾಸಕ ಹಂಪನಗೌಡ ಬಾದರ್ಲಿ ಇದರಿಂದ ತುಂಬಾ ಖುಷಿಯಾಗಿದುದ್ದಲ್ಲದೇ ಈ ನಿರ್ಧಾರವನ್ನು ಬಹಿರಂಗವಾಗಿಯೇ ಸ್ವಾಗತಿಸಿದ್ದಾನೆ. ಯಾಕೆಂದರೆ ಪ್ರತಿ ಮಳಿಗೆಯ ಪರವಾನಗಿ ನೀಡುವಾಗಲೂ ಲಕ್ಷಲಕ್ಷ ಹಣ ಕಮಿಷನ್ ಸಿಗುವುದಲ್ಲದೇ ತಮ್ಮ ಚೇಲಾಗಳಿಗೆ ಬೇಕಾದಷ್ಟು ಮಳಿಗೆಗಳನ್ನು ನೀಡಿ ಅವುಗಳನ್ನು ಮತ್ತೆ ಬೇರೆಯವರಿಗೆ ಸಬ್ ಕಾಂಟ್ರಾಕ್ಟ್ ನೀಡಿ ಲಾಭ ಮಾಡಿಕೊಳ್ಳಲು ಆತ ತಯಾರಾದಂತಿದೆ. ಇದು ಮಹಿಳಾ ಸಂಘಟನೆಗಳ ಸಿಟ್ಟನ್ನು ಹೆಚ್ಚಿಸಿ ಉರಿಯುವ ಬೆಂಕಿಗೆ ತುಪ್ಪ ಸುರಿದಂತಾಗಿದೆ. ಕೂಡಲೇ ಎಚ್ಚೆತ್ತ ಮಹಿಳೆಯರು ಡಿಸೆಂಬರ್ 1 ರಂದು ಸಿಂಧನೂರಿನ ಶಾಸಕ ಕಮ್ ಎಂಎಸ್‌ಐಎಲ್ ಅಧ್ಯಕ್ಷ ಹಂಪನಗೌಡ ಬಾದರ್ಲಿಯ ಮನೆಗೆ ಮುತ್ತಿಗೆ ಹಾಕಿ ಸರ್ಕಾರದ ಈ ಜನವಿರೋಧಿ ನಿರ್ಧಾರವನ್ನು ವಾಪಸ್ ತೆಗೆದುಕೊಳ್ಳಬೇಕೆಂದು ಮತ್ತು ಸಂಪೂರ್ಣವಾಗಿ ಮದ್ಯಪಾನ ನಿಷೇಧ ಮಾಡಬೇಕೆಂದು ಒತ್ತಾಯಿಸಿದ್ದಾರೆ.





ಡಿಸೆಂಬರ್ 1ರಂದು ಮದ್ಯಪಾನ ನಿಷೇಧ ಆಂದೋಲನದ ಮಹಿಳೆಯರು ತನ್ನ ಮನೆಗೆ ಮುತ್ತಿಗೆ ಹಾಕುವುದನ್ನು ತನ್ನ ಮಾಧ್ಯಮ ಚೇಲಾಗಳ ಮೂಲಕ ತಿಳಿದುಕೊಂಡ ಹಂಪನಗೌಡ ಪ್ರತಿಭಟನೆಗೆ ಅವಕಾಶ ನೀಡದಂತೆ ಪೊಲೀಸರಿಗೆ ಸೂಚಿಸಿ ಮನೆಯ ಸುತ್ತ ಪೊಲೀಸ್ ಸರ್ಪಗಾವಲು ಹಾಕಿಸಿಕೊಂಡಿದ್ದ. ಅಂದು ಪೊಲೀಸರು ಮತ್ತು ಮಹಿಳೆಯರ ನಡುವೆ ಒಂದು



ಗಂಟೆಗೂ ಹೆಚ್ಚು ಕಾಲ ಮಾತಿನ ಚಕಮಕಿ ನಡೆದು ಕೊನೆಗೆ ಮಹಿಳೆಯರ ನೈತಿಕ ಶಕ್ತಿಯೇ ಜಯ ಪಡೆದುದ್ದರಿಂದ ಶಾಸಕನ ಮನೆ ಮುಂದೆಯೇ ಹೋರಾಟ ನಡೆಸುವಲ್ಲಿ ಸಫಲರಾಗಿದ್ದರು.

ಸಮಾಜದಲ್ಲಿ ಶಾಂತಿ, ಸುವ್ಯವಸ್ಥೆ ಮತ್ತು ಸೌಹಾರ್ದತೆ ನೆಲೆಸಬೇಕೆಂಬ ಆಶಯ ಸರ್ಕಾರಕ್ಕಿದ್ದಲ್ಲಿ ಅದು ಮದ್ಯಪಾನ ನಿಷೇಧವನ್ನು ಆದ್ಯತೆಯಾಗಿ ಪರಿಗಣಿಸಬೇಕೆಂಬುದು ಮದ್ಯಪಾನ ನಿಷೇಧ ಆಂದೋಲನ - ಕರ್ನಾಟಕ ಸಂಚಾಲಕಿಯೊಬ್ಬರಲ್ಲಾದ ವಿದ್ಯಾ ಪಾಟೀಲ್‌ರ ಅಭಿಮತವಾಗಿದೆ. ಇಂದು ದೇಶಾದ್ಯಂತ ದಿನೇದಿನೇ ಹೆಚ್ಚುತ್ತಿರುವ ಮಹಿಳೆಯರು ಮತ್ತು ಮಕ್ಕಳ ಮೇಲಿನ ಹಿಂಸೆ, ಅತ್ಯಾಚಾರ, ಕೊಲೆ ಸುಲಿಗೆಗಳಿಗೆ ಮದ್ಯಪಾನವೇ ಪ್ರಮುಖ ಕಾರಣವಾಗುತ್ತಿರುವುದನ್ನು ಕಂಡೂ ಸಹ ಮದ್ಯಪಾನ ನಿಷೇಧಕ್ಕೆ ಮುಂದಾಗದೇ ಸರ್ಕಾರ ಹೊಸದಾಗಿ 900 ಮಳಿಗೆಗಳಿಗೆ ಪರವಾನಗಿ ಕೊಡುತ್ತಿರುವುದು ಆತ್ಮವಂಚನೆಯ ಕೆಲಸ ಎಂದು ಟೀಕಿಸಿರುವ ಅವರು ಬರದಿಂದ ರೈತರು ಒಂದು ಕಡೆ ಆತ್ಮಹತ್ಯೆ

⏭ 07








ಶಿವಮೊಗ್ಗ: ಕಾಗೋಡು ಕಸರತ್ತು; ಕಾಂಗ್ರೆಸ್‌ಗೆ ಆಪತ್ತು!

ಶಿವಮೊಗ್ಗ ಜಿಲ್ಲೆಯಲ್ಲಿ ಅಧಿಕಾರಾರೂಢ ಕಾಂಗ್ರೆಸ್ ಪಕ್ಷ ನಾವಿಕನಿಲ್ಲದ ದೋಣಿಯಂತೆ ಹೊಯ್ದಾಡುತ್ತಿದೆ. ಕಾಂಗ್ರೆಸ್‌ನ ದುಃಸ್ಥಿತಿಗೆ ಅದರ ಸಾರಥ್ಯ ವಹಿಸಿರುವ ಜಿಲ್ಲಾ ಮಂತ್ರಿ ಕಾಗೋಡು ತಿಮ್ಮಪ್ಪನವರೇ ಎಂಬುದು ವಿಚಿತ್ರವಾದರೂ ಸತ್ಯ! ಅತ್ತೂ ಕರೆದು ಮಂತ್ರಿಯಾದ ವಯೋವೃದ್ಧ 'ನೇತಾಜಿ' ಕಾಗೋಡು ತಿಮ್ಮಪ್ಪಗೆ ಅದ್ಯಾಕೋ ತನ್ನ ಸ್ಥಾನಮಾನಕ್ಕೆ ಕಾರಣವಾದ ಪಕ್ಷದ ಕೋಟೆ ಗಟ್ಟಿಮುಟ್ಟಾಗಿ ಕಟ್ಟಬೇಕೆಂಬ ಕೆಚ್ಚೇ ಇಲ್ಲದಾಗಿದೆ. ಇದು ವಯೋಸಹಜ ದೌರ್ಬಲ್ಯವೋ ಅಥವಾ ಉದಾಸೀನವೋ ಎಂಬ ನಿಷ್ಠಾವಂತ ಕಾಂಗ್ರೆಸಿಗರ ಜಿಜ್ಞಾಸೆಗೆ ಖುದ್ದು ಕಾಗೋಡುಜೀ ಬಳಿಯೇ ಉತ್ತರವಿಲ್ಲದಾಗಿದೆ. ಕಾಗೋಡರಲ್ಲಿದ್ದ ಸಮಾಜವಾದಿ ಹೋರಾಟಗಾರ ಮಕಾಡೆ ಮಲಗಿ ಅದ್ಯಾವುದೋ ಕಾಲವಾಗಿ ಹೋಗಿದೆ; ಈಗೇನಿದ್ದರೂ ಆತನದು ಒಂಥರಾ ನೈಚ್ಯಾನುಸಂಧಾನದಂಥ ರಾಜಕಾರಣ!


ಹಾಗೆ ನೋಡಿದರೆ ಕಾಗೋಡು ರಾಜಕೀಯ ಪಡಸಾಲೆಯಲ್ಲಿ ಒಂದು ನೆಲೆಯಂಥ ಕಂಡಿದ್ದೇ ಬೆಂಕಿ ನವಾಬನಂತಿದ್ದ 'ಬಂ' ಎದುರಾಳಿ ಎಂಬ ಏಕೈಕ ಕ್ಯಾಲಿಬರ್‌ನಿಂದ! ಜಿಲ್ಲೆಯ ಸ್ವ-ಜಾತಿ ದೀವರ (ಈಡಿಗರ) ಸಮುದಾಯದಲ್ಲೂ ಬಂ-ಕಾತಿ ಹಾವು- ಮುಂಗುಸಿಯಂತೆ ಕಿತ್ತಾಡುತ್ತಲೇ ಬಂದವರು. ಒಂದು ಹಂತದಲ್ಲಿ 'ಬಂ' ಇಡೀ ರಾಜ್ಯದ ಈಡಿಗರ ನಾಯಕಾಗ್ರೇಸನಾಗಿ ಅವತರಿಸಿದ್ದರೆ, ಈ ಕಾಗೋಡರಿಗೆ ಶಿವಮೊಗ್ಗೆಯ ದೀವರನ್ನೇ ಸೆಳೆಯಲಾಗಲಿಲ್ಲ. ಆದರೆ ಪಕ್ಷಗಳನ್ನು ಕಟ್ಟುವ-ಕೆಡವುವ ಭಂಜಕ ರಾಜಕಾರಣದ 'ಬಂ' ಹೋದಲ್ಲೆಲ್ಲ ಬಹುಬೇಗ ಚಿರಭಿನ್ನಮತೀಯನಾಗಿ ಬಿಡುತ್ತಿದ್ದರು. 'ಬಂ'ರಿಂದ ಡ್ಯಾಮೇಜು ಮಾಡಿಸಿಕೊಂಡು ಪಕ್ಷದ ಪ್ರಭೃತಿಗಳೆಲ್ಲ ಕಾಗೋಡರನ್ನು ಮುಂದಿಟ್ಟುಕೊಂಡು ಆತನ ನಿಭಾಯಿಸಲು ಹವಣಿಸುತ್ತಿದ್ದರು. ಈ ಸಂಘರ್ಷದಲ್ಲಿ ಕಾಗೋಡು ತನಗರಿವಿಲ್ಲದೆ ಅಧಿಕಾರ ರಾಜಕಾರಣದ ಆಯಕಟ್ಟಿನ ಜಾಗಕ್ಕೆ ಬಂದು ಕೂತುಬಿಡುತ್ತಿದ್ದರು.


ಚಿತ್ರ-ವಿಚಿತ್ರ ಸಂದರ್ಭಗಳ ಪಿತೂರಿಯಲ್ಲಿ ಮಿಂಚತೊಡಗಿದ್ದ ಕಾಗೋಡು ಇದ್ದಕ್ಕಿದ್ದಂತೆಯೇ ಸತತ ಎರಡು ಬಾರಿ ಸಾಗರ ಅಸೆಂಬ್ಲಿ ಕ್ಷೇತ್ರದಲ್ಲಿ ಹೀನಾಯವಾಗಿ ಸೋತು ಸೊರಗಿಹೋದರು. ಅದೂ ತನ್ನದೇ ಸಹೋದರಿಯ ಕುಲಪುತ್ರ ಬೇಳೂರು ಗೋ-ಪಾಲ-ಕೃಷ್ಣನೆಂಬ ಪಡ್ಡೆಗೆ ಶರಣಾಗಬೇಕಾಗಿ ಬಂದಿದ್ದು ಕಾಗೋಡುಗೆ ಸಂಕಷ್ಟವನ್ನು ದುಪ್ಪಟ್ಟುಗೊಳಿಸಿಬಿಟ್ಟಿತ್ತು! ಮೊದಲ ಬಾರಿ ಕಾಗೋಡು ಅಳಿಯನಿಗೆ ಮಣಿಯಬೇಕಾಗಿ ಬಂದಿದ್ದರ ಹಿಂದೆ ಆಜನ್ಮ ವೈರಿ 'ಬಂ'ರ ಚಮತ್ಕಾರ ಅಡಗಿತ್ತು! ತನ್ನ ಕುಟುಂಬ 'ರಾಜಕಾರಣ'ದಲ್ಲಿ ಕೈಯಾಡಿಸಿ 'ಉದ್ಧಟ' ಮಗ ಕುಬಂಗೆ ಕಾಗೋಡು ಗಾಳಿ ಹಾಕುತ್ತಿದ್ದುದು 'ಬಂ'ರನ್ನು ಕೆರಳಿಸಿತ್ತು. ಸೇಡು ತೀರಿಸಿಕೊಳ್ಳುವ ಹಠಕ್ಕೆ ಬಿದ್ದ 'ಬಂ' ಕಾಗೋಡರ ಸಹೋದರಿಯ ಮಗನನ್ನೇ ಆತನ ವಿರುದ್ಧ ಎತ್ತಿಕಟ್ಟಿ ಅಖಾಡಕ್ಕೆ ಛೂಬಿಟ್ಟುಬಿಟ್ಟರು. ಈ ಆಟದಲ್ಲಿ 'ಬಂ' ಯಶಸ್ವಿಯೂ ಆದರು. ಆನಂತರ ಥೇಟ್ 'ಬಂ'ರಂತೆಯೇ ಬಣ್ಣ-ಬಣ್ಣದ ಮಿರುಗುವ ಅಂಗಿ ತೊಟ್ಟುಕೊಂಡು-ತಂಪು ಕನ್ನಡ ಹಾಕಿಕೊಂಡು ಗಿಲಿ-ಗಿಲಿ ರಾಜಕಾರಣ ಮಾಡುತ್ತಹೋದ ಬೇಳೂರು ಗೋಪು ಯುವಸಮೂಹಕ್ಕೆ ಹತ್ತಿರಾಗಿಬಿಟ್ಟ! ಸುಖಾಸುಮ್ಮನೆ ಕಂಡ-ಕಂಡವರ ಮೇಲೆ ರೇಗಾಡುವ ವಿಕ್ಷಿಪ್ತ ಕಾಗೋಡರಿಗಿಂತ ಸೋಗಲಾಡಿ ಗೋಪು 'ಬೆಟರ್' ಆಗಿ ಜನರಿಗೆ ಕಾಣಿಸಿದ. ಹೀಗಾಗಿ ಎರಡನೇ ಸಲ 'ಬಂ' ಬಲ ಇಲ್ಲದೆಯೂ ಮಾವನ ಸೋಲಿಸಿ ಅಸೆಂಬ್ಲಿಗೆ ಗೋಪು ಪ್ರವೇಶ ಪಡೆದುಕೊಂಡ!


ಕಾಗೋಡು ಅಣ್ಣಾಜಿ


ನಂದಿನಿ

ಕಳೆದ ವಿಧಾನಸಭೆ ಎಲೆಕ್ಷನ್ ಹೊತ್ತಿಗೆ ಗೋಪು 'ಸ್ವಯಂಕೃತಾಪರಾಧ'ಗಳ ಮಹಿಮೆಯಿಂದ ಬಣ್ಣಗೆಟ್ಟಿದ್ದ. ಸಿಎಂ ಆಗಿದ್ದ ಉರಿಮುಸುಡಿನ ಯಡ್ಡಿಗೇ ತಿರುಗಿಬಿದ್ದು ರಾಜ್ಯವ್ಯಾಪ್ತಿ ಪ್ರದಲ್ಲಿ ಕಳಾಯಿಸಿದ್ದ ಭಿನ್ನಮತೀಯರಲ್ಲೇ ಈ ಗೋಪು ತನ್ನ ವಿಚಿತ್ರ ಮ್ಯಾನರಿಸಮ್‌ಗಳಿಂದ ಎದ್ದು ಕಾಣಿಸುತ್ತಿದ್ದ! ಯಡ್ಡಿಯ ಏಟಿಗೆ ತತ್ತರಿಸಿಹೋದ ಗೋಪು ಮತ್ತವನ ಗೆಳೆಯರ ಪಡೆ ಶಾಸಕತ್ವ ಕಳಕೊಂಡು ನಾಲ್ಕಾರು ತಿಂಗಳು ತ್ರಿಶಂಕುಸ್ವರ್ಗದಲ್ಲಿ ನೇತಾಡಿದ್ದು ಚೆಡ್ಡಿ ಇತಿಹಾಸದಲ್ಲಿ ದಾಖಲಾಗಿ ಹೋಗಿದೆ! ಮಂತ್ರಿಯಾಗದಿದ್ದರೆ ತಾನು ಸತ್ತೇಹೋಗ್ತೇನೆಂಬಂತೆ ವಿಕಾರವಾಗಿ ಹಲುಬುತ್ತ ಹಾರಾಡುತ್ತಿದ್ದ ಗೋಪುನ ಗಲೀಜು ರಾಜಕಾರಣಕ್ಕೆ ಇಡೀ ಸಾಗರವೇ ಹೇಸಿಹೋಯ್ತು. ಇದೇ ಹೊತ್ತಿಗೆ ಕಾಗೋಡು "ನನಗಿದು ಕೊನೆಯ ಅವಕಾಶ... ಇದೊಂದು ಬಾರಿ ಗೆಲ್ಲಿಸಿ..." ಎಂದು ಅಂಗಲಾಚಿದ್ದು ಮತದಾರರ ಮನ ಒಲಿಸಿತೋ ಇಲ್ಲವೋ? ಆದರೆ ಗೋಪು ಬಗೆಗಿದ್ದ ಸಾಗರ ಜನರ ಸಿಟ್ಟು ಮತ್ತು ಯಡ್ಡಿ ಒಡೆದು ಹಾಕಿದ ಚೆಡ್ಡಿ ಬಳಗದ ಮತದ ಗಂಟು ಕಾಗೋಡರಿಗೆ ನೆರವಾಯ್ತು. ಹಾಗೆ ಗೆದ್ದು ಶಾಸಕನಾದ ಕಾಗೋಡು ಅಧಿಕಾರಕ್ಕೇರಿದ್ದ ಕಾಂಗ್ರೆಸ್‌ನ ಮುತ್ಸದ್ದಿ ಮುದುಕರಲ್ಲೇ ಮುಂದಿದ್ದರು. ಆದರೆ ಸಿದ್ದು ಅದ್ಯಾವ ಲೆಕ್ಕಾಚಾರ ಹಾಕಿ ಆತನಿಗೆ ಸ್ಪೀಕರ್‌ನಂಥ ಡಮ್ಮಿ ಪೀಠಕ್ಕೆ ಗಂಟು ಹಾಕಿದ್ದರೋ?!


ಬೇಳೂರು ಗೋಪಾಲಕೃಷ್ಣ



ಹರತಾಳು ಹಾಲಪ್ಪ

ಅನಿವಾರ್ಯವಾಗಿ ಸ್ಪೀಕರ್ ಸ್ಥಾನ ಒಪ್ಪಿಕೊಂಡಿದ್ದ ಕಾಗೋಡರ ಅತೃಪ್ತ ಆತ್ಮ ಕನಲಿಬಿಟ್ಟಿತು. ಮಂತ್ರಿಯಾಗುವ ತೆವಲು ಹೆಚ್ಚಾಗುತ್ತಲೇ ಹೋಯಿತು. ತಾನು ಮಂತ್ರಿಯಾದರಷ್ಟೇ ಬಗರ್ ಹುಕುಂ ರೈತರಿಗೆ ನ್ಯಾಯ ಸಿಗುತ್ತದೆಂಬಂತೆ ಥಕಧಿಮಿ ಕುಣಿದ ಕಾಗೋಡು ಅವಕಾಶ ಸಿಕ್ಕಾಗೆಲ್ಲ ಸಿಎಂ ಸಿದ್ದು ಮತ್ತವರ ಮಂತ್ರಿ ಸರ್ಕಾರವನ್ನೆಲ್ಲ ಹೀಯಾಳಿಸಿ-ಮೂದಲಿಸಿ ಸುಖಿಸತೊಡಗಿದರು. ಕೊನೆಗೆ ಸಿಎಂ ಸಿದ್ದುಗೆ ಹಿರಿಯ ಜೀವ ಕಾಗೋಡರ ವಿರಹವೇದನೆ ಅರ್ಥವಾಗಿರಬೇಕು. ಆತನ ಮಂತ್ರಿ ಮಾಡಿದರು; ಅಪೇಕ್ಷೆಯ ಕಂದಾಯ ಖಾತೆಯ ಯಜಮಾನಿಕೆಯೇ ವಹಿಸಿದರು. ಆದರೆ ಕಾಗೋಡರ ದೂರದೃಷ್ಟಿದೋಷ ವಾಸಿಯಾಗಲೇ ಇಲ್ಲ. ಬರೀ ಬಗರ್ ಹುಕುಂದಾರರ ಮಂತ್ರಿಯಾಗಿ ಹೋದರು. ತನ್ನ ಬಳಿ ಸಮಸ್ಯೆ ಹೊತ್ತುಕೊಂಡು ಬರುವವರ ಮುಖ-ಮೂತಿ ನೋಡದೆ ಬೈದು ಅಟ್ಟತೊಡಗಿದರು. ಕಾರ್ಯಕರ್ತರ ಕಷ್ಟ-ಸುಖ ವಿಚಾರಿಸುವ ಗೋಜಿಗೆ ಹೋಗಲಿಲ್ಲ, ಅಧಿಕಾರಿಗಳ ಕಂಡಾಗ ಬೈದರೇ ಹೊರತು ಕಳ್ಳ ಅಧಿಕಾರಿಗಳ ಜನಪರವಾಗಿ ಪಳಗಿಸುವ ಪ್ರಯತ್ನ ಮಾಡಲಿಲ್ಲ. ಕಂದಾಯ ಇಲಾಖೆಯ ತಿಗಣೆಗಳು ಜನರ ಜೀವ ಹಿಂಡೋದು ನಿಲ್ಲಲೇ ಇಲ್ಲ.

ಕಾನೂನು ಮಂತ್ರಿಯಾದನಂತರ ಶಿವಮೊಗ್ಗೆಯ ಕಾಂಗ್ರೆಸ್ ಕತೆಯಂತೂ ಹೇಳತೀರದಾಯ್ತು! ಕಿಮ್ಮನೆ ರತ್ನಾಕರ ಎಂಬ ಪಾಪದ ಪ್ರಾಣಿಯ ಸಚಿವಗಿರಿ ಕಾಲಕೀರ್ತಿಯಲ್ಲಿ ಲಕ್ವಾ ಹೊಡೆದಿದ್ದ ಕಾಂಗ್ರೆಸ್‌ಗೆ ಕಾಗೋಡರಿಂದ ಕಾಯಕಲ್ಪ ಆಗಲೇ ಇಲ್ಲ. ಕಾಗೋಡು ಕಾಂಗ್ರೆಸ್ ಕಟ್ಟುವುದಿರಲಿ, ಆತನ ನಡೆ-ನುಡಿ ನಿಧಾನಕ್ಕೆ ಜಿಲ್ಲಾ ಕಾಂಗ್ರೆಸನ್ನು ಕೆಡವುತ್ತಿದೆ! ಕಾಂಗ್ರೆಸ್‌ನವರೆಂದರೆ ಒಂಥರಾ ಅಲರ್ಜಿಯಂತಾಡುವ ಕಾಗೋಡು ಬಿಜೆಪಿಯ ಯಡ್ಡಿ, ಈಶ್ವರಿ, ಜೆಡಿಎಸ್‌ನ ಮಧು ಬಂಗಾರಪ್ಪನಂಥ ವಿರೋಧ ಪಕ್ಷದವರೆಂದರೆ ಅನ್ಯೋನ್ಯ-ಆಪ್ಯಾಯಮಾನ! ಕಾಂಗ್ರೆಸ್‌ನ ಅನಾದಿಕಾಲದ ನಿಷ್ಠಾವಂತರಿಗೆ ಅದೆಷ್ಟೇ ತೊಂದರೆಯಾದರೂ ಕೇರ್ ಮಾಡದ ಕಾಗೋಡು ಕ್ಷಣಾರ್ಧದಲ್ಲಿ ಯಡ್ಡಿ-ಮಧು ಏನು ಹೇಳಿದರೂ ತಥಾಸ್ತು ಅನ್ನುತ್ತಾರೆ. ಇವತ್ತಿಗೂ ಕಾಗೋಡರಿಗೆ ಬಿಜೆಪಿಯ ಯಡ್ಡಿ ಎಂದರೆ ಅದೆಂಥದೋ ಸೆಳೆತ. ಯಡ್ಡಿ ಈ ರಾಜ್ಯದ ಸಿಎಂ ಆಗಬೇಕೆಂದು ಆತ ಕಂಡ-ಕಂಡಲ್ಲಿ ಸಾರ್ವಜನಿಕವಾಗೇ ಹಾರೈಸುತ್ತಾರೆ. ಅತ್ತ ಸೊರಬಕ್ಕೆ ಹೋದರೆ ಮಧುನಂಥ ಡೈನಮಿಕ್ ಹುಡುಗರು ಬೆಳೆಯಬೇಕು ಎಂದು ಹುರಿದುಂಬಿಸುತ್ತಾರೆ. ಯಡ್ಡಿ ಮಗ ಶಿಕಾರಿಪುರದ ಶಾಸಕ ರಾಘವೇಂದ್ರ ಏನು ಕೇಳಿದರೂ ಜಿಲ್ಲಾ ಮಂತ್ರಿಯಾಗಿ ಕಾಗೋಡು ಇಲ್ಲ ಎಂದಿದ್ದೇ ಇಲ್ಲ, ಅಷ್ಟು ಉದಾರಿ ಈ ಕಾಂಗ್ರೆಸ್ ಮಂತ್ರಿವರ್ಯ!

ಕಾಗೋಡರ ಕರಾಮತ್ತಿಗೆ ಸೊರಬ-ಶಿಕಾರಿಪುರದ ಕಾಂಗ್ರೆಸಿಗರಷ್ಟೇ ಅಲ್ಲ, ಇಡೀ ಜಿಲ್ಲೆಯ ಕಾಂಗ್ರೆಸ್ಸೇ ಕಂಗಾಲಾಗಿಕೂತಿದೆ. ಶಿಕಾರಿಪುರದ ಕಾಂಗ್ರೆಸಿಗರಂತೂ ಯಡ್ಡಿ-ರಾಘವೇಂದ್ರರಿಗೆ ಕಾಗೋಡು ಕಿಮ್ಮತ್ತು ಕೊಡುವ ರೀತಿ-ನೀತಿಗೆ ಕೆರಳಿ ಕೆಂಡವಾಗಿದ್ದಾರೆ; ಮಂತ್ರಿ ವಿರುದ್ಧ ಬಂಡೇಳಲು ಸಮಯ ಕಾಯುತ್ತಿದ್ದಾರೆ. ಸೊರಬದ ಕುಬಂ ಈಗಾಗಲೇ ಕಾಗೋಡರ ಕಾರ್ಯವೈಖರಿ ವಿರುದ್ಧ ಪಕ್ಷಕ್ಕೆ ಧಕ್ಕೆ ಮಾಡುವ ಆತನ ವಿರೋಧ ಪಕ್ಷದವರೊಂದಿಗಿನ ಅನೈತಿಕ ಮೈತ್ರಿ ಬಗ್ಗೆ ಸಿಎಂ ಮತ್ತು ಕೆಪಿಸಿಸಿಗೆ ದೂರು ಕೊಟ್ಟಾಗಿದೆ.


ಚಂದ್ರಾವತಿ


ವೆಂಕಟೇಶಮೂರ್ತಿ

ಸೊರಬದ ಮಟ್ಟಿಗೆ ಕಾಗೋಡ[illegible] ಹೆಜ್ಜೆಯನ್ನೂ 'ಕುಂಬ'ರ [illegible] ಹಾಕುವಂತೆಯೇ ಇಡುತ್ತ ಬಂ[illegible] 'ಕುಬಂ'ರ ಕಂಡರೆ ಕಾಗೋ[illegible] ಆಗದು. 'ಬಂ' ಬದುಕಿದ್ದಾಗ [illegible] ವಿರುದ್ಧ ತಿರುಗಿಬಿದ್ದಿದ್ದ ಇದೇ [illegible] ತೆರೆಮರೆಯಲ್ಲಿ ಬೆಂಬಲಿಸುತ್ತ ಬಂ[illegible] ಕಾಗೋಡು. ಈಗ ಕುಬಂರ[illegible] ಸೋದರ ಮಧುಗೆ ಕು[illegible] ಕೊಡುತ್ತಿದ್ದಾರೆ. ರಾಜಕೀಯ[illegible] ಕುಬಂರ ಮುಗಿಸುವ [illegible] ಹಾಕಿಕೊಂಡಿರುವ ಕಾಗೋ[illegible] ಬಹಿರಂಗವಾಗೇ ಮಧುವನ್ನು ಅಪ್ಪಿ ಮುದ್ದಾಡು[illegible]

ಇದು ಸೊರಬ ಕಾಂಗ್ರೆಸ್‌ನಲ್ಲಿ ಅಲ್ಲೋಲಕಲ್ಲೋ[illegible] ಮಾಡಿಬಿಟ್ಟಿದೆ. ಯಾವ ಪಕ್ಷವೇ ಅಧಿಕಾರದಲ್ಲಿರಲಿ, ತಾ[illegible] ಮಟ್ಟದ ಸಮಿತಿಗಳಿಗೆ ಸ್ವ-ಪಕ್ಷದ ಕಾರ್ಯಕರ್ತ[illegible] ನೇಮಿಸುವುದು 'ವಾಡಿಕೆ.' ಆದರೆ ಸೊರಬದ [illegible] ಸಮಿತಿಗಳಲ್ಲಿ ಕಾಂಗ್ರೆಸ್‌ನ ಮಾಜಿ ಮಂತ್ರಿ-ಮಾಜಿ ಶಾ[illegible] ಕುಬಂರ ಹಿಂಬಾಲಕರಿಗೆ ಕಾಗೋಡು ಅವಕಾಶವೇ ಕೊ[illegible] ಬದಲಿಗೆ ಸ್ಥಳೀಯ ಶಾಸಕ ಮಧುರ ಹಿಂಬಾ[illegible] ಸರ್ಕಾರಿ ಕಮಿಟಿಗಳಲ್ಲಿ ತುಂಬಲಾಗಿದೆ. ಕಿಮ್ಮನೆ [illegible] ಮಂತ್ರಿಯಾಗಿದ್ದಾಗ ಆಯಾ ಕ್ಷೇತ್ರದ ಕಾಂಗ್ರೆಸ್ [illegible] ಅಥವಾ ಪಕ್ಷದ ಸೋತ ಅಸೆಂಬ್ಲಿ ಅಭ್ಯರ್ಥಿಗಳ [illegible] ಡಿಸಿಸಿ ಅಧ್ಯಕ್ಷರ ಅಭಿಪ್ರಾಯಕ್ಕೆ ಮನ್ನಣೆ ಕೊಡು[illegible] ಕಿಮ್ಮನೆ ಮಂತ್ರಿಯಾಗಿದ್ದಷ್ಟು ದಿನ ಕುಬಂ [illegible] ಬೇಯುತ್ತಿತ್ತು. ಈಗ ಕಾಗೋಡು ಅಧಿಕಾ[illegible] ವರ್ಗಾವಣೆಯಿಂದ ಹಿಡಿದು ಬಗರ್ ಹುಕುಂ [illegible] ಸದಸ್ಯರ ನೇಮಕದ ತನಕ ಮಧು ಹೇಳಿದವರಿಗೇ[illegible] ಹಾಕುತ್ತಿದ್ದಾರೆ. ಇದು ಸೊರಬ ಒಂದೇ ಕ್ಷೇತ್ರದ ಕ[illegible] ಕಾಗೋಡರಿಗೆ ಬೇಕಾದ ಯಡ್ಡಿ-ರಾಘವೇಂದ್ರ, ಈ[illegible] ಕ್ಷೇತ್ರದಲ್ಲೂ ಇಂಥ ಎಡವಟ್ಟು ಆಟಗಳು ನಡೆಯು[illegible]

'ಬಂ' ವಾರಸುದಾರಿಕೆ ಯಾವ ಕಾರಣಕ್ಕೂ[illegible] ಕುಬಂಗೆ ದಕ್ಕಲೇ ಬಾರದೆಂಬ ಹಠಕ್ಕೆ ಬಿದ್ದಿದ್ದಾರೆ [illegible] ಹೀಗಾಗಿ ಆತ ಅಪ್ಪನ ನಿಧನದ ನಂತರ ಕಾಗೋ[illegible] 'ಸರಿ' ಮಾಡಿಕೊಂಡಿದ್ದಾರೆ. ಕಾಗೋಡರಿಗೆ 'ಕುಬಂ' ಬಿಟ್ಟರೆ ಕಾಂಗ್ರೆಸ್‌ನ ಈಡಿಗ ನಾಯಕನೆಂಬ ತನ್ನ ಹ[illegible] ಭಂಗ ಬರಬಹುದೆಂಬ ಭಯ. ಹೀಗಾಗಿ ಆತ ಕುಬ[illegible] ನಿಧಾನವಾಗಿ ಮುರಿದುಹಾಕುತ್ತಲೇ ಬಂದಿದ್ದಾರೆ. ಜತೆ ಕೈಮಿಲಾಯಿಸಿ ಕುಬಂನ ಹಣಿಯುತ್ತಿದ್ದಾರೆ. ಅಸೆಂಬ್ಲಿ ಎಲೆಕ್ಷನ್‌ನಲ್ಲಿ ಮಧು ಪರವಾಗಿ ಮಸಲತ್ತು [illegible] ಕಾಗೋಡು ಲೋಕಸಭಾ ಚುನಾವಣೆ ಹೊತ್ತಲ್ಲಿ ಕ[illegible] ಕಾಂಗ್ರೆಸ್ ಟಿಕೆಟ್ ಸಿಗದಂತೆ ನೋಡಿಕೊಂಡಿದ್ದರು[illegible] ಕುಬಂ ಏನೂ ನಂಬಿಗರ್ಹ ಪುಢಾರಿಯಲ್ಲ, ರಾಜಕೀಯ ಜಾಣ್ಮೆಯಾಗಲಿ, ಜನಸಂಪರ್ಕ[illegible] ಇಲ್ಲದ ಒಂಥರಾ ಹೇತ್ಲಾಂಡಿ ಈತ. ಹಿರಿಯ ರಾಜಕಾರಣಿ ಕಾಗೋಡ[illegible] ಪಕ್ಷದಲ್ಲಿರುವ 'ಕುಬಂ' ಕಾಲೆಳೆದು ಎದ[illegible] ಪಕ್ಷದ ಮಧುಗೆ ಲಾಭ ಮಾಡಿಕೊಡು[illegible] ಅಸಹ್ಯವೇ ಸರಿ!

ಕಾಗೋಡರ ಕಾಟ ತಾಳಲಾರದೆ ಈಗ ಬಿಜೆಪಿಯತ್ತ ತೇಲುಗಣ್ಣು ಬಿಡು[illegible] ಯಡ್ಡಿ-ಈಶ್ವರಪ್ಪ ಜತೆ ಸಂ[illegible] ಸಾಧಿಸಿಕೊಂಡಿದ್ದಾರೆ. ಹರತಾಳು ಹಾಲಪ್ಪ[illegible] ಕೇಸಲ್ಲಿ ಸಿಕ್ಕಿಬಿದ್ದಿರುವುದರಿಂದ ಆತನಿಗೆ ಮುಂ[illegible] ಅಸೆಂಬ್ಲಿ ಎಲೆಕ್ಷನ್‌ನಲ್ಲಿ ಬಿಜೆಪಿ ಟಿಕೆಟ್ ಸಿಗು[illegible] ಕಷ್ಟವಾಗಬಹುದೆಂಬ ಲೆಕ್ಕಾಚಾರ ಕುಬಂ-ಯಡ್ಡಿ [illegible]

ಹಾಕಿದ್ದಾರೆ. ಈಗಾಗಲೇ ರೇಪ್ ಸಂತ್ರಸ್ತೆಯ ಬಟ್ಟೆ ಮೇಲಿರುವ 'ಧಾತು' ಹಾಲಪ್ಪನದೇ ಎಂಬುದು ಫೊರೆನ್ಸಿಕ್ ಟೆಸ್ಟ್‌ನಲ್ಲಿ ಸಾಬೀತಾಗಿದೆ. ಈ ಕೇಸ್‌ನ ತೀರ್ಪು ಹಾಲಪ್ಪನ ವಿರುದ್ಧ ಬಂದರೆ ಆತನಿಗೆ ಟಿಕೆಟ್ ಬಿಜೆಪಿ ಕೊಡಲಾರದು. ಆಗ ತನಗೆ ಛಾನ್ಸ್ ಸಿಗುತ್ತದೆಂದು ಕುಬಂ ಭಾಗಾಕಾರ-ಗುಣಾಕಾರ ಮಾಡುತ್ತಿದ್ದಾರೆ. ಹರತಾಳು ಕೂಡ 'ಬಂ'ರ ರಕ್ತ ಸಂಬಂಧಿಯೇ! ಆತ 'ಬಂ'ರ ಕೆಂಗಣ್ಣಿಗೆ ತುತ್ತಾಗಿದ್ದಾತ. ಹೀಗಾಗಿ ಹರತಾಳುಗೆ ಮಧುಗಿಂತ ಕುಬಂ ಅಂದರೇನೇ ಪ್ರೀತಿ ಜಾಸ್ತಿ. ಇದೆಲ್ಲಾ ಸಮೀಕರಣ ಈಗಲೇ ಸೊರಬದ ರಾಜಕಾರಣದ ರಸಾಯನಶಾಸ್ತ್ರದಲ್ಲಿ ಪ್ರಯೋಗಕ್ಕೆ ಒಡ್ಡಲಾಗುತ್ತಿದೆ.

ಹರತಾಳು ಹಾಲಪ್ಪಗೆ ರೇಪ್ ಕೇಸಲ್ಲಿ ತಾನು ಬಚಾವಾಗೋದಿಲ್ಲ ಎಂಬುದು ಖಾತ್ರಿಯಾಗಿದೆ. ಹಾಗಾಗಿ ಆತ ತನ್ನನ್ನು ರೇಪ್‌ಕೇಸಲ್ಲಿ ಸಿಕ್ಕಿಹಾಕಿದ್ದ ವೆಂಕಟೇಶ್ ಮೂರ್ತಿಯನ್ನು ಅಂಥದೇ ಅತ್ಯಾಚಾರದ ಪ್ರಕರಣದಲ್ಲಿ ಜೈಲು ಸೇರುವಂತೆ ಮಾಡಿದ್ದಾನೆ. ವೆಂಕಟೇಶಮೂರ್ತಿ ರಾಜಿಗೆ ಬರುವಂತೆ ಮಾಡುವ ಹಿಕಮತ್ತು ಹರತಾಳು ಮಾಡಿದ್ದಾನೆ. ಮಂತ್ರಿಯಾಗಿದ್ದಾಗ ಹರತಾಳು ಬೇನಾಮಿ ಹಣವೆಲ್ಲ ಇರುತ್ತಿದ್ದುದೇ ಈ ವೆಂಕಟೇಶಮೂರ್ತಿಯ ಹತ್ತಿರವಾಗಿತ್ತು. ಹೀಗಾಗಿ ವೆಂಕಟೇಶ ಮೂರ್ತಿ ಹೆಂಡತಿ ಚಂದ್ರಾವತಿ ಜತೆ ಹಾಲಪ್ಪ ಡಿಂಗ್‌ಡಾಂಗ್ ಮಾಡಲು ಅನುವು ಮಾಡಿಕೊಡುತ್ತಿದ್ದನೆಂಬುದು ಎಲ್ಲರೂ ಮಾತನಾಡುತ್ತಾರೆ.

ಅದೊಂದು 'ಒಪ್ಪಿಲೆ ಸಂಬಂಧ'ವಾಗಿತ್ತು. ಆದರೆ ಯಾವಾಗ ವೆಂಕಟೇಶ ಮೂರ್ತಿ ಕೇಳಿದಷ್ಟು ಕಾಸು ಕೊಡದೆ ಹಾಲಪ್ಪ ಮಂತ್ರಿಗಿರಿ ಅಧಿಕಾರ ಪ್ರಯೋಗಿಸಿ ಆತನ ಸತಾಯಿಸತೊಡಗಿದನೋ ಆಗ ವೆಂಕಟೇಶಮೂರ್ತಿ ಮೊದಲೇ ಮಾಡಿಟ್ಟುಕೊಂಡಿದ್ದ ರೇಪ್ ರಾದ್ಧಾಂತದ ವಿಡಿಯೋ ಬಳಸಿಕೊಂಡಿದ್ದಾನೆ. ಈಗ ವೆಂಕಟೇಶ ಮೂರ್ತಿಯ ಮೇಲೆ ರಾಮನಗರ ಕಡೆಯ ಹೆಂಗಸೊಬ್ಬಳಿಂದ ಅತ್ಯಾಚಾರದ ಕೇಸು ಹಾಕಿಸಿರುವ ಹಾಲಪ್ಪ ಅಷ್ಟು ಸುಲಭಕ್ಕೆ ಬಚಾವಾಗುವ ಲಕ್ಷಣ ಕಾಣಿಸುತ್ತಿಲ್ಲ. ಎರಡೂ ರೇಪ್ ಅಲ್ಲ; ಪಕ್ಕಾ ಟ್ರ್ಯಾಪ್! ಆದರೆ ಹರತಾಳು ಹಾಲಪ್ಪ ಮಾಡಿರುವುದು ರೇಪ್ ಅಂತಲೇ ಸಾಕ್ಷ್ಯಾಧಾರಗಳು ಹೇಳುತ್ತಿವೆ. ಇದು ಕುಬಂನ ಅದೃಷ್ಟ ಖುಲಾಯಿಸುವಂತೆ ಮಾಡೀತಾ?

ಒಂದಂತೂ ಖರೆ. ಸೊರಬದ ಈಗಿನ ರಾಜಕೀಯ ಹವಾ ನೋಡಿದರೆ 'ಕುಬಂ' ಬಿಜೆಪಿಯಿಂದ ಸ್ಪರ್ಧಿಸಿದರೂ ಮಧು ಬಂಗಾರಪ್ಪನ ಎದುರು ಗೆಲ್ಲಲಾರ ಅನ್ನಿಸುತ್ತದೆ. ಅಪ್ಪನಂತೆ ಜನಸಾಮಾನ್ಯರ ಹೃದಯಕ್ಕೆ ಕೈಹಾಕಿ ರಾಜಕಾರಣ ಮಾಡುತ್ತಿರುವ ಮಧು ಸೊರಬದ ಉದ್ದಗಲಕ್ಕೆ ಆಳವಾಗಿ ಬೇರು ಬಿಡುತ್ತಿದ್ದಾನೆ. ಅತ್ತ ಪಕ್ಕದ ಸಾಗರದ ಸಮೀಕರಣಗಳು ಕಾಗೋಡು-ಯಡ್ಡಿಯ ಅನೈತಿಕ ಮೈತ್ರಿಗೆ ತರಹೇವಾರಿ ಅರ್ಥಗಳನ್ನು ಕಲ್ಪಿಸುವಂತೆ ಮಾಡುತ್ತಿದೆ. ಎಂಬತ್ತೆರಡು ವರ್ಷ ಕಳೆದಿರುವ ಕಾಗೋಡು ಮುಂದಿನ ಬಾರಿ ಸಾಗರದಿಂದ ತನ್ನ ಕುಲಪುತ್ರಿ ಡಾ. ನಂದಿನಿಯನ್ನು ಕಾಂಗ್ರೆಸ್ ಕ್ಯಾಂಡಿಡೇಟ್ ಮಾಡುವ ಪ್ಲಾನ್‌ನಲ್ಲಿದ್ದಾರಂತೆ. ಇಷ್ಟು ದಿನ ತಾನೇ ಕಾಗೋಡರ ಉತ್ತರಾಧಿಕಾರಿ ಎಂಬ ಹಮ್ಮು-ಬಿಮ್ಮಿನಲ್ಲಿ ಓಡಾಡಿಕೊಂಡಿದ್ದ ಕಾಗೋಡು ಅಣ್ಣಾಜಿ ಕಂಗಾಲು ಬಿದ್ದಿದ್ದಾನೆ. ಕಾಗೋಡು ತಿಮ್ಮಪ್ಪರ ಖಾಸಾ ಚಿಕ್ಕಪ್ಪನ ಮಗ ಈ ಕಾಗೋಡು ಅಣ್ಣಾಜಿ. ಜಿಪಂ ಸದಸ್ಯನಾಗಿ ಹಲವು ವರ್ಷ ಕಳೆದಿರುವ ಅಣ್ಣಾಜಿ ಕಾಗೋಡು ರಾಜ್ಯ ರಾಜಕಾರಣ ಮಾಡುತ್ತ ಬೆಂಗಳೂರಲ್ಲಿ ಠಿಕಾಣಿ ಹೂಡಿದಾಗೆಲ್ಲ ಕ್ಷೇತ್ರ ಸಂಭಾಳಿಸುವುದು ಇದೇ ಅಣ್ಣಾಜಿ. ಹಾಗೆ ನೋಡಿದರೆ ಕಾಗೋಡು ತಿಮ್ಮಪ್ಪರಿಗಿಂತ ಹೆಚ್ಚು ಕ್ಷೇತ್ರ ಒಡನಾಟ ಅಣ್ಣಾಜಿಗಿದೆ.

ತನ್ನ ಮಗಳು ಕ್ಯಾಂಡಿಡೇಟಾದರೆ ಬಿಜೆಪಿಯ 'ಸಹಕಾರ' ಪಡೆಯಲೆಂದೇ ಕಾಗೋಡು ಯಡ್ಡಿ ಜತೆ ಮಧುರಬಾಂಧವ್ಯ ಸಾಧಿಸಿದ್ದಾರೆಂಬ ತರ್ಕಗಳೂ ಜಿಲ್ಲೆಯ ರಾಜಕೀಯ ಪಡಸಾಲೆಯಲ್ಲಿ ನಡೆಯುತ್ತಿದೆ. ಅಕಸ್ಮಾತ್ ಕಾಗೋಡರೇ ಮತ್ತೆ ಸ್ಪರ್ಧೆಗಿಳಿವ ಸಂದರ್ಭ ಬಂದರೂ ಬಿಜೆಪಿಯಿಂದ ಕೊಂದರೆ ಬರಬಾರದೆಂಬ ಸಿದ್ಧತೆ ಆತ ಮಾಡಿಕೊಂಡಿದ್ದಾರಂತೆ. ಬಿಜೆಪಿಗೆ ಮಾಜಿ ಶಾಸಕ ಬೇಳೂರು ಗೋಪು ಪ್ರಬಲ ಅಭ್ಯರ್ಥಿ. ಈತನ ಬದಲಿಗೆ ವೀಕ್ ಕ್ಯಾಂಡಿಡೇಟ್ ಬಿಜೆಪಿಯಿಂದ ನಿಲ್ಲುವಂತಾಗಬೇಕೆಂಬುದು ಕಾಗೋಡು ತಂತ್ರಗಾರಿಕೆ. ಶಿಕಾರಿಪುರದಲ್ಲಿ ಯಡ್ಡಿ ಕುಟುಂಬಕ್ಕೆ ಕಷ್ಟವಾಗದಂತೆ ಕಾಂಗ್ರೆಸ್ ಕ್ಯಾಂಡಿಡೇಟ್ ಹಾಕುವ 'ವ್ಯವಸ್ಥೆ' ಕಾಗೋಡು ಮಾಡುತ್ತಾರಂತೆ. ಒಟ್ಟಿನಲ್ಲಿ ಅಳಿಯ ಬೇಳೂರು ಗೋಪು ಎದುರು ಮತ್ತೆ ಸೋಲುವುದು ಕಾಗೋಡರಿಗೆ ಬೇಕಾಗಿಲ್ಲ.

ಇದೇ ಕಾಗೋಡು-ಯಡ್ಡಿ ಫ್ಯಾಮಿಲಿ ನಡುವಿನ ಅಂಟಿದ ನಂಟಿನ ರಹಸ್ಯ! ಹಾಗಂತ ಕಾಂಗ್ರೆಸ್-ಬಿಜೆಪಿ ಭೂಪರೇ ಪಿಸುಗುಡುತ್ತಿದ್ದಾರೆ. ಜನರಿಗೂ ಈ 'ಕೊಳಕಾಟ' ಅರ್ಥವಾಗಿ ಹೋಗಿದೆ!!

■ ನಹುಷ

ಅಮ್ಮನ ಧ್ಯಾನದಲ್ಲಿ ಕನ್ನಡದ್ರೋಹಿ ಚಾನಲ್‌ಗಳು

ಥೂತ್ತೇರಿ

ಕರ್ನಾಟಕದ ಜಯಲಲಿತಾ ತಮಿಳುನಾಡಿನ ಅಮ್ಮ ತೀರಿಕೊಂಡಿದ್ದಾರೆ. ತೀರಿಕೊಂಡವರ ಬಗ್ಗೆ ಹಗುರವಾಗಿಯಾಗಲಿ ಕೆಟ್ಟದಾಗಿಯಾಗಲಿ ಮಾತನಾಡಬಾರದೆಂದು ಲಂಕೇಶ್ ಎಚ್ಚರಿಕೆ ಕೊಟ್ಟುಹೋಗಿದ್ದರೂ ಜಯಾ ಬಗ್ಗೆ ಒಂದೆರಡು ಕಹಿಮಾತುಗಳನ್ನು ಅನಿವಾರ್ಯವಾಗಿ ಹೇಳಲೇಬೇಕಾಗಿದೆಯಲ್ಲಾ.

ಮೊದಲನೆಯದಾಗಿ ನರ್ತಕಿಯಾಗಿ, ನಟಿಯಾಗಿ, ಕಡೆಗೆ ರಾಜಕಾರಣಿಯಾದ ಜಯಾರನ್ನು ಕನ್ನಡಿಗರಾದ ನಾವು ಈ ನಮ್ಮ ಮನೆ ಮಗಳನ್ನು ಹಗುರವಾಗಿ ಅಥವಾ ತಿರಸ್ಕಾರದಿಂದ ನೋಡಲು ಕಾರಣವೇ ಇಲ್ಲ. ಆದರೂ ಜಯಾ ವೀರಪ್ಪನ್ ತರಹ ಕರ್ನಾಟಕವನ್ನು ಕಾಡಿದ್ದು ನಿಜ. ಆ ವೀರಪ್ಪನ್ ತನ್ನ ರಕ್ಕಸತನ ಮೆರೆದು ನಮ್ಮ ನೂರಾರು ದಕ್ಷ ಪೊಲೀಸರನ್ನು ಕೊಂದು ಹಾಕಿದ ಹಾಗೆ ಈ ಅಮ್ಮ ತೀರಿಕೊಳ್ಳುವ ಮುನ್ನ ಮಾಡಿದ ರಾದ್ಧಾಂತದ ಫಲವಾಗಿ ಭುಗಿಲೆದ್ದ ಗಲಭೆಯಿಂದ ಕರ್ನಾಟಕ 26 ಸಾವಿರ ಕೋಟಿ ನಷ್ಟ ಅನುಭವಿಸಿತಲ್ಲಾ, ಥೂತ್ತೇರಿ!

* * *

ಕನ್ನಂಬಾಡಿ ಕಟ್ಟಿದಂದಿನಿಂದಲೂ ಕಾವೇರಿ ನೀರಿನ ಹಂಚಿಕೆ ನ್ಯಾಯೋಚಿತವಾಗಿ ನಡೆದುಕೊಂಡು ಬಂದಿದೆ. ಮುಕ್ಕಾಲುಭಾಗ ನೀರು ಅವರಿಗೆ, ಕಾಲು ಭಾಗ ನೀರು ನಮಗೆ. ಇದ್ಯಾವ ಸೀಮೆ ನ್ಯಾಯವೋ ಏನೋ. ಆದರೂ ಕಡಿದಾಳು ಮಂಜಪ್ಪನವರ ಕಾಲದಿಂದ ಅಲ್ಲಿನ ನೀರಾವರಿ ಸಚಿವರು ಇಲ್ಲಿನ ನೀರಾವರಿ ಸಚಿವರನ್ನ ಕುರಿತು ನೀರು ಕೇಳುತ್ತಿದ್ದರು. ಎಂಜಿಆರ್ ಕೂಡ ನಮ್ಮ ಮಂತ್ರಿಗಳ ಯೋಗಕ್ಷೇಮ ಕೇಳುತ್ತಿದ್ದರು. ಅದರರ್ಥ ನೀರಿನ ಕೋರಿಕೆಯಾಗಿತ್ತು. ಕರುಣಾನಿಧಿ ಕೂಡ ನೀರಿನ ಸಮಸ್ಯೆಯನ್ನು ರಾಜಕಾರಣಗೊಳಿಸಿದವರಲ್ಲ. ಆದರೆ ಜಯ ನೀರಿಗಾಗಿ ಕೋರ್ಟಿನ ಮೂಲಕ ನೀರು ಕೇಳುತ್ತಿದ್ದಳು. ಅದಕ್ಕಾಗಿ ಉಪವಾಸ ಕೂರುತ್ತಿದ್ದಳು. ಕಡೆಯವರೆಗೂ ನೀರಿನ ರಾಜಕಾರಣ ಮಾಡಿ ಕನ್ನಡಿಗರ ಕಣ್ಣೀರ ಕೋಡಿ ಹರಿಸಿದಳಲ್ಲಾ, ಥೂತ್ತೇರಿ!

* * *

ಜಯಾ ಸರ್ವಾಧಿಕಾರಿಯಾಗಿದ್ದರು. ವಿಪರ್ಯಾಸ ಅಂದರೆ ಡೆಮಾಕ್ರಸಿಯೊಳಗಿನ ಡಿಕ್ಟೇಟರ್ ಪ್ರಜಾಪ್ರಭುತ್ವದ ನಿಯಮದಡಿ ಆರಿಸಿಬಂದ ಶಾಸಕರು ಅಮ್ಮನ ಎದುರು ಸಾಲಾಗಿ ಬಿಳಿ ಅಂಗಿ ಪಂಚೆಯೊಂದಿಗೆ ಕೈಕಟ್ಟಿ ನಿಂತು ಭೂಮಿಗೆ ಮಕಾಡೆ ಮಲಗಿ ನಮಸ್ಕರಿಸುತ್ತಿದ್ದರು. ಅಮ್ಮನಿಗೆ ಬೆನ್ನತೋರದೆ ಹಿಂದುಮುಂದಾಗಿ ನಡೆದುಹೋಗುತ್ತಿದ್ದರು. ಅಮ್ಮನ ಆಜ್ಞೆ ಉಲ್ಲಂಘಿಸುವ ಧೈರ್ಯ ಯಾರಿಗೂ ಇರಲಿಲ್ಲ. ಗಟ್ಟಿಯಾಗಿ ಮಾತನಾಡುವ ಧೈರ್ಯವಂತೂ ಇರಲೇ ಇಲ್ಲ. ಸಾಮಾನ್ಯವಾಗಿ ಸರ್ವಾಧಿಕಾರಿಗಳಿಗೆ ಸಂಬಂಧಿಗಳಿರುವುದಿಲ್ಲ. ಜಯಲಲಿತಾಳಿಗೂ ಸಂಬಂಧಿಗಳಿದ್ದರೂ ಇಲ್ಲದಂತಿದ್ದರು. ಈಚೆಗೆ ಆಕೆಗೆ ಸಲಹೆಗಾರರೂ ಇದ್ದಂತೆ ಕಾಣಲಿಲ್ಲವಲ್ಲಾ, ಥೂತ್ತೇರಿ!!

* * *

ಜಯಲಲಿತಾ ಸುಂದರಿ. ಒಂದಿಷ್ಟು ಕಪ್ಪು ಉದ್ದ ಇದ್ದರೆ ಸುರಸುಂದರಿ. ಆದರೆ ದೇಹಾಕೃತಿ ಬಗ್ಗೆ ಇದನ್ನು ಹೇಳಲು ಬರುವುದಿಲ್ಲ. ಕನ್ನಡದ 'ಚಿನ್ನದ ಗೊಂಬೆ' ಚಿತ್ರದಲ್ಲಿ ಆಕೆ ಚಿನ್ನದ ಗೊಂಬೆಯಂತೇ ಕಾಣುತ್ತಿದ್ದರೂ 'ಮಾವನ ಮಗಳು' ಚಿತ್ರದಲ್ಲಿ ಕುವೆಂಪುರವರ 'ನಾನೇ ವೀಣೇ ವೀಣೆ ತಂತಿ' ಎಂಬ ಗೀತೆಯಲ್ಲಿ ದಂತದ ಗೊಂಬೆಯಂತೆ ಕಾಣುತ್ತಾರೆ. ನಟಿಸಿದ ಮೂರೇ ಚಿತ್ರದ ನಂತರ ತಮಿಳಿಗೆ ಹೋದ ಈ ಕನ್ನಡತಿ ಅಲ್ಲಿ ಬೇರೂರಿದ್ದ ಕನ್ನಡತಿ ಬಿ. ಸರೋಜಾದೇವಿಗೆ ಗೇಟ್‌ಪಾಸ್ ಕೊಟ್ಟರು. ಅದೂ ಡ್ರೆಸ್ಸಿನ ಸಲುವಾಗಿ. ನಮ್ಮ ಗೌರವಾನ್ವಿತ ಸರೋಜಾದೇವಿ ಆಧುನಿಕವಾದ ಡ್ರೆಸ್ ತೊಟ್ಟು ಸ್ವಿಮ್ಮಿಂಗ್ ಪೂಲ್ ಇತ್ಯಾದಿಯಲ್ಲಿ ನಟಿಸಲು ನಿರಾಕರಿಸಿದ ಕಾರಣಕ್ಕೆ ಜಯಾ ತಮಿಳು ತಾರೆಯಾಗಿಬಿಟ್ಟರಲ್ಲಾ, ಥೂತ್ತೇರಿ!!

* * *

ಕೆಟ್ಟಮೇಲೆ ಬುದ್ಧಿ ಬಂದ ಗಾದೆಯೊಂದು ಕನ್ನಡದಲ್ಲಿ ಮನೆ ಮಾತಾಗಿದೆ. ಅದರಂತೆ ಜಯಾ ಬ್ರಹ್ಮಾಂಡ



ಭ್ರಷ್ಟಾಚಾರದಲ್ಲಿ ಮುಳುಗೆದ್ದ ನಂತರ ಕೋರ್ಟು ಜೈಲು ಎಲ್ಲವನ್ನು ಕಂಡರು. ಆನಂತರ ಅವರು ತಮ್ಮ ಆಸ್ತಿ ಒಡವೆಗೆ ಕೊಟ್ಟ ಕಾರಣಗಳು ಮೈಸೂರು ಮಹಾರಾಜರು ಕೊಟ್ಟ ಸಂಪತ್ತಿದು ಎಂದು ಘೋಷಿಸಿಕೊಂಡರು. ಆದರೀಗ ಈ ಅಮ್ಮನಿಗೆ ಬಡವರ ಕಷ್ಟಸುಖಗಳು ಅರಿವಿಗೆ ಬಂದ ಫಲವಾಗಿ ಅವರಿಗೆ ಒಂದು ಡಜನ್ ಕಾರ್ಯಕ್ರಮಗಳನ್ನು ಜಾರಿ ಮಾಡಿದರು. ಇದರಿಂದ ತಮಿಳುನಾಡಿನಿಂದ ಕರ್ನಾಟಕಕ್ಕೆ ಬರುವ ತಮಿಳರ ವಲಸೆ ಕಡಮೆಯಾಯ್ತು. ಬದಲಿಗೆ ಅಮ್ಮನ ಮಿಕ್ಸಿ, ಗ್ರೈಂಡರ್, ಫ್ಯಾನು ಇತ್ಯಾದಿ ವಸ್ತುಗಳು ಅಗ್ಗದ ಬೆಲೆಗೆ ಕರ್ನಾಟಕದಲ್ಲೂ ಸಿಗತೊಡಗಿದವಲ್ಲಾ, ಥೂತ್ತೇರಿ!!

* * *

ನಮ್ಮ ಮೇಲುಕೋಟೆಯ ಈ ಅಯ್ಯಂಗಾರಿ ಹೆಣ್ಣು ತನ್ನ ಬಾಲ್ಯ ಮತ್ತು ಅಭ್ಯುದಯ ಕಂಡಿದ್ದು ಕರ್ನಾಟಕದಲ್ಲಿ. ಸಿನಿಮಾ ವೃತ್ತಿ ಆರಂಭವೂ ಕೂಡ ಕನ್ನಡ ಭಾಷೆಯಲ್ಲೇ ನಡೆಯಿತು. ಹಾಗೆ ಆಕೆಯ ಅಕ್ರಮ ಆಸ್ತಿ ಸಂಪಾದನೆಯ ಕಾರಣಕ್ಕೆ ನಾಲ್ಕು ವರ್ಷ ಜೈಲು ಶಿಕ್ಷೆ ವಿಧಿಸಿದ್ದೂ ಕರ್ನಾಟಕದ ವಿಶೇಷ ನ್ಯಾಯಾಲಯ. ತಮಿಳುನಾಡಿನಲ್ಲಿ ಎಸಗಿದ ಭ್ರಷ್ಟ ಕೆಲಸಕ್ಕೆ ಕರ್ನಾಟಕದಲ್ಲಿ ಶಿಕ್ಷೆ ಅನುಭವಿಸಿದ ಅಮ್ಮ ಕರ್ನಾಟಕದ ಬಗ್ಗೆ ಇನ್ನಿಲ್ಲದ ದ್ವೇಷ ಬೆಳೆಸಿಕೊಂಡಳೋ ಏನೋ. ನಿಮಗೆ ಕುಡಿಯಲು ನೀರಿಲ್ಲದಿದ್ದರೇನಂತೆ ನಮ್ಮವರಿಗೆ ಬೆಳೆ ಬೆಳೆಯಲು ನೀರು ಬಿಡಿ ಎಂಬ ಹಟಕ್ಕೆ ಬಿದ್ದು ಈ ಹಟದ ಉತ್ತುಂಗದಲ್ಲಿದ್ದಾಗಲೇ ಆಸ್ಪತ್ರೆ ಸೇರಿದ್ದೊಂದು ವಿಪರ್ಯಾಸವಲ್ಲವೇ, ಥೂತ್ತೇರಿ!!

* * *

ಭಾನುವಾರ ನಾಲ್ಕರ ಸಂಜೆ ಜಯಾರವರಿಗೆ ಹೃದಯಾಘಾತವಾಗಿದೆ ಎಂದು ಸುದ್ದಿ ಬಿತ್ತರಗೊಂಡಿತು. ಆ ಕೂಡಲೇ ತಮಿಳು ಚಾನಲ್‌ಗಳಲ್ಲಿ ಜಯಾ ಮಾಹಿತಿ ಹುಡುಕಿದಾಗ ಅಷ್ಟೂ ತಮಿಳು ಚಾನಲ್‌ಗಳ ಪೈಕಿ ಕೇವಲ ಎರಡು ಚಾನಲ್‌ಗಳು ಸುದ್ದಿ ಬಿತ್ತರಿಸುತ್ತಿದ್ದವು. ಇನ್ನೆಲ್ಲವೂ ತಮ್ಮ ನಿಗದಿತ ಮನೋರಂಜನಾ ಕಾರ್ಯಕ್ರಮಗಳ ಬಿತ್ತರಿಕೆಯಲ್ಲಿ ನಿರತವಾಗಿದ್ದವು. ಆದರೆ ಕನ್ನಡದ ಎಲ್ಲಾ ಚಾನಲ್‌ಗಳು ಜಯಾರವರ ಬಗ್ಗೆ ಕಲ್ಪಿತ ಕಾರ್ಯಕ್ರಮ ಕೊಡುವುದರಲ್ಲಿ ನಿರತವಾಗಿದ್ದವು. ಈ ತಿರುಬೋಕಿ ಚಾನಲ್‌ಗಳಿಗೆ ರಾಯಚೂರಲ್ಲಿ ನಡೆದ ಐತಿಹಾಸಿಕ ಕನ್ನಡ ಸಾಹಿತ್ಯ ಸಮ್ಮೇಳನವೇ ಗಮನಕ್ಕೆ ಬರಲಿಲ್ಲ. ಹಿಂದೆ ಯಾವ ಸಮ್ಮೇಳನಕ್ಕೂ ಸೇರದಷ್ಟು ಜನ ಸೇರಿದ್ದನ್ನು ಖುದ್ದು ನೋಡಿದವರಿಗೆ ಮತ್ತು ಪತ್ರಿಕೆಗಳನ್ನು ನೋಡಿದವರಿಗಷ್ಟೇ ಗೊತ್ತಾಗಿದ್ದು. ಇಂತಹ ಕನ್ನಡದ್ರೋಹಿಗಳು ತಮಿಳುನಾಡಿನಲ್ಲೂ ಇಲ್ಲವಂತಲ್ಲಾ, ಥೂತ್ತೇರಿ!!

* * *

ಜಯಲಲಿತಾ ಸಾವಿನ ಸುದ್ದಿ ಮನಸ್ಸನ್ನು ಆದ್ರಗೊಳಿಸಿರುವ ಸಮಯದಲ್ಲೇ ಅತ್ತ ರಾಮಚಂದ್ರಾಪುರ ಮಠದ ಕಡೆಯಿಂದ ಜೋಕ್ ಒಂದು ಹೊರಬಿದ್ದಿದೆ.

ಅದೇನೆಂದರೆ "ಗೋ ಹತ್ಯೆ ಭಾರತಕ್ಕೆ ಅಮಂಗಳವಂತೆ." ರಾಘವೇಶ್ವರನ ಈ ಹೇಳಿಕೆಗೆ ಸಾಗರದ ಮಾನ ಮರ್ಯಾದೆಗಂಜಿ ಬದುಕುತ್ತಿರುವ ಹವ್ಯಕರು "ನಿನ್ನಂಥ ಗೋಮುಖ ವ್ಯಾಘ್ರ ನಮ್ಮ ಗುರುವಾಗಿರುವುದೇ ಅಮಂಗಳ" ಎಂದು ಹಲುಬಿದರಂತಲ್ಲಾ, ಥೂತ್ತೇರಿ!! ■

'ಪಾನ ನಿಷೇಧ'ದ ಬಿಸಿ...

05 ◄◄

ಮಾಡಿಕೊಂಡರೆ ಉಳಿದವರು ಜೀವನಕ್ಕಾಗಿ ನಗರಗಳಿಗೆ ಗುಳೆ ಹೋಗುವ ವಿಷಮ ಸ್ಥಿತಿಯಲ್ಲಿಯೂ ಸರ್ಕಾರ ಮದ್ಯಮಾರಾಟ ಮಾಡುತ್ತಿರುವುದು ಸಮಾಜದ ನೈತಿಕ ಅಧಃಪತನಕ್ಕೆ ಕಾರಣವಾಗುತ್ತದೆ ಎಂದು ಕಿಡಿ ಕಾರಿದ್ದರು. ಅಲ್ಲದೇ ಹಂತಹಂತವಾಗಿ ಹೋರಾಟವನ್ನು ತೀವ್ರಗೊಳಿಸಿ ಜನವರಿಯಲ್ಲಿ ಬೆಂಗಳೂರಿನಲ್ಲಿ ದೊಡ್ಡ ಚಳವಳಿ ನಡೆಸುವುದಾಗಿಯೂ ತಿಳಿಸಿದ್ದಾರೆ.

ಬಸವ ಕಲ್ಯಾಣದಿಂದ ಬೆಂಗಳೂರಿಗೆ ಜಾಥಾ

ಮದ್ಯಪಾನ ನಿಷೇಧ ಆಶಯವನ್ನೇ ಇಟ್ಟುಕೊಂಡಿರುವ ಮತ್ತೊಂದು ಪಾದಯಾತ್ರೆ ನಡೆಯುತ್ತಿದೆ. ವಿಜಯಪುರದ ಬಸವಕಲ್ಯಾಣದಿಂದ ಬೆಂಗಳೂರಿಗೆ ಈಗಾಗಲೇ ಜಾಥಾ ಹೊರಟಿದೆ. ಕೊಡಗು ಜಿಲ್ಲೆಯ ವಿರಾಜಪೇಟೆಯಲ್ಲಿ ಸರ್ಕಾರದ ಕೆಎಸ್‌ಬಿಸಿಎಲ್ ಮದ್ಯ ಗೋದಾಮಿನಲ್ಲಿ ಎಕ್ಸೈಜ್ ಇನ್ಸ್‌ಪೆಕ್ಟರ್ ಆಗಿದ್ದ ಎಸ್.ಎಚ್.ಲಿಂಗೇಗೌಡರು ಮದ್ಯಪಾನದ ದುಷ್ಪರಿಣಾಮಗಳನ್ನು ಕಂಡು, ಮರುಗಿ ಅದನ್ನು ನಿಷೇಧಿಸಲು ತಮ್ಮ ಸಂಗಡಿಗರ ಜೊತೆ ಪಾದಯಾತ್ರೆ ಮಾಡುತ್ತಿದ್ದಾರೆ. ನವೆಂಬರ್ 20 ರಂದು ಕಲ್ಯಾಣ ರಾಜ್ಯದ ಕನಸು ಕಂಡಿದ್ದ ಮಾನವತಾವಾದಿ ಬಸವಣ್ಣನವರ ಊರಾದ ಬಸವ ಕಲ್ಯಾಣದಿಂದ ಪಾದಯಾತ್ರೆ ಆರಂಭವಾಗಿದ್ದು ಕೆಲವೊಂದು ಹಳ್ಳಿ ತಲುಪಿ ಅಲ್ಲಿ ಕುಡಿತದ ಚಟವಿರುವ ಮನೆಗಳಲ್ಲಿಯೇ ತಂಗಿ ಅವರಿಗೆ ಮನವರಿಕೆ ಮಾಡಿಕೊಡುವ ಕೆಲಸದಲ್ಲಿ ನಿರತರಾಗಿದ್ದಾರೆ. ಕೆಲವೊಂದು ಗ್ರಾಮಗಳಲ್ಲಿ ಜಾಗೃತಿ ಕಾರ್ಯಕ್ರಮಗಳನ್ನು ನಡೆಸಿ ಅಲ್ಲಿಯೇ ಕೆಲವರ ಮನೆಗಳಲ್ಲಿ ಉಳಿಯುವುದು, ಅವಕಾಶವಿಲ್ಲದಿದ್ದರೆ ದೇವಸ್ಥಾನಗಳಲ್ಲಿ ಉಳಿದು ಸರ್ಕಾರದ ಗಮನ ಸೆಳೆಯುವ ಪ್ರಯತ್ನ ನಡೆಸುತ್ತಿದ್ದಾರೆ. ಸರ್ಕಾರವಂತೂ ಇವರನ್ನು ಕೆಲಸದಿಂದ ಸಸ್ಪೆಂಡ್ ಮಾಡಿದೆ.


'ಮದ್ಯ' ಮರಣಮೃದಂಗ

ರಾಷ್ಟ್ರೀಯ ಸಮೀಕ್ಷೆವೊಂದರ ಪ್ರಕಾರ ಮದ್ಯಪಾನದಿಂದಾಗುವ ಅನಾರೋಗ್ಯದಿಂದ ಸಾಯುವವರ ಸಂಖ್ಯೆಯಲ್ಲಿ ಭಾರತದಲ್ಲಿ ಕರ್ನಾಟಕವೇ ಮೊದಲ ಸ್ಥಾನದಲ್ಲಿದೆಯಂತೆ. ಕೇರಳದಲ್ಲಿ ದಿನವೊಂದಕ್ಕೆ 59 ಜನ ಮದ್ಯಪಾನದಿಂದ ಸಾವನ್ನಪ್ಪಿದರೆ ಕರ್ನಾಟಕದಲ್ಲಿ ದಿನವೊಂದಕ್ಕೆ 111 ಜನ ತಮ್ಮ ಪ್ರಾಣ ಬಿಡುವ ಮೂಲಕ ಕರ್ನಾಟಕ ದಾಖಲೆ ಬರೆಯಲು ಹೊರಟಿರುವುದು ಕಳವಳಕಾರಿ ಸಂಗತಿ ಎಂದು ಗ್ರಾಮೀಣ ಕೂಲಿಕಾರರ ಸಂಘದ ರಾಜ್ಯ ಸಂಚಾಲಕಿ ಸ್ವರ್ಣ ಭಟ್ ಅಭಿಪ್ರಾಯಪಡುತ್ತಾರೆ. ಮದ್ಯಪಾನದಿಂದಾಗಿ ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಸಾಮರಸ್ಯ ಹಾಳಾಗುತ್ತಿರುವುದರಿಂದ ಸರ್ಕಾರ ಮದ್ಯಪಾನ ನಿಷೇಧ ಚಳವಳಿಯನ್ನು ಗಂಭೀರವಾಗಿ ಪರಿಗಣಿಸಬೇಕು. ಹಾಗೆಯೇ ಎಲ್ಲಾ ರಾಜಕೀಯ ಪಕ್ಷಗಳು ಸಹ ಇನ್ನು 2 ವರ್ಷದಲ್ಲಿ ಬರುವ ವಿಧಾನಸಭಾ ಚುನಾವಣೆಯ ಹಿನ್ನೆಲೆಯಲ್ಲಿ ಮದ್ಯಪಾನ ನಿಷೇಧ ಖಂಡಿತಾ ಮಾಡುತ್ತೇವೆ ಎಂದು ತಮ್ಮ ಪ್ರಣಾಳಿಕೆಯಲ್ಲಿ ಘೋಷಿಸಿಕೊಳ್ಳಬೇಕೆಂದು ಒತ್ತಾಯಿಸಿದ ಅವರು ಇಲ್ಲವಿದ್ದಲ್ಲಿ ಮಹಿಳೆಯರು ನಿಮಗೆ ಚುನಾವಣೆಯಲ್ಲಿ ತಕ್ಕ ಪಾಠ ಕಲಿಸಲಿದ್ದಾರೆ ಎಂದು ಎಚ್ಚರಿಕೆ ನೀಡಿದ್ದಾರೆ.


ರಾಜ್ಯ ಸರ್ಕಾರ ಮದ್ಯಪಾನ ನಿಷೇಧ ಮಾಡಲು ಸಾಧ್ಯವಿಲ್ಲ, ಏಕೆಂದರೆ ಸರ್ಕಾರದ ಬರುವ ಆದಾಯ ಕಡಿಮೆಯಾಗಿ ಬೊಕ್ಕಸಕ್ಕೆ ನಷ್ಟವಾಗುತ್ತದೆ ಎಂಬ ಕಾರಣ ನೀಡುತ್ತಿದೆ. ಲಕ್ಷಾಂತರ ಕುಟುಂಬಗಳು ಮದ್ಯಪಾನದಿಂದ ಆರೋಗ್ಯ ಕೆಡಿಸಿಕೊಂಡು, ಆಸ್ಪತ್ರೆಗಳಿಗೆ ಲಕ್ಷಾಂತರ ಹಣ ಖರ್ಚು ಮಾಡಿ ಕೊನೆಗೆ ಬೀದಿಗೆ ಬೀಳುವ ಪರಿಸ್ಥಿತಿ ಬಂದಿದ್ದರೂ ಸರ್ಕಾರಕ್ಕೆ ತನ್ನ ಆದಾಯವೇ ಮುಖ್ಯವಾಯಿತಾ? ಹಲವು ಮಹಿಳೆಯರು ಮತ್ತು ಮಕ್ಕಳು ಮದ್ಯಪಾನದಿಂದ ತಮ್ಮ ಗೌರವ ಕಳೆದುಕೊಂಡು ಬೀದಿ ಹೆಣವಾಗುತ್ತಿದ್ದರೂ ಸರ್ಕಾರಕ್ಕೆ ಕಣ್ಣು ಕಾಣುತ್ತಿಲ್ಲವೇ? ತನ್ನ ಪ್ರಜೆಗಳನ್ನು ಸಾಯಿಸಿ ಬಂದ ಹಣದಲ್ಲಿ ಸರ್ಕಾರ ನಡೆಯಬೇಕೆ? ಎಂಬ ಪ್ರಶ್ನೆಗಳು ನಾಗರಿಕ ಸಮಾಜವನ್ನು ಕಾಡಲೇಬೇಕಿದೆ. ಅಷ್ಟೇ ಯಾಕೆ ಅಭಿವೃದ್ಧಿಯಲ್ಲಿ ಕರ್ನಾಟಕಕ್ಕಿಂತಲೂ ಹಿಂದುಳಿದ ಬಿಹಾರ ಸೇರಿದಂತೆ ಹಲವು ರಾಜ್ಯಗಳು ಸಂಪೂರ್ಣ ಮದ್ಯಪಾನ ನಿಷೇಧಿಸಿ ಆದಾಯಕ್ಕೆ ಪರ್ಯಾಯ ಮೂಲಗಳನ್ನು ಕಂಡುಕೊಂಡಿರುವುದು ನಮ್ಮ ಸರ್ಕಾರಕ್ಕೇಕೆ ಮಾದರಿಯಾಗುತ್ತಿಲ್ಲ? ಎಂಬ ಪ್ರಶ್ನೆಯನ್ನು ಸರ್ಕಾರದ ಮುಖಕ್ಕೆ ಎರಚುವ ಕೆಲಸ ನಮ್ಮಿಂದ ಆಗಬೇಕಿದೆ. ಇಂಥಾ ನೈಜ ಮತ್ತು ದೂರದೃಷ್ಟಿಯ ಕಾಳಜಿಯ ಹೆಜ್ಜೆಗಳಿಲ್ಲದೆ ಎಷ್ಟೇ 'ಭಾಗ್ಯ'ಗಳನ್ನು ಘೋಷಿಸಿದರೂ ಜನಸಾಮಾನ್ಯರ ಬದುಕು ಹಸನಾಗುವುದಿಲ್ಲ ಎಂಬುದನ್ನು ಸರ್ಕಾರ ಅರಿತುಕೊಳ್ಳಬೇಕಿದೆ.


■ ಮುತ್ತುರಾಜು

ರಂಜನೆ | ಬೋಧನೆ | ಪ್ರಚೋದನೆ ಲಂಕೇಶ್



ತಮಿಳು ಲೇಖಕಿ ಮತ್ತು ಪತ್ರಕರ್ತೆ ವಾಸಂತಿ ಅವರು 'ಅಮ್ಮ- ಸಿನಿಮಾ ನಟಿಯಿಂದ ರಾಜಕೀಯ ರಾಣಿತನಕ ಜಯಲಲಿತಾರ ಪಯಣ' ಎಂಬ ಪುಸ್ತಕವನ್ನು ಬರೆದಿದ್ದಾರೆ. ಜಯಲಲಿತಾರ ಬಾಲ್ಯದಿಂದ ಪ್ರಾರಂಭವಾಗಿ ಕಳೆದ ವರ್ಷ ಮೇ ತಿಂಗಳಲ್ಲಿ ಆಕೆ ಮತ್ತೊಮ್ಮೆ ಮುಖ್ಯಮಂತ್ರಿ ಆದ ತನಕದ ಮಾಹಿತಿಗಳನ್ನು ಹೊಂದಿರುವ ಈ ಪುಸ್ತಕ 'ಅಮ್ಮ' ಜಯಲಲಿತಾರ ಬದುಕಿನ ಸುಖ-ದುಃಖಗಳೆರಡನ್ನೂ ಮನಮುಟ್ಟುವಂತೆ ತೆರೆದಿಡುತ್ತದೆ. ಆ ಪುಸ್ತಕದ ಆಯ್ದ ಹಲವು ಭಾಗಗಳ ಅನುವಾದವನ್ನು ನಮ್ಮ ಓದುಗರಿಗೆ ಇಲ್ಲಿ ನೀಡಿದ್ದೇವೆ.


ಲೇಖಕಿ ವಾಸಂತಿ



ಎಂದೆಂದಿಗೂ ಅಮ್ಮ

ಅಮ್ಮುಗೆ ಎರಡು ವರ್ಷ ವಯಸ್ಸಾಗಿದ್ದಾಗ ಆಕೆಯ ಅಪ್ಪ ಜಯರಾಮ್‌ನ ಶವವನ್ನು ಮನೆಗೆ ತಂದರು. ಆ ಕರಾಳರಾತ್ರಿಯ ದುಃಖ ಜಯಲಲಿತಾಳ ಪ್ರಕ್ಷುಬ್ಧ ಜೀವನದುದ್ದಕ್ಕೂ ಕಾಡಿತು; ಕಷ್ಟಗಳು ಎದುರಾದಾಗಲೆಲ್ಲ ಆ ನೆನಪು ಮತ್ತೆ ಮತ್ತೆ ಮರುಕಳಿಸುತ್ತಿತ್ತು. ಅಸಾಮಾನ್ಯ ಸೌಂದರ್ಯ ಮತ್ತು ಬುದ್ಧಿವಂತಿಕೆಯಿಂದ ಪ್ರಾರಂಭವಾದ ಆಕೆಯ ಜೀವನ ಅಂದು ವಿವಿಧ ಬಣ್ಣದ ರಾಕ್ಷಸರು ಅಡಗಿದ್ದ ಸಮುದ್ರಕ್ಕೆ ಬಿಸಾಡಿದಂತಾಯಿತು. ಅವೆಲ್ಲವೂ ಸೇರಿ ಮುಗ್ಧ ಅಮ್ಮುಳನ್ನು ಉಕ್ಕಿನ ಮಹಿಳೆ 'ಅಮ್ಮ'ನನ್ನಾಗಿಸಿತು.

ಪತಿಯ ಮರಣದ ನಂತರ ಜಯರಾಮ್‌ನ ವಿಧವೆ ವೇದ ತಮ್ಮ ಎರಡು ಚಿಕ್ಕ ಮಕ್ಕಳೊಂದಿಗೆ ವಿಧಿ ಇಲ್ಲದೆ ಬೆಂಗಳೂರಿನ ತನ್ನ ತಂದೆಯ ಮನೆಗೆ ಬರಬೇಕಾಯಿತು. ಆಗ ಎಲ್ಲರೂ ವೇದಳ ಮಗನನ್ನು ಪಪ್ಪು ಎಂದೂ, ಮಗಳನ್ನು ಅಮ್ಮು ಎಂದೂ ಕರೆಯುತ್ತಿದ್ದರು.

ವೇದಳ ತಂದೆ ರಂಗಸ್ವಾಮಿ ಅಯ್ಯಂಗಾರ್ ಮೂಲತಃ ತಮಿಳುನಾಡಿನ ಶ್ರೀರಂಗಂನಿಂದ ಬೆಂಗಳೂರಿಗೆ ಬಂದು ನೆಲೆಸಿದ್ದ ಬ್ರಾಹ್ಮಣರಾಗಿದ್ದರು. ಅವರಿಗೆ ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್‌ನಲ್ಲಿ ಒಂದು ಸಾಧಾರಣ ಕೆಲಸ ಸಿಕ್ಕಿತ್ತು. ಅವರ ಕುಟುಂಬ ಬಿಳಿ ಮೈಬಣ್ಣಕ್ಕೆ ಮತ್ತು ಸೌಂದರ್ಯಕ್ಕೆ ಹೆಸರುವಾಸಿಯಾಗಿತ್ತು. ರಂಗಸ್ವಾಮಿಗೆ ವೇದ, ಅಂಬುಜಾ ಮತ್ತು ಪದ್ಮ ಎಂಬ ಮೂವರು ತುಂಬಾ ಸುಂದರವಾದ ಹೆಣ್ಣು ಮಕ್ಕಳು ಹಾಗೂ ಶ್ರೀನಿವಾಸನ್ ಎಂಬ ಗಂಡು ಮಗ ಇದ್ದ. ರಂಗಸ್ವಾಮಿ ಮತ್ತು ಅವರ ಪತ್ನಿ ಕಮಲಮ್ಮನವರದ್ದು ಪ್ರತಿನಿತ್ಯ ಶಾಸ್ತ್ರ ಮತ್ತು ಸಂಪ್ರದಾಯದಲ್ಲಿ ತೊಡಗಿರುತ್ತಿದ್ದ ಬ್ರಾಹ್ಮಣ ಮಧ್ಯಮ ವರ್ಗದ ಕುಟುಂಬ.

ಸುಂದರವಾಗಿದ್ದ ವೇದ ತನ್ನ ತಂದೆಗೆ ಭಾರವಾಗ ಕೂಡದೆಂದು ಮತ್ತು ತನ್ನ ಮಕ್ಕಳಿಗೆ ಉತ್ತಮ ಜೀವನ ನೀಡಬೇಕೆಂದು ತೆರಿಗೆ ಇಲಾಖೆಯಲ್ಲಿ ಸಹಾಯಕಿಯ ಕೆಲಸ ಗಿಟ್ಟಿಸಿದಳು. ಆದರೆ ಕೆಲವೇ ದಿನಗಳಲ್ಲಿ ತನಗೆ ಬರುವ ಸಂಬಳದಲ್ಲಿ ತನ್ನ ಮಕ್ಕಳ ಕನಿಷ್ಠ ಅಗತ್ಯಗಳನ್ನೂ ಪೂರೈಸಲಾಗುವುದಿಲ್ಲ ಎಂದು ಆಕೆಗೆ ಅರ್ಥವಾಯಿತು.

ಒಂದು ದಿನ ಕನ್ನಡ ಚಲನಚಿತ್ರ ನಿರ್ಮಾಪಕ ಕೆಂಪರಾಜ್ ಅರಸ್ ಅವರ ಕಣ್ಣಿಗೆ ಬಿದ್ದ ವೇದ ತನ್ನ ಸೌಂದರ್ಯದಿಂದಲೇ ಅವರನ್ನು ಮೆಚ್ಚಿಸಿದಳು. ತನ್ನ ಹೊಸ ಸಿನಿಮಾದಲ್ಲಿ ಆಕೆ ನಟಿಸಬೇಕೆಂದು ಅರಸ್ ವೇದಳ ತಂದೆಯನ್ನು ಕೇಳಿದಾಗ ಅವರು ಕೋಪಗೊಂಡು ಅವರನ್ನು ವಾಪಸ್ ಕಳುಹಿಸಿದರು.

ಆಗ ವೇದಳ ಕಿರಿಯ ಸಹೋದರಿ ಪದ್ಮ ಇನ್ನೂ ಕಾಲೇಜಿನಲ್ಲಿ ಓದುತ್ತಿದ್ದಳು. ಆದರೆ ಆಕೆಯ ಅಕ್ಕ ಅಂಬುಜಾ ಒಂದು ರೀತಿಯಲ್ಲಿ ದಂಗೆಕೋರಳಾಗಿದ್ದಳು. ಆಕೆ ಗಗನಸಖಿಯಾದಾಗ ಆಕೆಯ ತಂದೆ ಉಗ್ರಗೊಂಡು "ಇನ್ನು ಮುಂದೆ ನೀನು ನನ್ನ ಪಾಲಿಗೆ ಸತ್ತುಹೋಗಿದ್ದೀಯ" ಎಂದು ಶಪಥಗೈದಿದ್ದರು.

ಇದರಿಂದ ಅಂಬುಜಾ ಧೃತಿಗೆಡಲಿಲ್ಲ; ಆಕೆ ಸ್ವಲ್ಪ ಸಮಯದ ನಂತರ ತನ್ನ ಹೆಸರನ್ನು ವಿದ್ಯಾವತಿ ಎಂದು ಬದಲಾಯಿಸಿಕೊಂಡು, ಚೆನ್ನೈನಲ್ಲಿ ಮನೆ ಮಾಡಿ ಸಿನಿಮಾಗಳಲ್ಲಿ ನಟಿಸಲಾರಂಭಿಸಿದಳು. ವೇದ ತನ್ನ ಮಕ್ಕಳನ್ನು ಕರೆದುಕೊಂಡು ಚೆನ್ನೈಗೆ ಬರಬೇಕೆಂದು, ಅಲ್ಲಿ ಅವರಿಬ್ಬರನ್ನು ಉತ್ತಮ ಶಾಲೆಗೆ ಸೇರಿಸಬಹುದೆಂದು, ಎಲ್ಲರೂ ತನ್ನ ಮನೆಯಲ್ಲಿ ವಾಸಿಸಬಹುದೆಂದು ಅಂಬುಜಾ ವೇದಳನ್ನು ಆಹ್ವಾನಿಸಿದಳು. ಈ ಪ್ರಸ್ತಾಪವನ್ನು ಸ್ವೀಕರಿಸಿದ ವೇದ ತನ್ನಿಬ್ಬರು ಮಕ್ಕಳನ್ನು ಕರೆದುಕೊಂಡು ಅಂಬುಜಾ ಮನೆಗೆ ತನ್ನ ವಾಸ್ತವ್ಯವನ್ನು ಬದಲಾಯಿಸಿದಳು.

ಮಕ್ಕಳನ್ನು ಶಾಲೆಗೆ ಸೇರಿಸಲಾಯಿತು. ವಿದ್ಯಾವತಿಯನ್ನು ಭೇಟಿ ಆಗಲು ಬರುತ್ತಿದ್ದ ಸಿನಿಮಾ ನಿರ್ಮಾಪಕರು ವೇದಳ ಸೌಂದರ್ಯವನ್ನು ಮೆಚ್ಚಿ ಆಕೆಗೂ ಅವಕಾಶಗಳನ್ನು ನೀಡಲು ಮುಂದಾದರು. ತನ್ನ ಅಕ್ಕ ನೆಮ್ಮದಿಯ ಜೀವನವನ್ನು ಸಾಗಿಸುತ್ತಿದ್ದನ್ನು ನೋಡಿದ ವೇದ ತನ್ನ ಮಕ್ಕಳಿಗೂ ಒಳ್ಳೆಯ ಜೀವನ ಸಿಗುತ್ತದೆ ಎಂದು ನಟಿಯಾಗಲು ನಿರ್ಧರಿಸಿದಳು. ಕೆಂಪರಾಜ್ ಅರಸ್ ಮತ್ತೊಮ್ಮೆ ಆಕೆಗೆ ಪಾತ್ರ ಕೊಡಲು ಮುಂದಾದರು. ತನ್ನ ಹೆಸರನ್ನು ಸಂಧ್ಯಾ ಎಂದು ಬದಲಾಯಿಸಿ ಕೊಂಡ ವೇದ ಕೆಲದಿನಗಳಲ್ಲೇ ಬಿಡುವಿಲ್ಲದ ನಟಿಯಾದಳು.

ಅಮ್ಮು ಜೀವನದಲ್ಲಿ ಪ್ರಕ್ಷುಬ್ಧ ವಿಪ್ಲವದಿಂದ ಕೂಡಿದ್ದ ಹೊಸ ಅಧ್ಯಾಯವೊಂದು ಪ್ರಾರಂಭವಾಯಿತು.

ಏಕಾಂಗಿ ಬಾಲ್ಯ

ಕೆಲದಿನಗಳ ನಂತರ ತನ್ನ ಬಿಡುವಿಲ್ಲದ ನಟನಾ ವೃತ್ತಿಯಿಂದಾಗಿ ತನ್ನ ಮಕ್ಕಳ ಆರೈಕೆಗೆ ಸಮಯ ಕೊಡುವುದು ಅಸಾಧ್ಯವಾಗುತ್ತಿದೆ ಎಂದು ಅರಿತ ಸಂಧ್ಯಾ ಅವರಿಬ್ಬರನ್ನು ಬೆಂಗಳೂರಿನ ತನ್ನ ಹೆತ್ತವರ ಮನೆಗೆ ವಾಪಸ್ ಕಳುಹಿಸಿದಳು. ಪುಟ್ಟ ಅಮ್ಮು ತನ್ನ ತಾಯಿಗಾಗಿ ನಿರಂತರವಾಗಿ ಹಾತೊರೆಯಲಾರಂಭಿಸಿದಳು.

ಸಂಧ್ಯಾ ಸಾಧ್ಯವಾದಾಗಲೆಲ್ಲ ಕೈತುಂಬ ಉಡುಗೊರೆಗಳನ್ನು ಮತ್ತು ಸಿಹಿತಿನಿಸುಗಳನ್ನು ಹೊತ್ತು ಬೆಂಗಳೂರಿಗೆ ಭೇಟಿ ಕೊಡುತ್ತಿದ್ದಳು. ಆ ಮಕ್ಕಳು ತಮ್ಮ ತಾಯಿಯ ಭೇಟಿಗಾಗಿ ಕಾತುರದಿಂದ ಕಾಯುತ್ತಿದ್ದವು. ಇಬ್ಬರೂ ಮಕ್ಕಳಿಗೆ ಓದುವುದೆಂದರೆ ಪ್ರಿಯವಾಗಿದ್ದರಿಂದ ಆಕೆ ಅವರಿಗೆಂದು ಲೋಡುಗಟ್ಟಲೆ ಪುಸ್ತಕಗಳನ್ನು ತರುತ್ತಿದ್ದಳು. ಅಮ್ಮ ಚೆನ್ನೈಗೆ ಹೊರಟುನಿಂತಾಗ ಮಕ್ಕಳು ಕಣ್ಣೀರು ಹಾಕದಂತೆ ಆ ಪುಸ್ತಕಗಳು ಅವರ ಗಮನವನ್ನು ಸೆಳೆದಿರುತ್ತಿದ್ದವು.

ಬಿಷಪ್ ಕಾಟನ್ ಶಾಲೆಯನ್ನು ಸೇರಿದ್ದ ಅಮ್ಮು ಅಲ್ಲಿ ನಾಲ್ಕು ವರ್ಷಗಳನ್ನು ಕಳೆಯುವ ಹೊತ್ತಿಗೆ ಆಕೆಯ ಬದುಕು ಮತ್ತೊಮ್ಮೆ ಗೊಂದಲಕ್ಕೀಡಾಯಿತು. ಪಪ್ಪು ಮತ್ತು ಅಮ್ಮು ಇಬ್ಬರನ್ನು ನೋಡಿಕೊಳ್ಳುತ್ತಿದ್ದ ಅವರ ಚಿಕ್ಕಮ್ಮ ಪದ್ಮಳಿಗೆ ಮದುವೆಯಾಗಿ ಆಕೆ ತನ್ನ ಗಂಡನ ಮನೆ ಸೇರಿದಳು. ಆಗ ಸಂಧ್ಯಾ ಮತ್ತೊಮ್ಮೆ ಅವರಿಬ್ಬರನ್ನು ಚೆನ್ನೈಗೆ ಕರೆದುಕೊಂಡು ಹೋದಳು.

ಮತ್ತೆ ತನ್ನ ತಾಯಿಯೊಂದಿಗೆ ಒಂದಾದದ್ದು ಜಯಲಲಿತಾಳಿಗೆ ಸಂತೋಷ ತಂದಿತು. ಆದ[...] ದಿನಗಳಲ್ಲೇ ತನ್ನ ತಾಯಿ ಹಿಂದಿಗಿಂತಲೂ ಬ್ಯುಸಿ ಆ[...] ಆಕೆಗೆ ತಮ್ಮೊಂದಿಗೆ ಕಳೆಯಲು ಸಮಯವೇ ಇ[...] ಅರ್ಥವಾಯಿತು. ತನ್ನ ತಾಯಿಯ ಸಾಂ[...] ಹಂಬಲಿಸುವುದನ್ನು ಜಯಲಲಿತಾ ಎಂದೂ ನಿ[...]

ಆಕೆಗೆ ಹತ್ತು ವರ್ಷ ವಯಸ್ಸಾದಾಗ ಚೆನ್ನೈ[...] ಪ್ರತಿಷ್ಠಿತ ಚರ್ಚ್ ಪಾರ್ಕ್ ಕಾನ್ವೆಂಟ್‌ಗೆ ಆ[...] ಸೇರಿಸಲಾಯಿತು. ಓದಿನಲ್ಲಿ ಮುಂದಿದ್ದ ಆಕೆಯ [...] ಸ್ವಭಾವದಿಂದ ಶೀಘ್ರದಲ್ಲೇ ಶಿಕ್ಷಕರ [...] ವಿದ್ಯಾರ್ಥಿಯಾದಳು. ಆಕೆಯ ಸಹಪಾಠಿಗಳು [...] ಸೌಂದರ್ಯವನ್ನು ಮೆಚ್ಚುತ್ತಿದ್ದರು.

ದಕ್ಷಿಣ ಭಾರತೀಯಳಾಗಿದ್ದರೂ ಆಕೆಯ ಬಿಳಿ [...] ಹೊಳೆಯುತ್ತಿದ್ದ ಕೂದಲು, ಸುಂದರ ಕ[...] ವಿಶಿಷ್ಟವಾಗಿದ್ದವು. ಆಕೆ ಸಿನಿಮಾ ನಟಿಯ [...] ಎಂಬುದೂ ಗ್ಲಾಮರ್ ಅಂಶವಾಗಿತ್ತು.

ಶಾಲೆಯಲ್ಲಿ ಸಿಗುತ್ತಿದ್ದ ಪುರಸ್ಕಾರಗಳಿಂದ ಜಯ[...]ಳಿಗೆ ಸಂತೋಷ ಆಗುತ್ತಿದ್ದರೂ ತಾಯಿ ಸಂ[...] ಸಂತೋಷ ಮತ್ತು ಕಷ್ಟಗಳನ್ನು ಹಂಚಿಕೊಳ್ಳಲು [...] ಎಂಬ ನೋವು ಆಕೆಯನ್ನು ಕಾಡುತ್ತಿತ್ತು. ತನ್ನ ಆತ್ಮ[...] ಆಕೆ ಒಂದು ಪ್ರಕರಣವನ್ನು ನೆನಪು ಮಾಡಿಕೊ[...] ಎರಡು ದಿನಗಳ ಕಾಲ ತನ್ನ ತಾಯಿಯನ್ನು[...] ಆಗದಿದ್ದಾಗ ಒಂದು ರಾತ್ರಿ ಆಕೆಗಾಗಿ ಅಮ್ಮು[...] ಕೂತಿದ್ದಳು. ಯಾಕೆಂದರೆ ಆಕೆ ಶಾಲೆಯಲ್ಲಿ "ನನ್ನ[...] ಆಕೆ ನನಗೆ ಏನಾಗಬೇಕು" ಎಂದು ಬರೆದ [...] ಬಹುಮಾನ ಸಿಕ್ಕಿತ್ತಲ್ಲದೆ ಅದನ್ನು ಮೆಚ್ಚಿದ್ದ ಶಿಕ್ಷಕರು [...] ಎಲ್ಲರಿಗೂ ಓದಿ ಹೇಳಿದ್ದರು. ಈ ಸಂತೋ[...] ಅಮ್ಮನೊಂದಿಗೆ ಹಂಚಿಕೊಂಡು ಆಕೆಗೆ ಆ ಪ್ರಬಂ[...] ತೋರಿಸುವ ಆಶೆ ಅಮ್ಮುಳದ್ದಾಗಿತ್ತು.

ಅವತ್ತು ತಡರಾತ್ರಿ ಸಂಧ್ಯಾ ಹಿಂತಿರುಗಿದಾ[...] ಮಗಳು ಎದೆಗೆ ನೋಟುಬುಕ್ ಅಪ್ಪಿಕೊಂಡ[...] ಮಾಡುತ್ತಿದ್ದದ್ದನ್ನು ನೋಡಿದಳು. ಮಗಳನ್ನು [...] ಎತ್ತಿಕೊಂಡಾಗ ಎಚ್ಚರಗೊಂಡ ಜಯಲಲಿತಾ ಕಣ್ಣೀ[...] ತನ್ನ ಪ್ರಬಂಧ ತೋರಿಸಲು ಎರಡು ದಿನ ಕಾದಿದ್ದ[...] ಹೇಳಿದಳು. ಆಕೆಯ ಕಣ್ಣೀರು ಒರೆಸಿದ ಸಂಧ್ಯಾ[...] ಪಕ್ಕ ಕೂತು ಪ್ರಬಂಧವನ್ನು ಮಗಳಿಂದ ಓದಿಸಿ ಕೇ[...]

"ಅಮ್ಮ ನನ್ನ ಕಣ್ಣೀರು ಒರೆಸಿ, ಮುತ್ತಿಟ್ಟು [...] ತುಂಬಾ ಚೆನ್ನಾಗಿದೆ ಎಂದಳು. ನನ್ನನ್ನು ಅಷ್ಟ[...] ಎರಡು ದಿನ ಕಾಯಿಸಿದ್ದಕ್ಕಾಗಿ ಸಾರಿ ಹೇಳಿದಳು[...] ಮುಂದೆ ಹಾಗೆ ಕಾಯಿಸುವುದಿಲ್ಲವೆಂದೂ ಹೇ[...] ಆದರೆ ಅದು ಮತ್ತೆ ಮತ್ತೆ ಪುನರಾವರ್ತನೆಯಾ[...] ಎಂದು ಜಯಲಲಿತಾ ದಾಖಲಿಸಿದ್ದಾರೆ.

ಇತರೆ ಅಸಮಾಧಾನ ಮತ್ತು ನಿರಾಶೆಗಳ[...] ಅಮ್ಮನಿಗಾಗಿ ಕಾಯುವುದು ಅಭ್ಯಾಸವಾಗಿಹೋ[...] ಎಷ್ಟರಮಟ್ಟಿಗೆಂದರೆ ಹೊತ್ತಿಲ್ಲದ ಹೊತ್ತಿನಲ್ಲಿ [...] ಬರುತ್ತಿದ್ದ ಸಿನಿಮಾ ನಿರ್ಮಾಪಕರು ಮತ್ತು [...] ಜಯಲಲಿತಾ ದ್ವೇಷಲಾರಂಭಿಸಿದಳು.

ತನ್ನ ಸುತ್ತ ಇದ್ದ ಅಸಂಗತ ವಾತಾವರ[...] ತಪ್ಪಿಸಿಕೊಳ್ಳಲು ಆಕೆ ಪುಸ್ತಕಗಳ ಮೊರೆಹೋದ[...] ಡಾಕ್ಟರ್ ಅಥವಾ ವಕೀಲೆಯಾಗಬೇಕೆಂದು ಕನಸು ಕ[...]










ತಂದೆ, ತಾಯಿ ಮತ್ತು ಅಣ್ಣನೊಂದಿಗೆ ಜಯ[...]


ತಾಯಿ ಸಂಧ್ಯಾ ಜೊತೆ

ಲ್ಲವಾದರೆ ಐಎಎಸ್ ಅಧಿಕಾರಿಯಾಗುವ ಬಯಕೆಯನ್ನೂ ಹೊಂದಿದ್ದಳು. ಆದರೆ ಯಾವುದೇ ಕಾರಣಕ್ಕೂ ಸಿನಿಮಾರಂಗ ಕ್ಕೆ ಪ್ರವೇಶಿಸಕೂಡದೆಂದು ಆಕೆ ನಿರ್ಧರಿಸಿದ್ದಳು.

* * * *

ಒಮ್ಮೆ ದೇಹದ ತೂಕ ಇಳಿಸಲು ತೀವ್ರ ಡಯಟ್ ಮಾಡಿದ್ದರಿಂದ ಜಯಲಲಿತಾ ಮನೆಯಲ್ಲಿಯೇ ಮೂರ್ಛೆಹೋದಳು. ಆಕೆಯ ಮ್ಯಾನೇಜರ್ ಎಂಜಿಆರ್ ಅವರಿಗೆ ವಿಷಯ ತಿಳಿಸಿದ್ದರಿಂದ ಅವರು ಕೂಡಲೇ ತುರ್ತಾಗಿ ಜಯಲಲಿತಾಳನ್ನು ನರ್ಸಿಂಗ್ ಹೋಮ್‌ಗೆ ಸಾಗಿಸಲು ವ್ಯವಸ್ಥೆ ಮಾಡಿದರು. ಆದರೆ ಜಯಲಲಿತಾಳನ್ನು ಹೊರಡಿಸುವಲ್ಲಿ ವಿಳಂಬವಾಯಿತು. ಯಾಕೆಂದರೆ ಆಗ ಆಕೆಯೊಂದಿಗೆ ವಾಸಿಸುತ್ತಿದ್ದ ಆಕೆಯ ದೊಡ್ಡಮ್ಮ ಮತ್ತು ಚಿಕ್ಕಮ್ಮ ಕೂಡ ಆಕೆಯೊಂದಿಗೆ ನರ್ಸಿಂಗ್ ಹೋಮ್‌ಗೆ ಹೋಗಬೇಕಿತ್ತು. ಯಾಕೆ ತಡವಾಗುತ್ತಿದೆ ಎಂದು ವಿಚಾರಿಸಲು ಎಂಜಿಆರ್ ಅವರಿಬ್ಬರಿದ್ದ ಕೊಠಡಿಗೆ ಹೋದಾಗ ಅವರಿಬ್ಬರೂ ಯಾರು ಜಯಲಲಿತಾಳ ಕೀಲಿಕೈಗಳನ್ನು ಇಟ್ಟುಕೊಂಡಿರಬೇಕೆಂದು ಜಗಳವಾಡುತ್ತಿದ್ದರು. ಅವರಿಬ್ಬರಿಂದ ಕೀಲಿಕೈಗಳನ್ನು ಕಿತ್ತುಕೊಂಡ ಎಂಜಿಆರ್, ಆಸ್ಪತ್ರೆಯಲ್ಲಿ ಜಯಲಲಿತಾ ಚೇತರಿಸಿಕೊಂಡಾಗ ಆಕೆಯ ಕೈಗೆ ಕೀಲಿಗಳನ್ನು ಇತ್ತರು. ತನ್ನ ಕುಟುಂಬದ ಸದಸ್ಯರನ್ನೇ ನಂಬುವಂತಿಲ್ಲ ಎಂಬುದು ಜಯಲಲಿತಾಳಿಗೆ ಆಘಾತವನ್ನುಂಟುಮಾಡಿದರೂ ಎಂಜಿಆರ್ ತನ್ನ ಬಗ್ಗೆ ತೋರಿಸಿದ ಕಾಳಜಿ ಆಕೆಯನ್ನು ಆಳವಾಗಿ ಮುಟ್ಟಿತು.

ಕಡಲೂರು ಕ್ಯಾಬರೆ

ಎಐಎಡಿಎಂಕೆ ಪಕ್ಷದ ಸಭೆಯನ್ನು ಪಾಂಡಿಚೆರಿಯ ಪಕ್ಕದಲ್ಲಿರುವ ಕಡಲೂರಿನಲ್ಲಿ ಆಯೋಜಿಸಲಾಗಿತ್ತು. ತಾನೇ ಬರೆದಿದ್ದ ಪ್ರಪ್ರಥಮ ಭಾಷಣವನ್ನು ಓದಲಿದ್ದ ಸ್ಟಾರ್ ಆಕರ್ಷಣಕಾರ್ತಿಯ ಮಾತುಗಳನ್ನು ಕೇಳಲು ಊರಿನ ಜನರೆಲ್ಲ ಸೇರಿಗೊಂಡಿದ್ದರು. ಅವರೆಲ್ಲ ಆಕೆಯ ಸುಂದರ ಮುಖವನ್ನು ನೋಡಲು ಬಂದಿದ್ದರಾದರೂ ಆವತ್ತು ಅವರಿಗೆ ಸಿಕ್ಕಿದ್ದು ಅದು ಆಕರ್ಷಕ ಮತ್ತು ಮನತಟ್ಟುವ ಭಾಷಣ.

ತಮಿಳುನಾಡಿನ ನಕ್ಷತ್ರ ಖಚಿತ ರಾಜಕೀಯದಲ್ಲಿ ಈ ಗ್ಲಾಮರಸ್ ಬೆಡಗಿಯ ಪ್ರವೇಶ ಅನೇಕ ಹುಬ್ಬುಗಳು ಏರುವಂತೆ ಮಾಡಿತ್ತು. 1982ರ ಜೂನ್ 4ರಂದು ಒಂದು ರೂಪಾಯಿ ಪಾವತಿಸುವ ಮೂಲಕ ಜಯಲಲಿತಾ ಎಐಎಡಿಎಂಕೆ ಪಕ್ಷದ ಅಧಿಕೃತ ಸದಸ್ಯೆಯಾಗಿದ್ದರು. ಕಡಲೂರಿನಲ್ಲಿ ಆಕೆಯನ್ನು ಜಾತ್ರೆಯಂತಹ ಮೆರವಣಿಗೆಯಲ್ಲಿ ಕರೆದುಕೊಂಡು ಹೋಗಿದ್ದನ್ನು ಡಿಎಂಕೆ ಪಕ್ಷ ತನ್ನ ಮುಖವಾಣಿಯಲ್ಲಿ 'ಕಡಲೂರು ಕ್ಯಾಬರೆ' ಎಂದು ಬಣ್ಣಿಸಿತ್ತು.

ರಾಜಕೀಯದಲ್ಲಿ ಮೊದಲ ಹೆಜ್ಜೆ ಇಡಲು ಆಕೆಗೆ ಪ್ರಚೋದನೆ ನೀಡಿದ್ದು ಏನು? ಆಕೆಯನ್ನು ಬಲ್ಲವರ ಪ್ರಕಾರ ಆಕೆಗೆ ಬೌದ್ಧಿಕ ನಿಪುಣತೆ ಇತ್ತು. ಚಿತ್ರರಂಗದ ಜನರೊಂದಿಗೆ ಆಕೆಗೆ ಹೊಂದಾಣಿಕೆ ಇರಲಿಲ್ಲ ಮತ್ತು ತನ್ನ ಪ್ರತಿಭೆಯನ್ನು ಬಳಸುವ ಆಶೆ ಆಕೆಗಿತ್ತು. ಆಕೆ ಕೂಡ "ಜನರ ಸೇವೆ ನನ್ನ ಉದ್ದೇಶ" ಎಂದು ಹೇಳಿದ್ದರು. ಆದರೆ ಯಾರೂ ಹೇಳದ ಒಂದು ಸಂಗತಿ ಯಾವುದೆಂದರೆ ಅತ್ತ ತನ್ನ ಪ್ರೇಮ ಪ್ರಕರಣ ಕೊನೆಗೊಂಡ ಹೊತ್ತಿನಲ್ಲೇ ಇತ್ತ ಆಕೆಗೆ ಚಿತ್ರರಂಗದಲ್ಲಿ ಕಡಿಮೆಯಾಗುತ್ತಿದ್ದ ಬೇಡಿಕೆಯೂ ಆಕೆಗೆ ಬೇರೆ ಆಯ್ಕೆಗಳೇ ಇಲ್ಲದಂತೆ ಮಾಡಿದ್ದವು.

ಎರಡನೆ ಬಾರಿಗೆ ತಮಿಳುನಾಡಿನ ಮುಖ್ಯಮಂತ್ರಿಯಾಗಿದ್ದ ಎಂಜಿಆರ್ ಜೊತೆಗಿನ ಸಂಬಂಧವನ್ನು ಪುನರುಜ್ಜೀವಿಸಲು ಜಯಲಲಿತಾ ಬಯಸಿದ್ದರು. ಅವರಿಬ್ಬರು ಸುಮಾರು ಹತ್ತು ವರ್ಷಗಳ ಕಾಲ ದೂರವಿದ್ದರು. ಎಂಜಿಆರ್ ಅವರಿಂದಲೇ ತನಗೆ ಅಗತ್ಯವಾಗಿದ್ದ ಬ್ರೇಕ್ ಸಿಗುತ್ತದೆಂದು ಆಕೆಗೆ ಗೊತ್ತಿತ್ತು. ರಾಜಕೀಯ ಆಕೆಯನ್ನು ಆಕರ್ಷಿಸಿತ್ತು. ಅದರ ಜೊತೆಗೆ ಬರುವ ಸಮಸ್ಯೆಗಳ ಅರಿವೂ ಆಕೆಗಿತ್ತು. "ನಾನು ಜನರ ಸೇವೆಗೆ ಬಂದಿದ್ದೇನೆ" ಎಂದು ಆಕೆ ಹೇಳಿದ್ದನ್ನೇ ಹಿಡಿದುಕೊಂಡ ಡಿಎಂಕೆ ಸದಸ್ಯರು ಆಕೆಯ ಬಗ್ಗೆ ಅಶ್ಲೀಲ ಕಾಮೆಂಟ್‌ಗಳನ್ನು ಮಾಡಿದರು. ಜಯಲಲಿತಾ ತನ್ನ ದೇಹವನ್ನು ಜನರ ಸೇವೆಗೆ ಬಳಸಲು ಮುಂದಾಗಿರುವುದರಿಂದ ತಮಿಳುನಾಡಿನ ಯುವಕರು ಆಕೆಯ ಆಹ್ವಾನವನ್ನು ಸ್ವೀಕರಿಸಲು ಮುಂದಾಗಬೇಕೆಂದೆಲ್ಲ ಕೀಳಾಗಿ ಮಾತಾಡಿದರು.

ಪಕ್ಷದಲ್ಲಿದ್ದ ಬಹುತೇಕರು 1973ರ ನಂತರ ಆಕೆ ಎಂಜಿಆರ್ ಜೀವನದಿಂದಲೇ ಹೊರಟುಹೋಗಿದ್ದಾಳೆ ಎಂದೇ ನಂಬಿದ್ದರು. ಹೀಗಿದ್ದಾಗ ಒಂದು ದಶಕದ ನಂತರ ಅವರಿಬ್ಬರ ನಡುವೆ ಮತ್ತೆ ಹೊಂದಾಣಿಕೆ ಹೇಗೆ ಏರ್ಪಟ್ಟಿತು?

ಈ ಬೆಳವಣಿಗೆಯಿಂದ ಹೆಚ್ಚು ಶಾಕ್ ಆಗಿದ್ದು ಎಂಜಿಆರ್ ಸರ್ಕಾರದಲ್ಲಿ ಮಂತ್ರಿಯಾಗಿದ್ದ ಆರ್.ಎಂ.ವೀರಪ್ಪನ್ ಎಂಬಾತನಿಗೆ.

ಎಂಜಿಆರ್ ಅಮೆರಿಕಕ್ಕೆ ಅಧಿಕೃತ ಭೇಟಿ ನೀಡಿದ ಸಮಯದಲ್ಲೇ ಜಯಲಲಿತಾ ಕೂಡ ತನ್ನ ದೇಹತೂಕ ಇಳಿಸಲು ಅಮೆರಿಕಕ್ಕೆ ತೆರಳಿದ್ದರೆಂದೂ, ಅಲ್ಲಿ ಅವರಿಬ್ಬರಿಗೂ ಪರಿಚಿತರಾಗಿದ್ದ ಒಬ್ಬರು ಭೇಟಿಯನ್ನು ಸಾಧ್ಯವಾಗಿಸಿದರೆಂದೂ, ಒಂದು ಭೇಟಿಯೇ ಎಂಜಿಆರ್ ಮನ ಪರಿವರ್ತಿಸಲು ಸಾಕಾಯಿತು ಎಂದೂ ವೀರಪ್ಪನ್‌ಗೆ ಯಾರೋ ತಿಳಿಸಿದರು.

ಪಕ್ಷದ ಸದಸ್ಯೆಯಾದ ಜಯಲಲಿತಾ ಕೇವಲ ಉಪೇಕ್ಷಿತ ವ್ಯಕ್ತಿಯಾಗಿರುವುದಿಲ್ಲ ಎಂಬ ಭಯ ವೀರಪ್ಪನ್‌ನದ್ದಾಗಿತ್ತು. ಯಾಕೆಂದರೆ ಜಯಲಲಿತಾ ಮಹತ್ವಾಕಾಂಕ್ಷೆಯಿಂದ ಕೂಡಿದ್ದರು. ಆಕೆ ಪಕ್ಷದ ಗ್ಲಾಮರ್ ಬೊಂಬೆಯಾಗಿದ್ದೋ, ಅಥವಾ ನೊಣಗಳನ್ನು ಆಕರ್ಷಿಸುವ ಸಿಹಿತಿಂಡಿಯಂತೆಯೋ ಸುಮ್ಮನಿರುವ ಪೈಕಿಯಲ್ಲ ಎಂದು ಆತನಿಗೆ ಗೊತ್ತಿತ್ತು. ಆಕೆ ತನ್ನ ಸಾಮರ್ಥ್ಯದ ಬಗ್ಗೆ ವಿಶ್ವಾಸ ಹೊಂದಿದ್ದರು. ರಾಷ್ಟ್ರೀಯ ಮಟ್ಟದ ಇಂಗ್ಲಿಷ್ ಪತ್ರಿಕೆಗೆ ಆಕೆ ಕೊಟ್ಟ ಸಂದರ್ಶನದಲ್ಲಿ "ಯಾರೂ ನನ್ನನ್ನು ಹಗುರವಾಗಿ ಪರಿಗಣಿಸುವಂತಹ ವ್ಯಕ್ತಿ ನಾನಲ್ಲ" ಎಂದಿದ್ದರು.

ಎಂಜಿಆರ್ ಜೊತೆಗಿನ ಆಪ್ತತೆಯನ್ನು ಪ್ರದರ್ಶಿಸುತ್ತಿದ್ದ ಆಕೆ ತಾನೇ ಅವರ ಉತ್ತರಾಧಿಕಾರಿ ಎಂಬಂತೆ ಪೋಸು ಕೊಡಲಾರಂಭಿಸಿದರು. ಆಗ ತನ್ನ ನಾಯಕನನ್ನು ಇಂತಹ 'ದುಷ್ಟೆ'ಯಿಂದ 'ರಕ್ಷಿಸುವ' ನಿಟ್ಟಿನಲ್ಲಿ ವೀರಪ್ಪನ್ ಏರುತ್ತಿದ್ದ ಆಕೆಯ ಖ್ಯಾತಿಗೆ ಹಾನಿಮಾಡುವುದನ್ನೇ ತನ್ನ ಧ್ಯೇಯವಾಗಿಸಿಕೊಂಡ.

ಹಿರಿಯ ಪತ್ರಕರ್ತರೂ ಮತ್ತು ಕೆಲಕಾಲ ಜಯಲಲಿತಾ ಅವರ ರಾಜಕೀಯ ಭಾಷಣಗಳನ್ನು ಬರೆಯುತ್ತಿದ್ದವರೂ ಆದ ಸೋಲ್ಲೆ ಅವರ ಪ್ರಕಾರ ಜಯಲಲಿತಾರನ್ನು ರಾಜಕೀಯಕ್ಕೆ ತರಬೇಕೆಂಬುದು ಎಂಜಿಆರ್ ಅವರ ನಿರ್ಧಾರವಾಗಿತ್ತು.

"ಮುಖ್ಯಮಂತ್ರಿಯಾಗಿ ಜವಾಬ್ದಾರಿಗಳು ಹೆಚ್ಚಾಗಿದ್ದರಿಂದ ಎಂಜಿಆರ್ ಅವರಿಗೆ ಹಿಂದಿನಂತೆ ಸಾರ್ವಜನಿಕ ಸಭೆಗಳಲ್ಲಿ ಭಾಗವಹಿಸುವುದು ಕಷ್ಟವಾಗಿತ್ತು. ಆಗ ಜಯಲಲಿತಾ ಸ್ವಯಂಪ್ರೇರಣೆಯಿಂದ ಅವರನ್ನು ಸಂಪರ್ಕಿಸಿದಾಗ ಎಂಜಿಆರ್ ಅವರಿಗೆ ಸಂತೋಷವಾಗುತ್ತಿತ್ತು. ಯಾಕೆಂದರೆ ಆಗ ತಮ್ಮ ವಿರುದ್ಧ ಸಾರ್ವಜನಿಕ ಸಭೆಗಳಲ್ಲಿ ಕರುಣಾನಿಧಿ ತೀಕ್ಷ್ಣ ದಾಳಿಗಳನ್ನು ಮಾಡುತ್ತಿದ್ದರಿಂದ ಜನರನ್ನು ಆಕರ್ಷಿಸಿ ತನ್ನ ವಿರೋಧಿಗೆ ಸೂಕ್ತ ಉತ್ತರ ಕೊಡಬಲ್ಲ ವ್ಯಕ್ತಿಯ ಅಗತ್ಯತೆ ಇತ್ತು. ಆಗ ಆಕೆಯನ್ನು ಸಾರ್ವಜನಿಕ ಸಭೆಗಳಲ್ಲಿ ಬಳಸಿಕೊಳ್ಳಲು ಎಂಜಿಆರ್ ನಿರ್ಧರಿಸಿದರು. ಆಕೆಗೆ ಭಾಷಣ ಮಾಡುವುದರಲ್ಲಿ ತರಬೇತಿ ನೀಡಲು ನನ್ನನ್ನು ಕೇಳಿದರು. ಆಕೆ ತಕ್ಷಣ ಯಶಸ್ವಿಯಾದಳು. ಆಕೆಯ ಸಭೆಗಳಿಗೆ ಬರುತ್ತಿದ್ದ ಜನಸ್ತೋಮ ಕಂಡು ಡಿಎಂಕೆ ಬೆಚ್ಚಿಬಿದ್ದಿತು. ಕರುಣಾನಿಧಿಯ ಟೀಕೆಗಳಿಗೆ ತಕ್ಕದಾದ ಪ್ರತಿಯುತ್ತರಗಳನ್ನು ಕೊಡುವ ಸಾಮರ್ಥ್ಯ ಆಕೆಯಲ್ಲಿತ್ತು. ಎಐಎಡಿಎಂಕೆಯ ಎಲ್ಲಾ ಜಿಲ್ಲಾ ಕಾರ್ಯದರ್ಶಿಗಳು ಆಕೆಗೆ ಬೆಂಬಲ ನೀಡಿದರು. ಇಡೀ ಪಕ್ಷವೇ ಆಕೆಯ ಪರ ನಿಂತಿತು. ತಲೈವಾರ್ ನಂತರ ಅಮ್ಮ ಎಂದೇ ಅವರು ನಂಬಿದರು. ಆಗಲೇ ಆಕೆಯನ್ನು ಪಕ್ಷದ ಪ್ರೊಪಗಾಂಡ ಸೆಕ್ರೆಟರಿಯಾಗಿ ನೇಮಿಸಲಾಯಿತು. ವೀರಪ್ಪನ್, ಸೋಮಸುಂದರಂ ಮತ್ತು ಇತರರು ಆಕೆಯ ವಿರುದ್ಧ ಕೆಲಸಮಾಡಲಾರಂಭಿಸಿದರು. ಆದರೆ ಪಕ್ಷದ ಎಲ್ಲಾ ಜಿಲ್ಲಾ ಕಾರ್ಯದರ್ಶಿಗಳು ಆಕೆಯ ಪರ ನಿಂತಿದ್ದರಿಂದ ಅವರ ಎಲ್ಲಾ ಕಿಡಿಗೇಡಿ ಯತ್ನಗಳು ವಿಫಲಗೊಂಡವು" ಎಂದು ಸೋಲ್ಲೆ ನೆನಪಿಸಿಕೊಳ್ಳುತ್ತಾರೆ.



"ಆಕೆ ಎಂಜಿಆರ್ ಅವರಿಗೆ ಅಚ್ಚುಮೆಚ್ಚಿನ ವ್ಯಕ್ತಿಯಾಗಿದ್ದರು ಎಂಬುದು ಸ್ಪಷ್ಟ. ಆದ್ದರಿಂದ ಅವರಿಬ್ಬರ ನಡುವೆ ದೈಹಿಕ ಸಂಬಂಧ ಇದ್ದರೆ ಅದು ಸಹಜ ಎಂದೇ ಜನ ನಂಬಿದ್ದರು. ಆದರೆ ಅವರಿಬ್ಬರು ಎಂದೂ ಸಾರ್ವಜನಿಕವಾಗಿ ತಮ್ಮ ಅನ್ಯೋನ್ಯತೆಯನ್ನು ಪ್ರದರ್ಶಿಸಲಿಲ್ಲ. ಅವರಿಬ್ಬರೂ ಘನತೆಯಿಂದಲೇ ವರ್ತಿಸುತ್ತಿದ್ದರು" ಎಂದೂ ಸೋಲ್ಲೆ ಹೇಳುತ್ತಾರೆ.

ಎಲ್ಲಿಯತನಕ ತಾನು ಗುರು ಎಂಜಿಆರ್ ಅವರ ನಂಬಿಕೆಯನ್ನು ಉಳಿಸಿಕೊಳ್ಳುತ್ತೇನೋ ಅಲ್ಲಿಯತನಕ ಪಕ್ಷದಲ್ಲಿದ್ದ ತನ್ನ ವೈರಿಗಳನ್ನು ನಿಭಾಯಿಸಲು ಸಾಧ್ಯವಾಗುತ್ತದೆ ಎಂಬ ಭರವಸೆ ಆಕೆ ಹೊಂದಿದ್ದರು. ಒಂದು ಪತ್ರಿಕೆಗೆ ಎಂಜಿಆರ್ ಜೊತೆಗಿನ ತನ್ನ ಸಂಬಂಧ ವಿಶೇಷವಾದದ್ದು ಎಂದು ಆಕೆ ಹೇಳಿದ್ದರು. "ನಮ್ಮ ಸಂಬಂಧ ಬಹಳ ವಿಚಿತ್ರ. ಅವರು ನನಗಿಂತ ತುಂಬಾ ಹಿರಿಯರಾದರೂ ಅವರು ಸೆಟ್‌ನಲ್ಲಿ ಬಿಡುವು ಸಿಕ್ಕಾಗಲೆಲ್ಲ ನನ್ನೊಂದಿಗೆ ಮಾತನಾಡುತ್ತಿದ್ದರು. ನಾವಿಬ್ಬರು ಹತ್ತಾರು ವಿಷಯಗಳ ಬಗ್ಗೆ ಚರ್ಚಿಸುತ್ತಿದ್ದೆವು. ವಿಜ್ಞಾನ, ಮನಃಶಾಸ್ತ್ರ ಸಾಹಿತ್ಯ ಕುರಿತು ಮಾತನಾಡುತ್ತಿದ್ದೆವು. ನಮ್ಮಿಬ್ಬರಿಗೂ ಶಾಸ್ತ್ರೀಯ ಸಂಗೀತ, ಜ್ಯೋತಿಷ್ಯ ಮತ್ತು ಖಗೋಳಶಾಸ್ತ್ರಗಳಲ್ಲಿ ಆಸಕ್ತಿ. ನಮ್ಮಿಬ್ಬರ ನಡುವೆ ತುಂಬಾ ಸಾಮ್ಯತೆ ಇದೆ" ಎಂದು ಹೇಳಿದ್ದರು.

"ಅವರು ನನಗೆ ಎಲ್ಲವೂ ಆಗಿದ್ದಾರೆ. ತಂದೆ, ತಾಯಿ, ಗುರು, ಸ್ನೇಹಿತ, ತತ್ವಜ್ಞಾನಿ ಮತ್ತು ಮಾರ್ಗದರ್ಶಿಯೂ ಆಗಿದ್ದಾರೆ. ಅವರು ನನ್ನ ಆಸರೆ ಆಗಿದ್ದಾರೆ. ಅವರು ಎಂದಿಗೂ ನನಗೆ ನಿರಾಶೆ ಮಾಡುವವರಲ್ಲ. ಅವರನ್ನು ನಂಬಿರುವವರನ್ನು ಅವರೆಂದೂ ಕೈಬಿಡುವುದಿಲ್ಲ"ಎಂದೂ ಆಕೆ ಹೇಳಿದ್ದರು.

ಹೌದು, "ಆತ ನನ್ನ ಪ್ರೇಮಿ" ಎಂದು ಆಕೆ ಹೇಳಿರಲಿಲ್ಲವಾದರೂ ಪಕ್ಷದ ಕಾರ್ಯಕರ್ತರ ಪ್ರಕಾರ ಆತ ಆಕೆಯ ಪ್ರೇಮಿಯಾಗಿದ್ದರಿಂದಲೇ ಆಕೆ ಅವರಿಗೆ ಇಷ್ಟವಾಗಿದ್ದಳು. ಅವರೆಲ್ಲ ಎಂಜಿಆರ್ ಅವರನ್ನು ಅಣ್ಣಾ ಎಂದು ಕರೆಯುತ್ತಿದ್ದರು ಮತ್ತು ಆಕೆಯನ್ನು ಅತ್ತಿಗೆ ಎಂದು ಕರೆಯುತ್ತಿದ್ದರು.

'ಎಂಜಿಆರ್ ಇನ್ನಿಲ್ಲ

ಎಂಜಿಆರ್ ಇನ್ನಿಲ್ಲವಾದದ್ದು ಆಕೆಗೆ ಸಿಡಿಲುಬಡಿದಂತಾಯಿತು. ಅವರು ತನ್ನನ್ನು ನಡುನೀರಿನಲ್ಲಿ ಬಿಟ್ಟುಹೋದರು ಎಂದೆನಿಸಿತು ಆಕೆಗೆ. ಕಣ್ಣಾಬಿಕ್ಕಿ ಆಗಿದ್ದ ಆಕೆ ತನ್ನ ಡ್ರೈವರ್ ಕರೆದು ಎಂಜಿಆರ್ ನಿವಾಸವಿದ್ದ ರಾಮಾವರಂ ಗಾರ್ಡನ್ಸ್‌ಗೆ ಧಾವಿಸಿದರು. ಆದರೆ ಮನೆಯನ್ನು ಪ್ರವೇಶಿಸಲು ಆಕೆಗೆ ಅನುಮತಿ ನೀಡಲಿಲ್ಲ. ಆಗ ಆಕೆ ಕಾರಿನಿಂದ ಇಳಿದು ತನ್ನ ಮುಷ್ಟಿಗಳಿಂದ ಬಾಗಿಲಿಗೆ ಬಡಿದರು. ಕೊನೆಗೂ ಬಾಗಿಲನ್ನು ತೆರೆದರಾದರೂ ಎಂಜಿಆರ್ ಅವರ ದೇಹ ಎಲ್ಲಿದೆ ಎಂದು ಯಾರೂ ಹೇಳಲಿಲ್ಲ. ಆಕೆ ಮೇಲೆ, ಕೆಳಗೆ, ಹಿಂದೆ, ಮುಂದೆ ಎಂದೆಲ್ಲ ಮನೆಯನ್ನು ಹಲವಾರು ಬಾರಿ ಸುತ್ತಾಡಿದರೂ ಆಕೆಗೆ ಗುರುವಾಗಿದ್ದ, ನಿಕಟರಾಗಿದ್ದ ಮತ್ತು ಆಕೆಯೊಂದಿಗೆ ಭಾವನಾತ್ಮಕ ಸಂಬಂಧ ಹೊಂದಿದ್ದ ಎಂಜಿಆರ್ ದೇಹವನ್ನು ನೋಡಲು ಬಿಡಲಿಲ್ಲ.

ಕೊನೆಗೆ ಯಾರೋ ಎಂಜಿಆರ್ ಶವವನ್ನು ಹಿಂದಿನ ಬಾಗಿಲಿನಿಂದ ಸಾಗಿಸಿ ರಾಜಾಜಿ ಹಾಲ್‌ಗೆ ತೆಗೆದುಕೊಂಡು ಹೋಗಲಾಗಿದೆ ಎಂದು ತಿಳಿಸಿದರು. ತನ್ನ ಕಾರ್ ಏರಿದ ಆಕೆ ಅಲ್ಲಿಗೆ ದೌಡಾಯಿಸಿದರು. ರಾಜಾಜಿ ಹಾಲ್ ಮುಟ್ಟುತ್ತಿದ್ದಂತೆ ಆಕೆ ಶವದತ್ತ ಧಾವಿಸಿ ತಲೆಯ ಹತ್ತಿರ ತನ್ನನ್ನು ಪ್ರತಿಷ್ಠಾಪಿಸಿಕೊಂಡರು. ಎಂಜಿಆರ್ ತಮ್ಮ ಎಂದಿನ ಪೂರ್ಣ ತೋಳಿನ ಶರ್ಟ್, ಫರ್ ಕ್ಯಾಪ್ ಮತ್ತು ಕಪ್ಪು ಕನ್ನಡಕ ಧರಿಸಿ ನಿರ್ಜೀವವಾಗಿ ಮಲಗಿದ್ದರು.

ತನ್ನ ತಾಯಿ ಸಂಧ್ಯಾಳಿಗೆ 'ನಿಮ್ಮ ಅಮ್ಮುಳನ್ನು ನೋಡಿಕೊಳ್ಳುತ್ತೇನೆ' ಎಂದು ಭರವಸೆ ಕೊಟ್ಟಿದ್ದ ಸೂಪರ್ ಸ್ಟಾರ್‌ರ ನಿರ್ಜೀವ ದೇಹ ಕಂಡಾಗ ಆಕೆಗೆ ಏನನ್ನಿಸಿತು ಎಂದು ಕಲ್ಪಿಸಿಕೊಳ್ಳಬಹುದಷ್ಟೇ. ಆದರೆ ಆಕೆ ಕಣ್ಣೀರು ಹರಿಸಲಿಲ್ಲ. ರೋದಿಸಲಿಲ್ಲ. ಎರಡು ದಿನಗಳ ಕಾಲ - ಒಟ್ಟು ಹದಿಮೂರು ಗಂಟೆಗಳ ಕಾಲ - ಆಕೆ ಎಂಜಿಆರ್ ದೇಹದ ಪಕ್ಕ ಜಾಗರಣೆ ನಿಂತು ನೋಡುಗರನ್ನು ಚಕಿತಗೊಳಿಸಿದರು. ದೈಹಿಕ ಬಳಲಿಕೆಗೆ ಮಣಿಯುವುದಿಲ್ಲ ಎಂದು ಆಕೆ ನಿರ್ಧರಿಸಿದಂತಿತ್ತು.

ಆದರೆ ಮಾನಸಿಕ ಮತ್ತು ದೈಹಿಕ ಚಿತ್ರಹಿಂಸೆ ಇತರೆ ಮೂಲಗಳಿಂದ ಬಂದವು. ಜಾನಕಿ ಅವರ ಮಹಿಳಾ ಬೆಂಬಲಿಗರು ಆಕೆಯನ್ನು ಅಲ್ಲಿಂದ ಓಡಿಸಲು ಅವಳ ಹತ್ತಿರ ನಿಂತು ಆಕೆಯ ಪಾದಗಳನ್ನು ತುಳಿಯುತ್ತಿದ್ದರು. ಉಗುರುಗಳಿಂದ ಆಕೆಯ ದೇಹವನ್ನು ಚಿವುಟುತ್ತಿದ್ದರು, ಮೈ ಪರಚುತ್ತಿದ್ದರು. ಆದರೆ ಆಕೆ ಧೈರ್ಯಗೆಡದೆ, ಅವಮಾನವನ್ನು ಸಹಿಸುತ್ತಾ, ತನ್ನ ಆತ್ಮಗೌರವವನ್ನು ನುಂಗಿಕೊಳ್ಳುತ್ತಾ ಅಲ್ಲಿಂದ ಕದಲದೆ ನಿಂತಿದ್ದರು. ತನ್ನ ಸುತ್ತ ಏನಾಗುತ್ತಿದೆ ಎಂಬುದನ್ನೂ ಗಮನಿಸದಂತೆ ಆಕೆ ಅಲ್ಲೇ ನಿಂತಿದ್ದರು. ಆದರೂ ಒಂದು ಪ್ರಶ್ನೆ ಆಕೆಯನ್ನು ಆಗ ಕಾಡದೇ ಇದ್ದಿರಲಿಕ್ಕಿಲ್ಲ. ಅದು 'ಮುಂದೇನು?' ಎಂಬ ಪ್ರಶ್ನೆ. ಆಗ ಆಕೆಯ ವಯಸ್ಸು 38. ಮದುವೆಯಾಗಿರಲಿಲ್ಲ. ಮುಂದೆ ಉತ್ತಮ ಭವಿಷ್ಯ ಕಾದಿದೆ ಎಂದು ಆಕೆಯನ್ನು ರಾಜಕೀಯಕ್ಕೆ ಕರೆತಂದಿದ್ದ ವ್ಯಕ್ತಿಯೇ ಇನ್ನಿಲ್ಲ. ಪಕ್ಷದ ಕಾರ್ಯಕರ್ತರು ಆಕೆಯೇ ಉತ್ತರಾಧಿಕಾರಿ ಎಂದು ನಂಬಿದ್ದರು. ಆದರೀಗ ತನ್ನ ಮಾಜಿ ನಾಯಕನ ಪಾರ್ಥಿವ ಶರೀರವನ್ನು ನೋಡಲೂ ಕಷ್ಟಪಡುತ್ತಿರುವ ಅಸ್ತಿತ್ವವಿಲ್ಲದ ವ್ಯಕ್ತಿ ಆಗಿದ್ದರು. ಆದರೆ ಸೋಲನ್ನು ಸುಮ್ಮನೆ ಒಪ್ಪಿಕೊಳ್ಳುವ ಪ್ರವೃತ್ತಿ ಆಕೆಯದ್ದಾಗಿರಲಿಲ್ಲ.

ಅಂತ್ಯಕ್ರಿಯೆಗೆ ಎಂಜಿಆರ್ ಶವವನ್ನು ಗನ್ ಕ್ಯಾರೇಜ್ ಮೇಲೆ ಇಟ್ಟುಕೊಂಡು ಮೆರವಣಿಗೆ ಹೊರಟಾಗ ಜಯಲಲಿತಾ ಕೂಡ ಗನ್ ಕ್ಯಾರೇಜ್ ಏರಿ ಅಂತಿಮ ನಮನ ಸಲ್ಲಿಸಲು ಯತ್ನಿಸಿದರು. ಆಗ ಆಕೆಯ ಹಿಂದಿನಿಂದ ಜೋರಾದ ಕೂಗುಗಳು ಕೇಳಿಬಂದವು. ಆಕೆ ಹಿಂದಿರುಗಿ ನೋಡಿದಾಗ ಶಾಸಕ ಡಾ. ಕೆ.ಪಿ.ರಾಮಲಿಂಗ್ ಆಕೆಯನ್ನು ಬೆದರಿಸುವವನಂತೆ ಆಕೆಯತ್ತ ಧಾವಿಸುತ್ತಿದ್ದ. ಇದ್ದಕ್ಕಿದ್ದಂತೆ ಜಾನಕಿಯ ಸೋದರಳಿಯ ದೀಪನ್ ಆಕೆಯ ಹಣೆ ಮೇಲೆ ಬಗಿದು ಆಕೆಯನ್ನು ಗನ್ ಕ್ಯಾರೇಜಿನಿಂದ ನೂಕಿದ. ಆಕೆಗೆ ವರ್ಣಿಸಲಾಗದಷ್ಟು ನೋವು. ಗಾಯ ಮತ್ತು ಶಾಕ್ ಆಗಿತ್ತು. ದೀಪನ್ ಮತ್ತು ರಾಮಲಿಂಗಮ್ ಆಕೆಯತ್ತ ಚೀರಿದ ಅವಮಾನಕರ ಮಾತುಗಳಿಂದ ಆಕೆ ಬೇಸತ್ತು - ಅವರಿಬ್ಬರು ಆಕೆಯನ್ನು ಸೂಳೆ ಎಂದು ಕರೆದಿದ್ದರು - ಅಂತ್ಯಕ್ರಿಯೆಗೆ



▶▶| 12









ಅಮ್ಮಾ... ಎಂಬ ಎರಡಕ್ಷರದಿ!

ಬೆಂಕಿಯಲ್ಲಿ ಅರಳಿದ ಹೂವು

ಬೆಂಕಿ ಆರಿದೆ. ಉರಿದುರಿದು ಭಸ್ಮವಷ್ಟೇ ಉಳಿದಿದೆ. ಉರಿದ ಬೆಂಕಿಯಲ್ಲಿ ಬೆಂದವರೆಷ್ಟೋ, ಸುಟ್ಟವರೆಷ್ಟೋ, ಚಳಿ ಕಾದವರೆಷ್ಟೋ, ತಂತಮ್ಮ ಬೇಳೆ ಬೇಯಿಸಿಕೊಂಡವರೆಷ್ಟೋ ಮತ್ತು ಬೆಂದ ಅನ್ನವನ್ನು ಉಂಡವರೆಷ್ಟೊ?

ಇಂಥದೊಂದು ಬೆಂಕಿಯಲ್ಲಿ ಹೂವಾಗಿ ಅರಳಿದಾಕೆ ಜಯಲಲಿತಾ. ತಮಿಳರ ಪಾಲಿನ ಪುರುಚ್ಚಿ ತಲೈವಿ, ನಂಬಿದವರಿಗೆ ಅಮ್ಮ, ದ್ರಾವಿಡ ಪಕ್ಷವೊಂದರ ಅಧಿನಾಯಕಿ, ತಮಿಳರ ಆರಾಧ್ಯ ದೈವ ಎಂಜಿಆರ್‌ರ ಹೃದಯರಾಣಿ, ಒಂದಾನೊಂದು ಕಾಲದ ತಮಿಳು ರಸಿಕರ ಕಣ್ಮಣಿ, ಹಸಿದವರ ಪಾಲಿನ ಅನ್ನದಾತೆ, ನರಹಂತಕ ವೀರಪ್ಪನನ್ನು ಸಂಹರಿಸಿದ ಚಾಮುಂಡಿ, ಎಲ್‌ಟಿಟಿಇ ಪ್ರಭಾಕರ್‌ಗೆ ಸೆಡ್ಡು ಹೊಡೆದಾಕೆ, ದೈತ್ಯ ಕರುಣಾನಿಧಿಯನ್ನೇ ಜೈಲಿಗೆ ದಬ್ಬಿದಾಕೆ, ಕೇಂದ್ರ ಸರ್ಕಾರವನ್ನೇ ಬದಲಿಸಿದಾಕೆ, ಯಾರಿಗೂ ಜಗ್ಗದ ಏತಕ್ಕೂ ಕುಗ್ಗದ ಆನೆ ನಡೆದದ್ದೇ ದಾರಿಯೆಂಬಂತೆ ತನ್ನ ಅರ್ಧ ಆಯಸ್ಸಿಡೀ ತಮಿಳರ ಮನೆ ಮನಗಳಲ್ಲಿ ಮೆರೆದಾಕೆ- ಹೆಸರೇ ಹೇಳುವ ಹಾಗೆ ಅದುವೇ ಜಯಲಲಿತಾ.

ಬೆಂಕಿಯ ದಾರಿ

ತಮಿಳರ ಸಾಂಸ್ಕೃತಿಕ ಬದುಕಲ್ಲಿ ಮತ್ತೊಬ್ಬ ಕರುಣಾನಿಧಿ ಹುಟ್ಟಿ ಬರಬಹುದೇನೊ. ಇನ್ನೊಬ್ಬ ಎಂಜಿಆರ್ ಅವತರಿಸಲೂಬಹುದು. ಮತ್ತೊಬ್ಬ ಕಾಮರಾಜ ನಾಡಾರ್ ಬರಬಹುದು. ಅಣ್ಣಾದೊರೆ, ಇನ್ನಾವುದೋ ದೊರೆಗಳೆಲ್ಲ ತಮಿಳರ ಚರಿತ್ರೆಯ ದಾರಿಯಲ್ಲಿ ಬಂದರೂ ಬರಬಹುದೇನೊ. ಆದರೆ ಮತ್ತೊಬ್ಬ ಜಯಲಲಿತಾ, ಇನ್ನೊಬ್ಬಳು ಪುರುಚ್ಚಿ ತಲೈವಿ, ಮಗದೊಬ್ಬಳು ಅಮ್ಮ, ತಮಿಳರ ತಂಗತ್ತಾರಕಿ.... ಇತ್ಯಾದಿ ಇತ್ಯಾದಿ ಬಿರುದಾಂಕಿತೆಯಾಗಿ ಮೆರೆದ ಜಯಲಲಿತಾ ಮಾತ್ರ ಹುಟ್ಟಲು ಸಾಧ್ಯವಿಲ್ಲ. ಆಕೆ ಎದುರಿಸಿದ ಸವಾಲುಗಳು, ಸಂಕಷ್ಟಗಳು, ಪಟ್ಟಪಾಡು, ಎದುರಿಸಿದ ಧುರಿತಗಳು, ಅನುಭವಿಸಿದ ಅವಮಾನ, ಕಂಡ ಏಳುಬೀಳುಗಳಿವೆಯಲ್ಲ; ಬಹುಶಃ ಭಾರತದ ಯಾವೊಬ್ಬ ರಾಜಕಾರಣಿಯೂ ಅನುಭವಿಸಿರಲಿಕ್ಕಿಲ್ಲ, ಹಾಗೆಯೇ ಆಕೆ ಮೆರೆದಂತೆ ಬಹುಶಃ ಆಕೆಯ ಗುರು ಎಂಜಿಆರ್ ಕೂಡ ಮೆರೆದಿರಲಿಕ್ಕಿಲ್ಲವೇನೊ!

ಅಮ್ಮಾ ನಿವಾಸ ಪೋಯೆಸ್ ಗಾರ್ಡನ್ನಿನಿಂದ ತಮಿಳುನಾಡಿನ ಸರ್ಕಾರಿ ಸಚಿವಾಲಯವಿರುವ ರಾಜಾಜಿಸಾಲೈನ ಫೋರ್ಟ್‌ಸೆಂಟ್ ಜಾರ್ಜ್‌ಗೆ ಹೆಚ್ಚೆಂದರೂ ಆರು ಮೈಲಿ ದೂರ. ವಿಶೇಷ ಅಧಿವೇಶನ ಇರುವಾಗಲಷ್ಟೇ ಅಮ್ಮ ಸಚಿವಾಲಯಕ್ಕೆ ಬರುತ್ತಾರೆ. ಹಾಗೆ ಬರುವ ದಾರಿಯುದ್ದಕ್ಕೂ ಗೋಡೆ, ರಸ್ತೆ, ಬೀದಿಕಮಾನುಗಳೆನ್ನದೆ ಅಮ್ಮನ ಕಟೌಟು, ಬ್ಯಾನರು, ಫ್ಲೆಕ್ಸುಗಳು ರಾರಾಜಿಸಬೇಕು. ಆರು ಮೈಲಿ ಯುದ್ದಕ್ಕೂ ಫ್ಲೆಕ್ಸು, ಬ್ಯಾನರ್‌ಗಳೆಂದರೆ ಸಣ್ಣ ಮಾತೆ? ಅಮ್ಮ ತನ್ನ ನಿವಾಸದಿಂದ ಹೊರಬೀಳುವುದೇ ಅಪರೂಪ. ಹಾಗೊಮ್ಮೆ ಯಾವುದೇ ಕಾರ್ಯಕ್ರಮಕ್ಕೆ ಅಮ್ಮ ಬರುತ್ತಾರೆಂದರೆ ಅವರು ಬೇರೆ ಯಾವುದೇ ಕುರ್ಚಿ, ಪೀಠ, ಸಿಂಹಾಸನದಲ್ಲೂ ಕೂರುವುದಿಲ್ಲ. ಅವರು ಕೂರಲೆಂದೇ ವಿಶೇಷ ಜಯಾಸನವಿದೆ. ಬೆಂಗಳೂರಿನಲ್ಲಿ ಕೋರ್ಟ್ ವಿಚಾರಣೆಗೆ ಬರುವಾಗಲೂ ಅದೇ ಆಸನ, ದೆಹಲಿಗೆ ಪ್ರಧಾನಿಯ ಭೇಟಿಗೆ ಹೋದರೂ ಅದೇ ಆಸವ ಮತ್ತು ಅದನ್ನು ದೇಶದ ಯಾವುದೇ ಭಾಗಕ್ಕೂ ಅಮ್ಮನಿಗಿಂತ ಮೊದಲೇ ವಿಶೇಷ ವಿಮಾನದಲ್ಲಿ ಸಾಗಿಸಲು ಪ್ರತ್ಯೇಕ ವ್ಯವಸ್ಥೆ-

ಕೂರುವ ಕುರ್ಚಿಯಿಂದ ಹಿಡಿದು ಬರುವ ತಾಣದವರೆಗೂ ಅಮ್ಮನದ್ದೇ ರಾಜಮರ್‍ಯಾದೆ! ಅಮ್ಮ ಯಾವುದೇ ಕಾರ್ಯಕ್ರಮಕ್ಕೆ ಬರಲಿ, ಪೂಜೆಯಿರಲಿ, ಯಾವುದೇ ವೇದಿಕೆಯಿರಲಿ; ತಮಿಳುನಾಡು ಸರ್ಕಾರದ ಯಾರೇ ಮಂತ್ರಿ, ಅಧಿಕಾರಿ, ಶಾಸಕ, ಸಂಸದರು ಅಮ್ಮನಿಗೆ ಸರಿಸಮರಾಗಿ ಅಕ್ಕಪಕ್ಕ ಕೂರುವಂತಿಲ್ಲ. ಅಮ್ಮನ ಹೊರತಾಗಿ ಅಕ್ಕಪಕ್ಕವೂ ಯಾವುದೇ ಕುರ್ಚಿ-ಪೀಠಗಳಿರುವುದಿಲ್ಲ. ಅಮ್ಮನ ಮುಂದೆ ಆತ ಮುಖ್ಯಮಂತ್ರಿಯಿರಲಿ, ಕೇಂದ್ರಮಂತ್ರಿಯಿರಲಿ ಕೈಕಟ್ಟಿ ನಿಂತಿರಬೇಕು. ಇನ್ನು ಅಮ್ಮನ ದರ್ಶನವೆಂದರೆ ಅದು ಸಾಕ್ಷಾತ್ ಆದಿಶಕ್ತಿಯ ದರ್ಶನದಂತೆಯೆ!

ರಾಣಿಯಾಗಿ ಮೆರೆದದ್ದೆ...!

ಅಮ್ಮನ ದರ್ಶನವಾಗಿದ್ದೇ ಆತ ಮಂತ್ರಿಯಿರಲಿ, ಶಾಸಕನಿರಲಿ, ಐಎಎಸ್ ಅಧಿಕಾರಿಯೇ ಆಗಿರಲಿ ಕಾಲಿಗೆ ಬಿದ್ದು ನಮಸ್ಕರಿಸಬೇಕು. ಕೆಲವರಿಗಂತೂ ಜಾಗದಿಂದಲೇ ನೆಲಕ್ಕೆ ಬಿದ್ದು ಸಾಷ್ಟಾಂಗ ಮಾಡಿ ನ[illegible] ಭಾಗ್ಯ. ಅಮ್ಮನ ಮುಂದೆ ಕೂರುವುದು, ತ[illegible] ನಿಲ್ಲುವುದು, ಪಕ್ಷದ ಹೊರತಾಗಿ ಬೇರೆ ಯಾರೇ ಪ[illegible] ರಾಜಕಾರಣಿ, ಅನ್ಯ ಪಕ್ಷದ ಬೆಂಬಲಿಗರ [illegible] ಗುರುತಿಸಿಕೊಳ್ಳುವುದು, ಫೋಟೋಗಳಲ್ಲಿ ಬ[illegible] ಸಂಪರ್ಕವಿದೆಯೆಂದು ಗೊತ್ತಾಗುವುದೂ [illegible] ಅಂಥವರನ್ನು ಆ ಕ್ಷಣದಿಂದಲೇ ಪ[illegible] ಉಚ್ಚಾಟಿಸಲಾಗುವುದು!

ಬಹುಶಃ ಎಂಜಿಆರ್ ಕೂಡ ಈ ರೀತಿ ಮೆರೆ[illegible] ತಮಿಳುನಾಡಿನ ಮಂತ್ರಿಗಳು ಅಮ್ಮನ ಕಾಲಿಗೆ ಬೀ[illegible] ಅಮ್ಮ ಪೋಯೆಸ್ ಗಾರ್ಡನ್ ಬಾಲ್ಕನಿಯಿಂದ [illegible] ನೀಡುತ್ತಿರುವುದು ಅದರ ಕೆಳಗೆ ನಿಂತ ಮಂತ್ರಿ-ಶ[illegible] ನೆಲಕ್ಕೊರಗಿ ನಮಸ್ಕರಿಸುವ ಫೋಟೋ ವೀಡಿಯೊ[illegible] ದೇಶಾದ್ಯಂತ ಸುದ್ದಿಯಾದಾಗಲೂ ಅಮ್ಮ ತ[illegible] ಬಿಡಲಿಲ್ಲ. ಅಧಿಕಾರವಿರಲಿ ಇಲ್ಲದಿರಲಿ, [illegible] ರಾಣಿಯಂತೆಯೇ ಮೆರೆದವಳು. ಇದಕ್ಕೆ ಆಕೆ [illegible] ಕಾರಣಗಳನ್ನು ಕೊಡುತ್ತಿದ್ದಳು. ಅದು ಅಧಿಕಾರಕ್ಕಾ[illegible] ಪಟ್ಟ ಪಾಡು ಮತ್ತು ಹೋರಾಡಿದ ರೀತಿ. [illegible] ಹೋರಾಟ ಮಾಡಿ ತಾನು ಈ ಎತ್ತರಕ್ಕೇರಿರುವಾ[illegible] ಯಾರಾದರೂ ಅದನ್ನೇಕೆ ಪ್ರಶ್ನಿಸಬೇಕು ಮತ್ತು [illegible] ಪಾಲು ಪಡೆಯಬೇಕು?

ಆಕೆಯ ಈ ಮಾತುಗಳೇ ತಮಿಳುನಾಡಿನ ಸ[illegible] ಕಾಲಘಟ್ಟವೊಂದರ ತಲ್ಲಣಗಳ ಪ್ರತೀಕವಾಗಿತ್ತು[illegible] ಪೆರಿಯಾರ್ ಹುಟ್ಟುಹಾಕಿದ್ದ ದ್ರಾವಿಡ ಸ್ವಾ[illegible] ಆಂದೋಲನದ ಪ್ರತೀಕವೆಂಬಂತೆ ಹುಟ್ಟಿಕೊಂಡಿದ್ದು [illegible] ಅಂದರೆ ದ್ರಾವಿಡ ಮುನ್ನೇತ್ರ ಕಳಗಂ. ಅದು ಪೆರಿ[illegible] ದ್ರಾವಿಡ ಕಳಗಂನ ರಾಜಕೀಯ ಮುಖವಾಣಿಯ[illegible] ಅಬ್ಬರಿಸುತ್ತಿದ್ದ ಕಾಲ. ರಾಷ್ಟ್ರೀಯ ಪಕ್ಷವಾದ ಕಾ[illegible] ಯುಗಾಂತ್ಯವಾಗಿತ್ತು, ಪ್ರಾದೇಶಿಕ ಚಿಂತನೆ, ಪ್ರಾದೇಶಿಕ[illegible] ಪ್ರಾದೇಶಿಕ ಹಿತಾಸಕ್ತಿಗಳ ಸಂಕೇತವಾಗಿದ್ದ ಡಿಎಂಕೆ[illegible] ಅಣ್ಣಾದೊರೆಯೇ ಸಾರಥಿ. 1970ರ ಹೊತ್ತಿಗೆ [illegible] ಸಿನಿಮಾ ಬದುಕೆಂಬುದು ಅದರ ಉತ್ತುಂಗವನ್ನು[illegible] ಇನ್ನೇನು ಇಳಿಕೆಯ ಹಂತ ಮುಟ್ಟಿತ್ತು. ಎಂ[illegible] 1965ರಲ್ಲಿ ತೆರೆಕಂಡ 'ಆಯಿಕತ್ತಿರ್ ಓರುವನ್' [illegible] ಜಯಲಲಿತಾ ಎಂಜಿಆರ್‌ರ ಮನದನ್ನೆ.

ದಶಕಪೂರ್ತಿ ಎಂಜಿಆರ್ ಚಿತ್ರಗಳಲ್ಲಿ ಹೀರೋ[illegible] ಮೆರೆದ ಬಿ.ಸರೋಜಾದೇವಿಯಂಥ ವರ್ಚಸ್ವಿ[illegible] ಬದಿಗೊತ್ತಿದ್ದ ಜಯಲಲಿತಾ ಎಂ[illegible] ಹೃದಯಸಾಕ್ಷಿಯೆಂಬಂತೆ ತಮಿಳು ಪರದೆಯನ್ನಾಕ್ರ[illegible] ಕಾಲವದು. ಇದಕ್ಕೂ ಮುನ್ನ ಜಯಾ ತಾಯಿ [illegible] ಒಂದು ಸುತ್ತಿನ ಹೆಣಗಾಟವಿಡೀ ಅಂತ್ಯ ಕಂ[illegible] ಮಗಳು ಜಯಾಳನ್ನು ಹೀರೋಯಿನ್ ಮಾಡಲೆಂ[illegible] ತೀಡಿ ಬೆಳೆಸಿದಂತೆ ಕೇವಲ ಎಂಜಿಆರ್ ಮಾ[illegible]











ೇ ಹೀರೋಗಳ ಎದುರು ನಟಿಸುವಂತೆ ರೂಪಿಸಿದ್ದಳು. ತೆಲುಗಿನ ಶೋಭನ್ ಬಾಬು ಎಂಬ ರಸಿಕರ ನಂತಿದ್ದವನನ್ನು ಜಯಾ ಮನೆಯಂಗಳದ ತನಕ ಂದಾಗಿತ್ತು. ಆದರೆ ಅದೇ ಆಕೆಯ ಹೀರೋಯಿನ್ ೀಜನ್ನು ನುಂಗಿಹಾಕಿತ್ತು. ಹಾಗಂತ ಜಯಾ ಕೈಕಟ್ಟಿ ಲಿಲ್ಲ. ಕಾಲಕ್ರಮೇಣ ಮುಖ್ಯಮಂತ್ರಿ ಎಂಜಿಆರ್ ವಲಯದಲ್ಲಿ ಓಡಾಡಲಾರಂಭಿಸಿದಳು.


ಎಂಜಿಆರ್ ಆಸ್ಥಾನದಲ್ಲಿ

ಆಗ ತಮಿಳುನಾಡು ಮುಖ್ಯಮಂತ್ರಿಯಾಗಿದ್ದ ಜಿಆರ್ ಹೆಚ್ಚೂಕಮ್ಮಿ ಅನಭಿಷಕ್ತ ದೊರೆಯೆ. ಒಂದೆಡೆ ಒಂದಾನೊಂದು ಕಾಲದ ಸಿನಿಮಾ ನಿರ್ಮಾಪಕ ಮತ್ತು ಪುಟ ಸಚಿವನಾಗಿದ್ದ ಆರ್.ಎಂ. ವೀರಪ್ಪನ್ ಬಳಗ, ಕ್ಕೊಂದೆಡೆ ವಿರೋಧಿ ನಾಯಕ ಡಿಎಂಕೆಯ ಣಾನಿಧಿಯನ್ನು ಸಂಭಾಳಿಸುವ ರಣತಂತ್ರದ ನಡುವೆಯೇ ಜಿಆರ್ ಹೃದಯ ಕದ್ದವಳು ಜಯಾ. ಎಂಜಿಆರ್ ಕೀಯಕ್ಕೆ ಬಂದಿದ್ದರಿಂದ ಸಿನಿಮಾ ಕೆರಿಯರ್ ಅಂತ್ಯ ತ್ತಾದರೂ ಜಯಾಳಲ್ಲಿ ಯೌವನವಿತ್ತು ಹುಮ್ಮಸ್ಸಿತ್ತು. ದ ಬೇರೆಲ್ಲ ಹಿರೀಕರು, ಕಾರ್ಯಕರ್ತರು, ಮಂತ್ರಿಗಳೆಲ್ಲರನ್ನೂ ಗೊತ್ತಿ ಜಯಾರನ್ನು ರಾಜ್ಯಸಭಾ ಸದಸ್ಯೆಯನ್ನಾಗಿ ಜಿಆರ್ ನೇಮಿಸಿದಾಗಲೂ ತಮಿಳುನಾಡಿನಲ್ಲಿ ಜಯಾ ಸಾಮರ್ಥ್ಯದ ಬಗ್ಗೆ ಯಾರಿಗೂ ಅಂದಾಜಿರಲಿಲ್ಲ.

ಸಾಮಾನ್ಯ ತಮಿಳು ರಾಜಕಾರಣಿಗಳಿಗಿಲ್ಲದ ಇಂಗ್ಲಿಷ್ ಪಾಂಡಿತ್ಯ, ಎಂಥವರೊಂದಿಗೂ ಬೆರೆಯಬಲ್ಲ ಬಿಂದಾಸ್ ವ್ಯಕ್ತಿತ್ವದಿಂದಾಗಿ ಜಯಾ ಕಾಂಗ್ರೆಸ್‌ನ ಅನೇಕ ರಾಜಕಾರಣಿಗಳ ಆತ್ಮೀಯತೆ ಗಳಿಸಿದ್ದು ಈ ಸಂದರ್ಭದಲ್ಲೇ. ಜಯಾರನ್ನು ಎಂಜಿಆರ್ ತನ್ನ ಪಕ್ಷದ ಪ್ರಾಪಗಾಂಡಾ ಸೆಕ್ರೆಟರಿಯನ್ನಾಗಿ ನೇಮಿಸಿದ್ದು ಮಾತ್ರವಲ್ಲ, ಅದಕ್ಕೆಂದೇ ಪಕ್ಷದಲ್ಲಿ ವಿಶೇಷ ಹುದ್ದೆಯನ್ನು ಸೃಷ್ಟಿಸಿದರು. ದಿನೇದಿನೇ ಎಂಜಿಆರ್ ಅಂತಃಪುರದಲ್ಲಿ ಪ್ರಾಬಲ್ಯಕ್ಕೆ ಬರುತ್ತಿದ್ದ ಜಯಾರ ವೇಗ ಮತ್ತು ವರ್ಚಸ್ಸನ್ನು ಕಂಡೇ ಅನೇಕರ ಕಣ್ಣು ಕೆಂಪಾದವು. ಈ ಪೈಕಿ ಒಂದು ಎಂಜಿಆರ್ ಸಂಪುಟದ ಪ್ರಭಾವಿ ಮಂತ್ರಿ ಆರ್.ಎಂ. ವೀರಪ್ಪನ್ ಆದರೆ ಮತ್ತೊಂದು ವಿರೋಧಿ ನಾಯಕ ಕರುಣಾನಿಧಿ!

ತಂದೆ ಪೆರಿಯಾರ್ ಹುಟ್ಟು ಹಾಕಿದ ಬ್ರಾಹ್ಮಣ ವಿರೋಧಿ ಪಕ್ಕಾ ದ್ರಾವಿಡ ಚಳವಳಿಯೊಂದರ ಸರ್ಕಾರ ಮುಂದೊಮ್ಮೆ ಬ್ರಾಹ್ಮಣ ವರ್ಗದ ಜಯಾ ಕೈವಶವಾಯಿತೆಂದರೆ ಏನು ಗತಿ?

ಹಾಗಂತ ಇವರ್‍ಯಾರೂ ಕೈಕಟ್ಟಿ ಕೂರಲಿಲ್ಲ. ಒಂದೆಡೆ ಆರ್.ಎಂ. ವೀರಪ್ಪನ್ ಕೂಟ ಎಂಜಿಆರ್ ಪತ್ನಿ ಜಾನಕಿಯನ್ನು ಮುಂದಿಟ್ಟುಕೊಂಡು ಅಖಾಡಕ್ಕಿಳಿದರೆ ಇನ್ನೊಂದೆಡೆ ಕರುಣಾನಿಧಿ ಪಟಾಲಮ್ಮಿನ ರಣತಂತ್ರಗಳಿದ್ದವು. ಇಂಥಾ ಜಿದ್ದಾಜಿದ್ದಿಯ ನಡುವೆಯೇ 1987 ರ ಡಿಸೆಂಬರ್‌ನಲ್ಲಿ ಎಂಜಿಆರ್ ಕೊನೆಯುಸಿರೆಳೆದರು. ಎಂಜಿಆರ್‌ರ ರಾಮಾವರಂ ನಿವಾಸದಲ್ಲಿದ್ದ ಅವರ ಕಳೇಬರವನ್ನು ನೋಡಲು ಜಯಾರನ್ನು ಒಳಕ್ಕೆ ಬಿಡಲೇ ಇಲ್ಲ. ಆದರ ಮರುದಿನ ರಾಜಾಜಿ ಹಾಲ್‌ನಲ್ಲಿಟ್ಟಿದ್ದ ಎಂಜಿಆರ್ ಕಳೇಬರದ ಪಕ್ಕ ಜಯಾ ಅಕ್ಷರಶಃ ಪತ್ನಿಯಂತೆ ಅವರ ತಲೆ ಬಳಿ ನಿಂತಿದ್ದನ್ನು ಕಂಡ ಜನಕ್ಕೆ ಹಕೀಕತ್ತು ಅರ್ಥವಾಗಿತ್ತು. ಮರುದಿನ ಮಿಲಿಟರಿಯವರನ್ನು ಛೂಬಿಟ್ಟು ಎಂಜಿಆರ್ ಕಳೇಬರದತ್ತ ಬಾರದ ಹಾಗೆ ಜಯಾರನ್ನು ಹೊರದಬ್ಬಿ ಅವಮಾನಿಸಿದ್ದೇ ದೊಡ್ಡ ಸುದ್ದಿಯಾಯಿತು.



ದ್ರೌಪದಿ ಶಪಥ

ಎಂಜಿಆರ್ ನಿಧನಾನಂತರ ಆರ್.ಎಂ. ವೀರಪ್ಪನ್ ಬೆಂಬಲದೊಂದಿಗೆ ಪತ್ನಿ ಜಾನಕಿ ಮುಖ್ಯಮಂತ್ರಿಯಾದರೆ ಜಯಾ ಅದನ್ನು ಕಂಡೂ ಕೈಕಟ್ಟಿ ಕೂರಲಿಲ್ಲ. ತನ್ನದೇ ಅಣ್ಣಾಡಿಎಂಕೆ ಎಂದು ಹಠಕ್ಕೆ ಬಿದ್ದರು. ಇದರ ಪ್ರತಿಫಲವಾಗಿ 1989 ರ ಚುನಾವಣೆಯಲ್ಲಿ ಮತ್ತೆ ಕರುಣಾನಿಧಿ ಅಧಿಕಾರಕ್ಕೆ ಬರುವಂತಾಯಿತು. ಅಣ್ಣಾಡಿಎಂಕೆಯ ಇಬ್ಬಣಗಳೂ ನೆಲಕಚ್ಚಿದ್ದು ಒಂದು ಬಣಕ್ಕೆ ಜಾನಕಿ ನಾಯಕಿಯಾದರೆ ಮತ್ತೊಂದು ಜಯಾ. ಆದರೆ ತಮಿಳು ಮತದಾನ ಮನಸ್ಥಿತಿಗೂ ಎಂಜಿಆರ್ ಸಾಯುವ ಮುನ್ನ ಮಾಡಿಟ್ಟಿದ್ದ 'ವಿಲ್'ಗೂ ಏನೋ ತಾಳೆಯಿತ್ತು. ಖುದ್ದು ಜಾನಕಿಯೇ ಎಂಜಿಆರ್ ಸ್ವಕ್ಷೇತ್ರ ಆಂಡಿಪಟ್ಟಿಯಲ್ಲಿ ಸೋತದ್ದೂ ಜಯಲಲಿತಾ ತನ್ನ ಜೊತೆ 27 ಮಂದಿ ಎಮ್ಮೆಲ್ಲೆಗಳನ್ನು ಗೆಲ್ಲಿಸುವಷ್ಟರಮಟ್ಟಿಗೆ ಮೇಲುಗೈ ಸಾಧಿಸಿದ್ದರು. ಜಯಾ ಜಾಣ್ಮೆ ಮತ್ತು ಚಾಕಚಕ್ಯತೆಯ ಫಲವಾಗಿ ಹರಿದುಹಂಚಿಹೋಗಿದ್ದ ಎಐಡಿಎಂಕೆಯ ಇತರೇ ಬಣಗಳೂ ಒಂದುಗೂಡಿದವು. ಇದೆಲ್ಲದರ ಪ್ರತಿಫಲವೋ ಎಂಬಂತೆ ತಮಿಳುನಾಡು ವಿಧಾನಸಭೆಯೊಳಗೊಂದು ನಾಟಕೀಯ ಪ್ರಹಸನವೇ ನಡೆದುಹೋಯಿತು.

ಅದು ಜಯಾ ಮೇಲೆ ಡಿಎಂಕೆ ಶಾಸಕರುಗಳು ನಡೆಸಿದ ಅಮಾನವೀಯ ದಾಳಿ. ಯಾರೋ ಶಾಸಕನೊಬ್ಬ ಜಯಾ ಸೀರೆಗೇ ಕೈಯಿಟ್ಟನಂತೆ ಎಂದೂ ಸುದ್ದಿ ಹಬ್ಬಿತು. ಹೋದ ಸೀರೆ, ಅಳಿಸಿದ್ದ ಕುಂಕುಮ, ಕೆದರಿದ್ದ ಕೂದಲು ಸಮೇತ ಪತ್ರಕರ್ತರೆದುರು ಜಯಾ ಕಣ್ಣೀರಿಟ್ಟರು. 'ದ್ರೌಪದಿ ಶಪಥದಂತೆ ನಾನಿನ್ನು ಮುಂದೆ ವಿಧಾನಸಭೆಯೊಳಕ್ಕೆ ಕಾಲಿಡುವುದಿಲ್ಲ, ಕಾಲಿಟ್ಟರೆ ಅದು ಮುಖ್ಯಮಂತ್ರಿಯಾಗಿ ಮಾತ್ರ' ಎಂದು ಜಯಾ ಅಬ್ಬರಿಸಿಬಿಟ್ಟರು. ಆಕೆಯೊಳಗಿದ್ದ ಅಗ್ನಿ ಪರ್ವತದ ಸಂಕೇತವಾಗಿತ್ತು. ಅದೇನು ಲೀಲೆಯೋ ಗೊತ್ತಿಲ್ಲ; ಅದೇ



ಹೊತ್ತಿಗೆ ರಾಜೀವ್ ಗಾಂಧಿ ಹತ್ಯೆಯಾಯಿತು.

ಕಾಂಗ್ರೆಸ್‌ನೊಂದಿಗೆ ಹೊಂದಾಣಿಕೆ ಮಾಡಿಕೊಂಡಿದ್ದ ಜಯಲಲಿತಾ ಅಭೂತಪೂರ್ವ ಬಹುಮತ ಗಳಿಸಿ ಮುಖ್ಯಮಂತ್ರಿಯಾದರು. ಅದು ಜಯಾ ಪಾಳೇಗಾರಿಕೆ ವಿಜೃಂಭಿಸಿದ ಕಾಲ. ಮೊದಲು ಎಂಜಿಆರ್ ಚಿತ್ರಗಳ ಹಳೇ ಹೀರೋಯಿನ್‌ಗಳ ಜೊತೆ ಹೆಣಗಾಟ, ಆನಂತರ ಎಂಜಿಆರ್ ಉತ್ತರಾಧಿಕಾರತ್ವಕ್ಕಾಗಿ ಕಾಳಗ, ತದನಂತರ ಪಕ್ಷವನ್ನು ಕೈವಶ ಮಾಡಿಕೊಳ್ಳುವಲ್ಲಿನ ಜಿದ್ದಾಜಿದ್ದಿ, ಆನಂತರ ಕರುಣಾನಿಧಿಯೊಡನೆಯ ಸಂಘರ್ಷ- ಹೀಗೆ ಒಂದರ ಮೇಲೊಂದು ಸಂಘರ್ಷಗಳಲ್ಲೇ ಜಯಾ ಬದುಕು ಸಾಗಿಹೋಯಿತು. ಮೊದಲು ಮುಖ್ಯಮಂತ್ರಿಯಾದ ಮೇಲೆ ನೂರು ಕೋಟಿ ಸುರಿದು ದತ್ತು ಮಗನ ಮದುವೆ ಮಾಡಿದ್ದು, ಒಂದರ ಮೇಲೊಂದರಂತೆ ನಡೆದ ಹಗರಣಗಳು ಜಯಾ ವ್ಯಕ್ತಿತ್ವದ ಬಗ್ಗೆ ಜನಸಾಮಾನ್ಯರಿಗಿದ್ದ ನಂಬಿಕೆಯನ್ನೆಲ್ಲ ಹುಸಿಗೊಳಿಸಿತ್ತು. ಎಲ್ಲಕ್ಕೂ ಮಿಗಿಲಾಗಿ ಜಯಾ ಇಮೇಜಿಗೆ ಧಕ್ಕೆಯಾಗಿದ್ದು ಶಶಿಕಲಾ ನಟರಾಜನ್‌ಳ ಭಾನಗಡಿಗಳು. ಇದೇ ಜಯಾ ಪಾಲಿಗೆ ಮುಳುವಾಯಿತು. 1996 ರ ಚುನಾವಣೆಯಲ್ಲಿ ಜಯಾ ಹೀನಾಯವಾಗಿ ಸೋತಳು. ಗೆದ್ದ ಕರುಣಾನಿಧಿ ಭ್ರಷ್ಟಾಚಾರದ ಆರೋಪ ಹೊರಿಸಿ ಇಡೀ ಜಯಾ ಆಸ್ತಿಪಾಸ್ತಿಗಳ ಮೇಲೆಲ್ಲ ರೇಡು ಮಾಡಿಸಿದ. ಗೆಳತಿ ಶಶಿಕಲಾಳ ಸಹವಾಸವೇ ಉರುಳಾಗಿ ಪರಿಣಮಿಸಿತ್ತು.

ಜೈಲುವಾಸ

ಆದರೆ ಕರುಣಾನಿಧಿಯ ಸ್ವಯಂಕೃತಾಪರಾಧಗಳಿದ್ದವಲ್ಲ, ಯಾವ ಜಯಲಲಿತಾ ವಿರುದ್ಧ ಭ್ರಷ್ಟಾಚಾರದ ಆರೋಪ ಹೊರಿಸಿ ಆಕೆಯನ್ನು ಜೈಲುಪಾಲಾಗುವಂತೆ ಕರುಣಾನಿಧಿ ಮಾಡಿದ್ದನೋ ಅದಕ್ಕಿಂತಲೂ ಹೀನ ಭ್ರಷ್ಟ ಪ್ರಕರಣಗಳು ಕರುಣಾನಿಧಿ ಮತ್ತಾತನ ಮಕ್ಕಳಿಂದ ನಡೆದವು. 2011 ರ ಚುನಾವಣೆಯಲ್ಲಿ ಡಿಎಂಕೆ ನೆಲ ಕಚ್ಚಿತು. ಜಯಾ ಮತ್ತೆ ಅಧಿಕಾರಕ್ಕೆ ಬಂದಳಾದರೂ ಈಗ ಪರಿಸ್ಥಿತಿ ಬೇರೆಯೇ ಆಗಿತ್ತು, ಹಿಂದಿನ ಆರೋಗ್ಯವಿರಲಿಲ್ಲ, ಸಸಿಕಲಾಳನ್ನು ದೂರ ಮಾಡಿದಂತೆ ಹೆಣೆದ ತಂತ್ರಕ್ಕೆ ತಕ್ಕಂತೆ ಆಕೆಯನ್ನು ಸಮೀಪಕ್ಕೆ ಬಿಟ್ಟುಕೊಳ್ಳುತ್ತಿರಲಿಲ್ಲ, ಶಶಿಕಲಾ ಬದಲಿಗೆ ಶೀಲಾ ಬಾಲಕೃಷ್ಣನ್ ಎಂಬ ನಿವೃತ್ತ ಐಎಎಸ್ ಅಧಿಕಾರಿಣಿಯನ್ನು ತಂದಿಟ್ಟುಕೊಂಡರೆ, ಆಕೆಯನ್ನೂ ಶಶಿಕಲಾಳೇ ನಿಯಂತ್ರಿಸುವಂತಾಗಿತ್ತು. ಇಷ್ಟಾಗಿಯೂ ತಮಿಳುನಾಡಿನ ಸರ್ವಾಧಿಕಾರಿಯಂತೆ ಮೆರೆದ ಜಯಾಗೆ 2014 ರಲ್ಲಿ ಬೆಂಗಳೂರಿನ ವಿಶೇಷ ನ್ಯಾಯಾಲಯದ ಜಸ್ಟೀಸ್ ಡಿಕುನ್ಹಾ ಕೊಟ್ಟ ತೀರ್ಪು ಮಾರಕವಾಯಿತು.

28 ದಿನಗಳ ಕಾಲ ಪರಪ್ಪನ ಅಗ್ರಹಾರ ಜೈಲಲ್ಲಿ ಶಿಕ್ಷೆ ಕಳೆಯಬೇಕಾದ ಜಯಾ ದುರ್ಗತಿ ಆಕೆಯ ಆರೋಗ್ಯವನ್ನೇ ಹೈರಾಣು ಮಾಡಿತ್ತು. ಹಾಗಿದ್ದೂ 2016 ರ ಚುನಾವಣೆಯನ್ನು ಎದುರಿಸಿದ ಜಯಲಲಿತಾ ಅದಕ್ಕೆ ಬಂಡವಾಳವನ್ನಾಗಿ ಹಾಕಿದ್ದು ತನಗಾದ ಜೈಲು ಶಿಕ್ಷೆಯನ್ನೇ. ಕರುಣಾನಿಧಿಯ ವೃದ್ಧಾಪ್ಯ, ಆತನ ಮಕ್ಕಳ ಕಚ್ಚಾಟ; ಜಯಾ ಬೆಂಬಲಿಗರ ದುಡ್ಡಿನ ಬಲದ ಮುಂದೆ ಡಿಎಂಕೆಯ ಆಟ ನಡೆಯಲ್ಲೇ ಇಲ್ಲ. ನಟ ವಿಜಯಕಾಂತ್ ಏನಾದರೂ ಡಿಎಂಕೆ ಜೊತೆ ಕೈಜೋಡಿಸಿದ್ದರೆ ಏನಾಗುತ್ತಿತ್ತೋ, ಆತನ ದುರಾಶೆ ಆತನಿಗೇ ಮುಳುವಾಯಿತು. ಹಂಚಿಹೋದ ವಿರೋಧ ಪಕ್ಷಗಳ ಕಚ್ಚಾಟದ ಲಾಭ ಪಡೆದು 2016 ರ ಚುನಾವಣೆಯಲ್ಲಿ ಸಾಧಾರಣ ಬಹುಮತ ಪಡೆದ ಜಯಲಲಿತಾ ತನ್ನ ಗುರು ಎಂಜಿಆರ್‌ರಂತೆ ಸತತ ಹತ್ತು ವರ್ಷಗಳ ಅವಧಿಗೆ ಮುಖ್ಯಮಂತ್ರಿಯಾಗುವ ಆಸೆ ಹೊತ್ತೇ ಪ್ರಮಾಣವಚನ ಸ್ವೀಕರಿಸಿದ್ದಳು.

ಆದರೆ ಆರೋಗ್ಯ ಕೇಳಬೇಕಲ್ಲ. ಹೆಚ್ಚುಕಮ್ಮಿ ಎರಡು ತಿಂಗಳ ಕಾಲದ ಆಕೆಯ ಆಸ್ಪತ್ರೆ ಹೆಣಗಾಟ ಅಂತಿಮವಾಗಿ ಡಿಸೆಂಬರ್ ಐದಕ್ಕೆ ಅಂತ್ಯ ಕಂಡಿತ್ತು. ಮೊದಲ ತಂದೆಯ ಅಕಾಲಮೃತ್ಯುವಿನಿಂದಾದ ಆಘಾತ, ಅದನ್ನು ಸವಾಲಾಗಿ ಪರಿಗಣಿಸಿದ ತಾಯಿಯ ಹೆಣಗಾಟ, ತದನಂತರ ಸಿನಿಮಾ ರಂಗದ ಸಂಘರ್ಷ, ಅಲ್ಲಿ ಒಂದಾದಮೇಲೊಂದರಂತೆ ನಾಯಕಿಯರೊಂದಿಗಿನ ಸೆಣಸಾಟ, ಅದು ಮುಗಿಯಿತೆನ್ನುವ ಹೊತ್ತಿಗೆ ಚಿತ್ರರಂಗವನ್ನೇ ತೊರೆದ ಎಂಜಿಆರ್ ರಾಜಕೀಯಕ್ಕಿಳಿದ ಹತಾಶೆ, ಅನಿವಾರ್ಯವಾಗಿ ರಾಜಕೀಯಕ್ಕಿಳಿಯಬೇಕಾದ ಒತ್ತಡ, ಅಷ್ಟರಲ್ಲೇ ಎಂಜಿಆರ್ ಮರಣ, ಆಘಾತ, ಅಂತ್ಯಕ್ರಿಯೆಗೂ ಸೇರಿಸದೇ ಅವಮಾನ, ಅದೇ ಅವಮಾನವನ್ನು ಬಂಡವಾಳವಾಗಿಸಿ ಪಕ್ಷದ ಸಾರಥ್ಯ ವಹಿಸಿಕೊಂಡರೆ ಅದಕ್ಕೂ ನೂರೆಂಟು ವಿಘ್ನ, ಮತ್ತೆ ವಿಧಾನಸಭೆಯಲ್ಲಾದ ಅಪಮಾನ- ಹೀಗೆ ತನಗಾದ ಪ್ರತಿ ಅನುಮಾನವನ್ನೂ, ತನ್ನ ಪಾಲಿನ ಪ್ರತಿದೂರತ್ವವನ್ನು ಬಂಡವಾಳವಾಗಿಸಿಕೊಂಡೇ ಮುಂದಿನ ಗುರಿಗೆ ಲಗ್ಗೆಯಿಟ್ಟು ಅದನ್ನು ದಕ್ಕಿಸಿಕೊಳ್ಳುತ್ತಲೇ ಮತ್ತೊಂದು ಯುದ್ಧಕ್ಕೆ ಇನ್ನೊಂದು ಸೆಣಸಾಟಕ್ಕೆ ಅಣಿಯಾಗುತ್ತಲೇ ಬಂದವಳು ಅಮ್ಮ.

ತನ್ನಿಡೀ ಆಯಸ್ಸನ್ನು ಬುಲೆಟ್ ಪ್ರೂಫ್ ಜಾಕೆಟ್ಟಿನೊಳಗೆ ಕಳೆಯುವಂತಾಯ್ತು. ಒಬ್ಬ ಮಹಿಳೆ ಬುಲೆಟ್ ಪ್ರೂಫ್ ಜಾಕೆಟ್ ತೊಟ್ಟೇ ರಾಜ್ಯ ಸುತ್ತಿ ಚುನಾವಣೆ ಪ್ರಚಾರ ಮಾಡುವುದೆಂದರೆ ಸಣ್ಣ ಮಾತ್ಸೆ? ವೀರಪ್ಪನ್‌ನಂಥ ನರಹಂತಕನನ್ನು ಮುಗಿಸುವುದೆಂದರೆ ಮಾಮೂಲಿನ ಸಂಗತಿಯೇ? ಒಂದಲ್ಲ ಎರಡು ಬಾರಿ ಜೈಲು. ಪದೇಪದೇ ಹತ್ಯಾಯತ್ನ, ಇಷ್ಟೆಲ್ಲದರ ಹೊರತಾಗಿಯೂ ತಮಿಳುನಾಡಿನಂಥ ರಾಜ್ಯವೊಂದಕ್ಕೆ ಓರ್ವ ಮಹಿಳೆಯಾಗಿ ಒಂದಲ್ಲ ಮೂರು ಬಾರಿ ಮುಖ್ಯಮಂತ್ರಿಯಾಗುವುದೆಂದರೆ ಅದು ಸಣ್ಣ ಮಾತೆ?


ಜಯಾ ಎದುರಿಸಿದ ಸವಾಲುಗಳು ಮತ್ತು ಸಂಕಷ್ಟಗಳು ಅಣ್ಣಾ ದೊರೆ, ಕರುಣಾನಿಧಿ, ಎಂಜಿಆರ್‌ರಂಥವರಿಗಿರಲಿಲ್ಲ. ತಾನು ಹೆಣ್ಣಾಗಿ ಹುಟ್ಟಿದ ತಪ್ಪಿಗೋ ಅಥವಾ ಬಲಾಢ್ಯ ಕುಟುಂಬವೊಂದರ ಬೆಂಬಲವಿಲ್ಲದ ಕಾರಣಕ್ಕೋ ಜಯಾ ಪಟ್ಟ ಕಷ್ಟಗಳು, ಅನುಭವಿಸಿದ ಅವಮಾನಗಳೇ ಅವರನ್ನು ಮತ್ತಷ್ಟು ಗಟ್ಟಿಗೊಳಿಸಿದವು. ಜಯಾ ಬೆಂಕಿಯಲ್ಲಿ ಅರಳಿದ [illegible].

ರಾ. ಸೋಮನಾಥ್

ವಿಶೇಷ ಸಂದರ್ಶನ

"ಎಂಜಿಆರ್ ಹೆಸರಲ್ಲಿ ಮೋಸ!"

1985ರಲ್ಲಿ ಜಯಲಲಿತಾ ಅವರನ್ನು ಎಐಎಡಿಎಂಕೆ ಪಕ್ಷದಿಂದ ಓಡಿಸಲು ಕೆಲವು ನಾಯಕರು ಪ್ರಯತ್ನಿಸಿದ್ದರು. ಆ ಸಂದರ್ಭದಲ್ಲಿ ಪತ್ರಿಕೆಗಾಗಿ ಸಿ.ಎಸ್. ದ್ವಾರಕಾನಾಥ್ ಚೆನ್ನೈಯಲ್ಲಿ ಜಯಲಲಿತಾರನ್ನು ಸಂದರ್ಶಿಸಿದ್ದರು. ನಮ್ಮ ಪತ್ರಿಕೆಯ ಓದುಗರಿಗೆ ಆ ಸಂದರ್ಶನವನ್ನು ಇಲ್ಲಿ ಮರುಪ್ರಕಟಿಸುತ್ತಿದ್ದೇವೆ.



ಮದರಾಸಿನ ಪೊಯೆಸ್ ಗಾರ್ಡನ್‌ನಲ್ಲಿರುವ ವಿಶಾಲವಾದ ಮನೆ ಕಾಂಪೌಂಡಿನಲ್ಲಿದ್ದೆ. ನಾನಾ ರೀತಿಯ ಬಣ್ಣ ಬಣ್ಣದ ಹೂಗಿಡಗಳಿಂದಾಗಿ ಇನ್ನಷ್ಟು ಸುಂದರವಾಗಿತ್ತು. ಕೆಲಸದವರು ಹಾಗೂ ಸಿಬ್ಬಂದಿ ವರ್ಗದವರ ಚುರುಕಿನ ಓಡಾಟ. ಮನೆಯಲ್ಲಿ ಆವರಿಸಿದ್ದ ದಟ್ಟ ನಿಶ್ಶಬ್ದತೆ ಮುಖ್ಯಮಂತ್ರಿಗಳೇ ಮುಂತಾದ ಯಾವುದೋ ಪ್ರಭಾವಿತರ ನಿವಾಸದಂತೆ ತೋರುತ್ತಿತ್ತು. ಎಲ್ಲಿ ನೋಡಿದರೂ ಎಂಜಿಆರ್ ಮತ್ತು ಜಯಲಲಿತಾರ ಭಾವಚಿತ್ರಗಳು ಕಂಗೊಳಿಸುತ್ತಿದ್ದವು.

ಆಕರ್ಷಕವಾಗಿ ಅಲಂಕರಿಸಿದ್ದ ಹವಾನಿಯಂತ್ರಿತ ಡ್ರಾಯಿಂಗ್ ರೂಮಿನಲ್ಲಿ ಅತ್ಯಂತ ಸರಳವಾಗಿ ಆದರೂ ಸುಂದರವಾಗಿ ಡ್ರೆಸ್ ಮಾಡಿಕೊಂಡು ಜಯಲಲಿತ ಕುಳಿತಿದ್ದರು. ಈಕೆಯ ಸೌಂದರ್ಯ ಈಕೆಯ ವಯಸ್ಸನ್ನು ಹಿಮ್ಮೆಟ್ಟಿಸಿದಂತೆ ಕಾಣುತ್ತಿತ್ತು! ಪರಸ್ಪರ ಪರಿಚಯದ ನಂತರ ಟೇಪ್‌ರೆಕಾರ್ಡ್‌ನ ಸ್ವಿಚ್ ಅಮುಕಿ "ಪ್ರಾರಂಭಿಸಬಹುದಲ್ಲವೆ" ಎಂದು ಇಂಗ್ಲಿಷ್‌ನಲ್ಲಿ ಆಣಿಯಾದರು. ನಾನು ಇಂಗ್ಲಿಷ್‌ನಲ್ಲೇ "ನೀವು ಕನ್ನಡಿಗರು ನಿಮ್ಮೊಂದಿಗೆ ಕನ್ನಡದಲ್ಲೇ ಮಾತಾಡಬೇಕೆಂದು ಬಂದಿರುವೆ" ಎಂದೆ.

ಜಯಲಲಿತ: ನನಗೆ ಕನ್ನಡ ಮರೆತುಹೋಗಿದೆ. ಯಾಕೆಂದರೆ ಬಹಳ ಚಿಕ್ಕಂದಿನಲ್ಲಿ ನಾನು ಕನ್ನಡ ಮಾತಾಡಿದ್ದು. ಮದ್ರಾಸಿಗೆ ಬಂದನಂತರ ನನ್ನೊಂದಿಗೆ ಕನ್ನಡ ಮಾತಾಡುವವರು ಯಾರೂ ಇಲ್ಲ. ಹೀಗಾಗಿ ನನಗೆ ಕನ್ನಡದ ಸಂಪರ್ಕವೇ ಇಲ್ಲದಂತಾಗಿದೆ.

ಪ್ರಶ್ನೆ: ನೀವು ಕನ್ನಡದ ಮನೆತನದಲ್ಲಿ ಹುಟ್ಟಿರುವವರು. ಎಷ್ಟೇ ಸಂಪರ್ಕವಿಲ್ಲದಿದ್ದರೂ ಕನ್ನಡ ಮಾತನಾಡಬಹುದು. ಇದೀಗ ನೀವು ಮಾತಾಡುತ್ತಿರುವ ಕನ್ನಡ ಚೆನ್ನಾಗೆ ಇದೆ....

ಜಯಲಲಿತ: ಇಲ್ಲಿ ಒಂದು ಕನ್‌ಫ್ಯೂಷನ್ ಇದೆ. ನಾನು ಹುಟ್ಟಿದ್ದು ಮೈಸೂರು. ನಿಜಕ್ಕೂ ನನ್ನ ಮದರ್ ಟಂಗ್ ತಮಿಳು. ನಮ್ಮದು ತಮಿಳು ಅಯ್ಯಂಗಾರಿ ಮನೆತನ. ನಮ್ಮ ತಾತ ಡಾ. ರಂಗಾಚಾರ್ ಮೈಸೂರಿನ ಮಹಾರಾಜರ ಕುಟುಂಬ ವೈದ್ಯರಾಗಿದ್ದರು ಹಾಗೂ ಮಹಾರಾಜರಿಗೆ ಬಹಳ ಹತ್ತಿರವಾಗಿದ್ದರು. ಆದ್ದರಿಂದಲೇ 'ಜಯ' ಎನ್ನುವಂತಹ ರಾಯಲ್‌ನೇಮ್‌ನ್ನು ನಮ್ಮ ಮನೆಯವರು ಉಪಯೋಗಿಸಿಕೊಳ್ಳಲು ಕೃಷ್ಣರಾಜೇಂದ್ರ ಒಡೆಯರ್ ಅನುಮತಿ ನೀಡಿದ್ದರು. ಇದರಿಂದಲೇ ನಮ್ಮ ತಂದೆ ಹೆಸರು ಜಯರಾಮ್. ನನ್ನ ಸಹೋದರಿ ಹೆಸರು ಜಯಸೀತ, ನಮ್ಮ ಅಣ್ಣನ ಹೆಸರು ಜಯಕುಮಾರ್. ಮೈಸೂರಿನ ನಮ್ಮ ಎರಡು ಮನೆಗಳ ಹೆಸರು 'ಜಯವಿಲಾಸ್' ಮತ್ತು 'ಲಲಿತ ವಿಲಾಸ್.' ಈ ಎರಡೂ ಮನೆಗಳ ಹೆಸರಿನಿಂದ 'ಜಯ' ಮತ್ತು 'ಲಲಿತ' ಎಂಬ ಪದಗಳನ್ನು ತೆಗೆದುಕೊಂಡು ನನ್ನ ಹೆಸರು 'ಜಯಲಲಿತ' ಎಂದು ಇಟ್ಟಿದ್ದಾರೆ....

.... ನನ್ನ ಎರಡನೇ ವಯಸ್ಸಿನಲ್ಲಿ ನಮ್ಮ ಅಪ್ಪ ತೀರಿಕೊಂಡರು. ಚಿಕ್ಕಮ್ಮನ ಬಳಿ ಸ್ವಲ್ಪ ದಿನ ಇದ್ದೆ. ನಂತರ ಅವರಿಗೂ ಮದುವೆ ಆಗಿ ಹೊರಟುಹೋದರು. ಅಮ್ಮ ಇನ್‌ಕಂಟ್ಯಾಕ್ಸ್ ಡಿಪಾರ್ಟ್‌ಮೆಂಟಿನಲ್ಲಿ (ಸಿನಿಮಾಗೆ ಬರಲಿಕ್ಕೆ ಮುಂಚೆ) ಕೆಲಸದಲ್ಲಿದ್ದರು. ನಾನು ಬೆಂಗಳೂರಿನಲ್ಲಿ ತಾತ ಅಜ್ಜಿ ಜತೆ ಇದ್ದೆ. ಬಿಷಪ್ ಕಾಟನ್ಸ್ ಕಾನ್ವೆಂಟಿನಲ್ಲಿ ಓದುತ್ತಿದ್ದೆ. ನಂತರ ಮದ್ರಾಸಿಗೆ ಬಂದೆ. 'ಚರ್ಚ್‌ಪಾರ್ಕ್ ಕಾನ್ವೆಂಟ'ನಲ್ಲಿ ಓದುತ್ತಿದ್ದೆ. ಎಲ್ಲದರಲ್ಲೂ ಫಸ್ಟ್ ಬರುತ್ತಿದ್ದೆ. **Best all rounder** ಅಂತ ನನಗೆ ಅವಾರ್ಡ್ ಸಿಕ್ಕಿತ್ತು. ನಾನು ಆ ಸ್ಕೂಲ್ ಬಿಟ್ಟ ಮೇಲೆ ಇದುವರೆಗೂ ಆ ಶಾಲೆಯಲ್ಲಿ ಆ ಅವಾರ್ಡ್ ಯಾರಿಗೂ ಸಿಕ್ಕಿಲ್ಲ...

(ನನ್ನ ಪ್ರಶ್ನೆಯ ಟ್ರ್ಯಾಕ್ ಯಾವಾಗಲೋ ತಪ್ಪಿಹೋಗಿತ್ತು. ಜಯಲಲಿತ ಅತ್ಯಂತ ಮಾತಿನಮಲ್ಲಿಯಾಗಿ ಅರಳುಹುರಿದಂತೆ ಮಾತಾಡುತ್ತಲೇ ಇದ್ದರು. ನಾನು ತಡೆದು ಬೇರೆ ಪ್ರಶ್ನೆ ಕೇಳಲಿಕ್ಕೆ ಪ್ರಯತ್ನಿಸಿದೆ, ಸಾಧ್ಯವಾಗಲಿಲ್ಲ. ಭೋರ್ಗರೆಯುವ ಕೊರೆತವನ್ನು ಸಹಿಸಿಕೊಂಡು ಆಗಾಗ ಟೈಂ ನೋಡುತ್ತಾ ಕುಳಿತೆ. ಆಕೆ ನಿಲ್ಲಿಸುವ ಸೂಚನೆಯನ್ನು ತೋರಲೇ ಇಲ್ಲ.)

..... ನನಗೆ ಕನ್ನಡವೆಂದರೆ ಇಷ್ಟವೆ. ಆದರೆ ಏನು ಮಾಡೋದು ಇಲ್ಲಿ ಮಾತಾಡಲೂ ಯಾರೂ ಸಿಗುತ್ತಿಲ್ಲ. ನಾನು ಮೊದಲು ನನ್ನ ಆರು ಚಿತ್ರಗಳನ್ನು ಕನ್ನಡದಲ್ಲಿಯೇ ಮಾಡಿದೆ. ಆಗ ಒಂದಷ್ಟು ಟಚ್ ಇತ್ತು. 1964ರಲ್ಲಿ ಸಿನಿಮಾ ಫೀಲ್ಡ್‌ಗೆ ಎಂಟರ್ ಆದೆ...

(ಈಕೆ ಹೀಗೇ ಅದೆಷ್ಟೋ ಕಾಲ ತನ್ನ ಬಗ್ಗೆಯೇ ಸತತವಾಗಿ ಹೇಳುತ್ತಿದ್ದರು. ನಾನು ಕೇಳಬೇಕಾದ ಅನೇಕ ಪ್ರಶ್ನೆಗಳು ನನ್ನಲ್ಲೇ ಉಳಿದುಬಿಟ್ಟಿದ್ದವು. ಮಧ್ಯದಲ್ಲೊಮ್ಮೆ ಜಯಲಲಿತ "ನನ್ನ ಕನ್ನಡ ಹೇಗಿದೆ" ಎಂದರು. "ನಿಮ್ಮಷ್ಟೇ ಚೆನ್ನಾಗಿದೆ" ಎಂದೆ. ಈ ಸಂದರ್ಭವನ್ನು ಉಪಯೋಗಿಸಿಕೊಂಡು ಕೊಂಚವೂ ತಡಮಾಡದಂತೆ ಪ್ರಶ್ನೆ ಕೇಳಿದೆ.)

ಪ್ರಶ್ನೆ: ಸದ್ಯದ ತಮಿಳುನಾಡಿನ ರಾಜಕೀಯ ಪರಿಸ್ಥಿತಿಯ ಬಗ್ಗೆ ನಿಮ್ಮ ಅನಿಸಿಕೆ ಏನು?

ಜಯಲಲಿತ : ಪತ್ರಿಕೆಗಳಲ್ಲಿ ನೀವು ನೋಡುತ್ತಿರಬಹುದು. ಎಂಜಿಆರ್ ಬರೋವರೆಗೂ ಇಲ್ಲಿ ಏನಾಗುತ್ತದೆಂದು ಹೇಳಲಿಕ್ಕಿಲ್ಲ. ನನ್ನ ಸಂದೇಹಗಳಿಗೆ ಪಾರ್ಟಿಯ ವರ್‍ಯಾರೂ ಇದುವರೆಗೂ ಉತ್ತರ ಕೊಟ್ಟಿಲ್ಲ. ಮತ್ತೆ ಹೊಸದೇನನ್ನೂ ಹೇಳುವಂತಿಲ್ಲ...

ಪ್ರಶ್ನೆ: ಪಾರ್ಟಿ ಪೋಸ್ಟ್‌ನಿಂದ ನಿಮ್ಮನ್ನು ತೆಗೆದುಹಾಕುವಂತೆ ಎಂಜಿಆರ್ ಬರೆದಿದ್ದಾರೆನ್ನಲಾದ ಪತ್ರಗಳನ್ನು "ಎಲ್ಲಾ ಬೋಗಸ್" ಎಂದು ಹೇಳಿದ್ದೀರಿ. ಇದನ್ನು ಹೇಗೆ ಸಮರ್ಥಿಸಿಕೊಳ್ಳುತ್ತೀರಿ?

ಜಯಲಲಿತ: ಎಂಜಿಆರ್ ಅವರಿಗೆ ಇದೆಲ್ಲ ತಿಳಿದೇ ಇರಲ್ಲ; ಅವರಿಗೆ ತಿಳಿಯದಂತೆ ಅವರ ಹಿಂದಿರುವ ಜನ ಮಾಡುತ್ತಿರುವ ಕೆಲಸಗಳಿವು. ಆ ಕಾಗದ ಅವರದೇ (ಎಂಜಿಆರ್) ಎನ್ನಲಿಕ್ಕೆ ಪ್ರೂಫ್ ಏನು? ಆ ಕಾಗದವನ್ನು ಯಾರೋ ಸ್ನೇಹಿತರು ಎಂಜಿಆರ್ ಬಳಿಯಿಂದ ತಂದರೆಂದು ಹೇಳುತ್ತಾರೆ. ಆ ಸ್ನೇಹಿತ ಯಾರು? ಇದನ್ನೆಲ್ಲಾ ಹೇಗೆ ನಂಬೋದು. ಇದೆಲ್ಲಾ ಮೋಸ ವಂಚನೆಯಲ್ಲವೆ? ಅವರಿಗೆ ನನ್ನನ್ನು ಪಾರ್ಟಿಯಿಂದ ತೆಗೆಯಲು ಯಾವುದೇ ಕಾರಣ ಸಿಕ್ಕಿಲ್ಲ. ಯಾವುದಾದರೊಂದು ಇಮೇಜಿನರಿ ರೀಜನ್ ನೀಡಲಿಕ್ಕೂ ಅವರಿಂದ ಆಗುತ್ತಿಲ್ಲ. ಕೊನೆಗೆ ನನ್ನನ್ನು ಆಂಟಿ ಪಾರ್ಟಿ ಆಕ್ಟಿವಿಟಿ ಎಂದು ಬ್ರಾಂಡ್ ಮಾಡುತ್ತಿದ್ದಾರೆ. ಅಂಥದ್ದು ನಾನೇನು ಮಾಡಿದ್ದೇನೆ? ನೀವೇ ಹೇಳಿ. (ಜಯಲಲಿತ ಒಂದಷ್ಟು ಭಾವುಕರಾಗಿದ್ದರು) ಮೂರು ವರ್ಷಗಳಿಂದಲೂ ಪಾರ್ಟಿಗಾಗಿ ದುಡಿದಿದ್ದೇನೆ. ಮೊನ್ನೆ ಎಲೆಕ್ಷನ್‌ನಲ್ಲಿ ಊಟ, ನಿದ್ದೆ ಬಿಟ್ಟು ಕೆಲಸ ಮಾಡಿ ನನ್ನನ್ನೇ ಆ ಪಾರ್ಟಿಗಾಗಿ ಅರ್ಪಿಸಿಕೊಂಡು ಪಾರ್ಟಿ ಗೆಲ್ಲುವಂತೆ ಮಾಡಿದ್ದೇನೆ. ಈಗ ನಾನು ಯಾಕೆ ಬೇಕು... (ನಾನು ತಡೆದು ಪ್ರಶ್ನಿಸಿದೆ)

ಪ್ರಶ್ನೆ: ಎಂಜಿಆರ್ ಹಿಂದಿರುಗಿದ ನಂತರ ನಿಮಗಾಗಿರುವ ಅನ್ಯಾಯವನ್ನು ಸರಿಪಡಿಸುತ್ತಾರೆಂಬ ನಂಬಿಕೆ ನಿಮಗಿದೆಯೆ?

ಜಯಲಲಿತ: ಅವರು (ಎಂಜಿಆರ್) ಹೇಗಿದ್ದಾರೆ ಎನ್ನುವುದೇ ಮುಖ್ಯ. ದೈಹಿಕವಾಗಿ ಆರೋಗ್ಯವಾಗಿರಬಹುದು. ಮಾನಸಿಕವಾಗಿ? ಅವರಿಗೆ ಮಾನಸಿಕ ಆರೋಗ್ಯ ಸರಿಯಿದ್ದಿದ್ದರೆ ಇದೆಲ್ಲಾ ಆಗುತ್ತಿತ್ತೇ? ಡಿಸೆಂಬರ್ 31 ರಾತ್ರಿ ಹನ್ನೆರಡು ಗಂಟೆಯಲ್ಲಿ ದೆಹಲಿಯ ತಮಿಳುನಾಡು ಗೆಸ್ಟ್‌ಹೌಸ್‌ನ ನನ್ನ ರೂಮಿಗೆ ನನ್ನನ್ನೇ ತಡೆಯಾಗುತ್ತಿತ್ತೇ? ಆ ಹೊತ್ತಿನಲ್ಲಿ ನಾನು ಹೋಟೇಲ್‌ಗೆ ಹೋಗಿ ಇರಬೇಕಾಯಿತು. ಎಂಜಿ[ಆರ್] ನನಗಾಗೇ ನೀಡಿದ್ದ ರೂಂ ಅದು. ಹೆಣ್ಣುಮಗಳ[ು] ಇರುತ್ತಾಳಲ್ಲ ಎಂದು ತಮಿಳುನಾಡು ಗೆಸ್ಟ್‌ಹೌ[ಸ್‌ನಲ್ಲಿ] ನನಗೂ ಸ್ವೀಟ್ ಆಫ್ ರೂಮ್ಸ್ ಕೊಡಿಸಿದ್ದ[ರು.] ಟೆಲಿಫೋನ್, ಪುಸ್ತಕಗಳು, ಇತರೆ ಬಿಲಾಂಗಿಂಗ್[ಸ್] ಇನ್ನೂ ಅಲ್ಲೇ ಇವೆ. ಈ ವಿಷಯ ಡಿ.ಎಂ.ಕೆ. ಪತ್ರಿಕೆಯೊಂದರಲ್ಲಿ ಪ್ರಕಟವಾಯಿತು. ಈ ... ಯಾವುದೇ ಆರೋಪಗಳನ್ನು ನಿರ್ಲಕ್ಷಿಸಿ ಉತ್ತ[ರ] ಹೋಗದವರು ಈ ವಿಷಯಕ್ಕೆ ಮಾತ್ರ ಉತ್ತ[ರ...] ಇದು ಇವರ ಗಿಲ್ಟಿಯನ್ನು ತೋರುತ್ತದೆಯಲ್ಲವೆ?

ಪ್ರಶ್ನೆ: ಕಳೆದ ವರ್ಷ ಸೆಪ್ಟೆಂಬರ್ ಒಂದರಂದು ... ಪಾರ್ಟಿ ಪೋಸ್ಟ್‌ಗೆ ರಾಜೀನಾಮೆ ನೀಡುವಂತೆ ... ಕೇಳಿದಾಗ ನೀವು ಇನ್ನು ಮುಂದೆ ಇನ್ನೂ ... ಪೋಸ್ಟ್‌ಗೆ ಹೋಗುವೆನೆಂದು ಹೇಳಿಕೊಂಡಿದ್ದೀರಿ. ... ಅಂಥದ್ದೇನೂ ಆಗಲಿಲ್ಲವಲ್ಲ?

ಜಯಲಲಿತ: ನಾನು ಆ ರೀತಿ ಹೇಳಿಲ್ಲ. ... ಏನೆಂದರೆ ಎಂಜಿಆರ್ ನನ್ನನ್ನು ರಾಜೀನಾಮೆ ಕೇ[ಳಿದರು] ನಾನು ಯಾಕೆ ಎಂದು ಕೇಳಿದೆ. ಇದು ಕೇವಲ ... ಪೊಲಿಟಿಕಲ್ ಮೂವ್ ಅಷ್ಟೇ. ಎರಡು ತಿಂಗಳ[ಲ್ಲಿ] ಇದೇ ಪೋಸ್ಟನ್ನು ನಿಮಗೆ ನೀಡುತ್ತೇನೆ ಅಂದರು. ... ಅನೇಕ ಮಂದಿ ಪಾರ್ಟಿ ಮುಖ್ಯರು, ಎಂ... ಕಾರ್ಯಕರ್ತರು ಆಕೆಯಿಲ್ಲದೆ ನಮಗ್ಯಾರಿಗೂ ... ಮಾಡಲು ಸಾಧ್ಯವಿಲ್ಲ, ತಕ್ಷಣ ಆಕೆಗೆ ಪೋಸ್ಟ್ ಹಿಂ[ದಿರುಗಿಸಿ] ಎಂದು ಪತ್ರಗಳ ಮೂಲಕ ಎಂಜಿಆರ್‌ರ... ಕೇಳಿಕೊಂಡರು. ಎಂಜಿಆರ್ ನಗುತ್ತಾ "ನಿನ್ನ ಬ... ಎಷ್ಟು ಪ್ರೀತಿ" ಎಂದು ಹೇಳಿದರು...

ಪ್ರಶ್ನೆ: ಒಂದು ಸಂದರ್ಭದಲ್ಲಿ ಎಂಜಿಆರ್ ಪ್ರಾ... ಸೆಕ್ರೆಟರಿ ಸ್ಥಾನಕ್ಕೆ ಜಯಲಲಿತ ಬಹಳ ಚಿಕ್ಕವರು ... ಅನನುಭವಿಗಳು ಎಂದಿದ್ದರಲ್ಲವೆ?

ಜಯಲಲಿತ: ಎಲ್ಲಾ ಸುಳ್ಳು. ಅವರು ನನ್ನ ... ರೀತಿ ಹೇಳಿಲ್ಲ. ಎಂಜಿಆರ್ ಯಾವುದೋ ಮೀಟಿ[ಂಗ್‌ನಲ್ಲಿ] ಈ ರೀತಿ ನನ್ನ ಮೇಲೆ ಮಾತಾಡಿದ್ದಾರೆ. ಆ ಟೇ[ಪ್] ... ಬಳಿ ಇದೆ ಎಂದು ಒಬ್ಬರು ಹೇಳುತ್ತಿದ್ದಾರೆ. ಅವರು ... ಹೇಳುವುದು ಬೇಡ. ಆದರೆ ಆ ಟೇಪ್ ಬಗ್ಗೆ ... ಗ್ಯಾರಂಟಿ? ನಮ್ಮ ಕಲ್ಚರಲ್‌ವಿಂಗ್‌ನ ಕಾರ್ಯಕ[ರ್ತ] ಶಿವಗಂಗೆ ಸೀರ್‌ರಾಜನ್ ಎನ್ನುವ ಆರ್ಟಿಸ್ಟ್ ಎಂ[ಜಿಆರ್] ಕರುಣಾನಿಧಿ ಎಲ್ಲರ ರೀತಿಯಲ್ಲೂ ಮಾತನಾಡ[ುತ್ತಾರೆ]. ... ವ್ಯಕ್ತಿ ಏನಾದರೂ ಎಂಜಿಆರ್‌ರ ಧ್ವನಿಯಲ್ಲಿ ನನಗೆ ... ಮಾಡಿದರೆ ನಾನು ಖಂಡಿತ ನಂಬಿಬಿಡುತ್ತಿದ್ದೆ. ... ಟೇಪ್‌ಗಳನ್ನು ಯಾರುಬೇಕಾದರೂ ಮಾಡಬಹುದ[ು]... (ಜಯಲಲಿತ ಇನ್ನೂ ಮಾತಾಡುತ್ತಲೇ ಇದ್ದರು.)

ಇನ್ನೂ ಅನೇಕ ಪ್ರಶ್ನೆಗಳು ನನ್ನಲ್ಲಿ ಹಾಗೇ ಉಳಿ[ದಿದ್ದವು.] ಆಗಲೇ ಒಂದು ಗಂಟೆ ಕಾಲ ಆಗಿತ್ತು. ಅವರು ... ಸಮಯ ಮುಗಿಯಿತೆಂದು ನಾನೇ ಅವರಿಗೆ ... ಎದ್ದೆ. "ಬಹಳ ವರ್ಷಗಳ ನಂತರ ನನ್ನನ್ನು ಕನ್ನ[ಡ] ಮಾತಾಡುವಂತೆ ಮಾಡಿದಿರಿ, ತುಂಬಾ ಥ್ಯಾಂಕ್ಸ್" ಎ[ಂದರು.] ತಮಿಳುನಾಡಿನ ರಾಜಕೀಯ ಅಲೆಗಳಲ್ಲಿ ಈ ಹೆಣ್ಣು ... ನಿಲ್ಲಬಹುದು ಎಂದು ಯೋಚಿಸುತ್ತಾ ನಮಸ್ತೆ ... ಹೊರನಡೆದೆ. ಜಯಲಲಿತ ಅತ್ಯಂತ ವಾಯಾಡಿ ... ಎನಿಸಿತು. ಆಕೆಯ ಮಾತುಗಳು ಇನ್ನೂ ಕಿ[ವಿಯಲ್ಲಿ] ಗುಸುಗುನಿಸುತ್ತಲೇ ಇದ್ದವು.

ಸಂದರ್ಶನ: ಸಿ.ಎಸ್. ದ್ವಾರಕಾನಾ[ಥ್]
ಫೆಬ್ರವರಿ 3, ...

---

09 ⏮ ಅಮ್ಮ

ಹೋಗದಿರಲು ಆಕೆ ನಿರ್ಧರಿಸಿದಳು. ಸೈನಿಕರ ಭದ್ರಕಾವಲಿನಲ್ಲಿ ಆಕೆ ತನ್ನ ಕಾಂಟೆಸ್ಸಾ ಕಾರ್‌ನಲ್ಲಿ ತನ್ನ ಮನೆಗೆ ಹಿಂದಿರುಗಿದರು.


ಆಕೆಗೆ ಆದ ಅವಮಾನದ ಸುದ್ದಿ ಕಾಡ್ಗಿಚ್ಚಿನಂತೆ ಹಬ್ಬಿತು. ಪಕ್ಷದ ಸದಸ್ಯರು ದಂಗುಬಡಿದು ಹೋದರು. ಪಕ್ಷದ ಸಂಸದರು, ಶಾಸಕರು, ಇತರೆ ನಾಯಕರು ಮತ್ತು ಕಾರ್ಯಕರ್ತರು ಆಕೆಯನ್ನು ಭೇಟಿಯಾಗಲು ಬಂದಾಗ ಆಕೆಯ ಆತ್ಮಕ್ಕೆ ಸಂತೋಷ ಆಗಿರಲಿಕ್ಕೂ ಸಾಕು. ಆಕೆಯೇ ಎಂಜಿಆರ್ ಅವರ ಉತ್ತರಾಧಿಕಾರಿ ಎಂದ ಅವರೆಲ್ಲ ಆಕೆಯ ಬೆಂಬಲಕ್ಕೆ ನಿಲ್ಲುವುದಾಗಿ ಭರವಸೆ ನೀಡಿದರು. ಪಕ್ಷದ ಬಹುತೇಕ ಕಾರ್ಯಕರ್ತರು "ನಮಗೆ ಆಕರ್ಷಕ ನಾಯಕತ್ವ ಬೇಕು. ಜಯಲಲಿತಾ ಒಬ್ಬರಿಗೇ ಜನರನ್ನು ಸೆಳೆಯುವ ಸಾಮರ್ಥ್ಯ ಇರುವುದು" ಎಂದರು.

ತಾನೇ ಎಂಜಿಆರ್ ಅವರ ಉತ್ತರಾಧಿಕಾರಿ ಎಂದು ಎಂಜಿಆರ್ ಅವರು ಹೇಳಿರದಿದ್ದರೂ ಪಕ್ಷದಲ್ಲಿ ತನ್ನ ಸ್ಥಾನ ಕುಗ್ಗಿಲ್ಲ ಎಂದು ಆಕೆಗೆ ಮನವರಿಕೆ ಆಯಿತು. ಆದರೆ ಆಗಲೇ ಚುನಾವಣೆಗೆ ಹೋಗುವ ಅಗತ್ಯವೇನೂ ಇರಲಿಲ್ಲ. ಎಐಎಡಿಎಂಕೆ ಸ್ಪಷ್ಟವಾದ ಬಹುಮತವನ್ನು ಪಡೆದಿತ್ತಲ್ಲದೆ ಮುಂದಿನ ಚುನಾವಣೆಗೆ ಇನ್ನೂ ಎರಡು ವರ್ಷಗಳು ಬಾಕಿ ಇದ್ದವು.

ಎಲ್ಲಾ ಗೊತ್ತಿರುವ ಮಹಿಳೆ

ಜಯಲಲಿತಾ ಮತ್ತು ಸಸಿಕಲಾ ನಡುವಿನ ಸಂಬಂಧ ಬಹಳ ರಹಸ್ಯವಾದದ್ದು ಮಾತ್ರವಲ್ಲ ಈ ಹಿಂದೆ ಜಯಲಲಿತಾರ ಅತ್ಯಂತ ನಿಷ್ಠಾವಂತ ಬೆಂಬಲಿಗರಾಗಿದ್ದವರಲ್ಲೂ ಅಸಮಾಧಾನ ಹುಟ್ಟಿಸಿದ ಸಂಬಂಧವೂ ಹೌದು. ತನ್ನ ಸಹೋದರ, ಇತರೆ ಸಂಬಂಧಿಗಳು ಮತ್ತು ಸ್ನೇಹಿತರನ್ನೆಲ್ಲ ದೂರ ಮಾಡಿದ್ದ ಜಯಲಲಿತಾ, ಈಗ ಸಸಿಕಲಾ ಮತ್ತು ತಾನು ಒಂದೇ ಗರ್ಭದಲ್ಲಿ ಜನಿಸದಿದ್ದರೂ ತಾವಿಬ್ಬರು ಸಹೋದರಿಯರು ಎಂದು ಘೋಷಿಸಿದರು. ಪಕ್ಷದ ಕಾರ್ಯಕರ್ತರು ಸಸಿಕಲಾ ಮತ್ತು ಪೋಯಸ್ ಗಾರ್ಡನ್ ಮನೆಯಲ್ಲಿ ಜಾಂಡಾ ಹೂಡಿದ್ದ ಆಕೆಯ ಸಂಗಡಿಗರು ನಾಯಕಿ ಜಯಲಲಿತಾ ಮತ್ತು ತಮ್ಮ ನಡುವೆ ಉಕ್ಕಿನ ಪರದೆಯನ್ನು ಸ್ಥಾಪಿಸಿದ್ದಾರೆ ಎಂದು ಭಾವಿಸಿದರು. ತಮ್ಮ 'ತಲೈವಿ' ಅವರಿಗೆ ಸಲ್ಲಿಸಿದ ಮನವಿಗಳು ಮತ್ತು ಸಂದರ್ಶನದ ಬೇಡಿಕೆಗಳು ಆಕೆಯನ್ನು ತಲುಪುತ್ತಲೇ ಇಲ್ಲ ಎಂದು ಭಾವಿಸಿದರು. ಆಕೆ ಪಕ್ಷದ ಕಚೇರಿಗೆ ಬರುವುದನ್ನೇ ನಿಲ್ಲಿಸಿದ್ದರು. ಪರಿಸ್ಥಿತಿಗಳ ಬಗ್ಗೆ ವರದಿಗಳನ್ನು ಸಲ್ಲಿಸುತ್ತಿದ್ದ ಜಿಲ್ಲಾ ಕಾರ್ಯದರ್ಶಿಗಳನ್ನು ಭೇಟಿ ಆಗುವುದನ್ನೇ ಆಕೆ ನಿಲ್ಲಿಸಿದ್ದಳು. ಜಯಲಲಿತಾ ಬದಲಾಗಿದ್ದಳು.

ಪ್ರತ್ಯೇಕವಾಗಿರಲು ಬಯಸುತ್ತಿದ್ದ ಮತ್ತು ಬಿಗುಮಾನದ ಸ್ವಭಾವದ ಜಯಲಲಿತಾ ಆಕೆಯನ್ನು ಸಂಪೂರ್ಣವಾಗಿ ನಂಬುವಂತಹ ಯಾವ ಗುಣ ಸಸಿಕಲಾಳಲಿತ್ತು?



ಸಸಿಕಲಾ ಜೊತೆ ಜಯಾ

ಜಯಲಲಿತಾ ಆಶಿಸಿದ್ದ ಮದುವೆ ಮತ್ತು ಮಕ್ಕಳು ... ಸಾಮಾನ್ಯ ಸಾಂಸಾರಿಕ ಜೀವನ ಆಕೆಗೆ ಸಿಗಲೇ ... ಆದರೀಗ ತನ್ನ ಸಮಸ್ಯೆಗಳನ್ನು ಸಹಾನುಭೂತಿ[ಯಿಂದ] ಆಲಿಸುವ ಗೆಳತಿ ಆಕೆಗೆ ಸಿಕ್ಕಿದ್ದಳು. ಈ ಗೆಳತಿ ... ಕ್ರಮಗಳನ್ನು ಪ್ರಶ್ನಿಸುವವಳಲ್ಲ. ತನ್ನೊಂದಿಗೆ ... ಮಾಡುವವಳಲ್ಲ. ತನ್ನ ಮನೆಯನ್ನು ನೋಡಿಕೊ[ಳ್ಳುವ] ಜವಾಬ್ದಾರಿಯನ್ನು ಹೊತ್ತುಕೊಂಡಿದ್ದ ಗೆಳತಿ ತನ್ನ ರಾಜ[ಕೀಯ] ನಿರ್ಧಾರಗಳಲ್ಲಿ ತಲೆ ಹಾಕುವವಳಲ್ಲ. ಈ ಕಾರಣಕ್ಕೇ ಕೆ... ಸಸಿಕಲಾ ಜಯಲಲಿತಾರ ರಾಜಕೀಯ ನಿರ್ಧಾ[ರಗಳ] ಸೂತ್ರಧಾರಿ ಎಂದಾಗ ಕಿರಿಕಿರಿ ಆಗುತ್ತದೆ. ಯಾ... ಅದು ಮುಖ್ಯಮಂತ್ರಿಯ ಕಾರ್ಯವನ್ನು ಅವಮಾನಿ[ಸುವುದು] ಮಾತ್ರವಲ್ಲ ಅದು ಕಳಪೆ ಆರೋಪವೂ ಆಗಿದೆ.

* * *

1996ರ ವಿಧಾನಸಭಾ ಚುನಾವಣೆ[ಯಲ್ಲಿ] ಜಯಲಲಿತಾರ ಸೋಲಿಗೆ ಕಾರಣ ಎ[ಂದು] ಉಲ್ಲೇಖಿಸಲಾಗುವುದು ಸಸಿಕಲಾ ಮತ್ತು ಆಕೆಯ ಸಂ[ಬಂಧಿಕರ] ಅತಿರೇಕಗಳು. ಆ ಅವಮಾನಕರ ಸೋಲಿನ ನಂತರ ಸಸಿಕಲಾಳನ್ನು ಕರುಣಾನಿಧಿ ಸರ್ಕಾರ ಫೆರಾ ಅಕ್ರ[ಮದ] ಆರೋಪದಡಿ ಜೈಲಿಗೆ ದೂಡಿದನಂತರ ಜಯ[ಲಲಿತಾ] 'ದಿ ಹಿಂದೂ' ಪತ್ರಿಕೆಗೆ ಒಂದು ಸುದೀರ್ಘ ಸಂ[ದರ್ಶನ] ಕೊಟ್ಟಿದ್ದರು. ಅದರಲ್ಲಿ ಅವರು ಹೀಗೆ ಹೇಳಿ[ದ್ದರು:] "ಸಂವಿಧಾನೇತರ ಶಕ್ತಿ ಕೇಂದ್ರದಂತೆ ಸಸಿಕಲಾ ... ವರ್ತಿಸಲಿಲ್ಲ. ರಾಜಕಾರಣಿಯೊಬ್ಬರ ಮನೆಯ ಅಗತ್ಯ...

ಮೈಸೂರು ಮೇಯರ್‌ಗಿರಿ: ಅದೇ ರಾಗ, ಹೊಸ ಮುಖ!



ಕೊನೆಗೂ ಜೆಡಿಎಸ್-ಬಿಜೆಪಿ ಮೈತ್ರಿಯಲ್ಲಿ ಜೆಡಿಎಸ್ ಮೈಸೂರು ಮಹಾನಗರ ಪಾಲಿಕೆಯ ಮೇಯರ್ ಅಧಿಕಾರ ಹಿಡಿಯುವಲ್ಲಿ ಸಫಲವಾಗಿದೆ. ಪಾಲಿಗೆ ಬಂದದ್ದೇ ಪಂಚಾಮೃತ ಎನ್ನುವಂತೆ ಬಿಜೆಪಿ ಮತ್ತೊಮ್ಮೆ ಉಪ ಮೇಯರ್ ಸ್ಥಾನಕ್ಕಷ್ಟೇ ತೃಪ್ತಿಪಟ್ಟುಕೊಳ್ಳಬೇಕಾಗಿದೆ. ಮೇಯರ್ ಆಗಿ ಕುಮಾರಣ್ಣ ಮತ್ತು ಅನಿತಕ್ಕನ ಆಪ್ತ ಎಂ.ಜೆ.ರವಿಕುಮಾರ್ (ಚಿನ್ನಿ ರವಿ) ಆಯ್ಕೆಯಾಗಿದ್ದಾರೆ. ಆ ಮೂಲಕ ಮೇಯರ್ ಆಕಾಂಕ್ಷಿಯಾಗಿದ್ದ ನಾಲ್ಕು ಬಾರಿ ಪಾಲಿಕೆ ಸದಸ್ಯನಾಗಿ ಆಯ್ಕೆಯಾಗಿರುವ ಜೆಡಿಎಸ್‌ನ ಹಿರಿಯ ಸದಸ್ಯ ಕೆ.ಟಿ.ಚಲುವೇಗೌಡರಿಗೆ ಹಿನ್ನಡೆಯಾಗಿದೆ. ಇನ್ನು ಮೇಯರ್ ರೇಸ್‌ನಲ್ಲಿದ್ದ ಕೆ.ವಿ.ಮಲ್ಲೇಶ್ ರೇಸ್‌ನ [illegible]ಭಾಗವನ್ನೂ ಕ್ರಮಿಸಲಾರದೆ ನಾಪತ್ತೆಯಾಗಿದ್ದಾರೆ.

ಪ್ರತಿ ಸಲದಂತೆ ಈ ಬಾರಿಯೂ ಮೇಯರ್ ಸ್ಥಾನಕ್ಕೆ [illegible]ಕೆ ಇಟ್ಟಿದ್ದ ಬಿಜೆಪಿ, ಕಾಂಗ್ರೆಸ್ ರಂಗಪ್ರವೇಶದಿಂದ [illegible]ಡುಸುಟ್ಟ ಬೆಕ್ಕಿನಂತಾಗಿತ್ತು. ಅನಿವಾರ್ಯವಾಗಿ ಜೆಡಿಎಸ್ [illegible]ಕ್ಕೆ ವಿಲವಿಲ ಒದ್ದಾಡಿದ ಬಿಜೆಪಿ "ನಮಗೆ ಉಪ ಮೇಯರ್ ಸ್ಥಾನವನ್ನೇ ಕೊಡಿ ಸಾಕು" ಎಂದು ಗೋಗರೆದು [illegible] ಲಕ್ಷ್ಮಣ ಅವರನ್ನು ಉಪ ಮೇಯರ್ ಮಾಡಿಕೊಂಡಿದೆ.

ಇಲ್ಲಿವರೆಗೆ ಅಧಿಕಾರದಲ್ಲಿದ್ದ ಮೇಯರ್ ಬಿ.ಎಲ್.ಭೈರಪ್ಪ ಮತ್ತು ಉಪ ಮೇಯರ್ ವನಿತಾ ಪ್ರಸನ್ನ ಅವರ ಅಧಿಕಾರಾವಧಿ ನವೆಂಬರ್ 12ಕ್ಕೆ ಅಂತ್ಯಗೊಂಡು, ಸರ್ಕಾರ ಹೊಸ ಮೀಸಲಾತಿ ಪಟ್ಟಿಯನ್ನು ಪ್ರಕಟಿಸಿತ್ತು. ಅದರಂತೆ ಮೇಯರ್ ಸ್ಥಾನವನ್ನು ಸಾಮಾನ್ಯ ವರ್ಗಕ್ಕೆ, ಉಪ ಮೇಯರ್ ಸ್ಥಾನವನ್ನು ಸಾಮಾನ್ಯ ವರ್ಗದ ಮಹಿಳೆಗೆ ನಿಗದಿಗೊಳಿಸ[illegible]ತ್ತು. ಮೀಸಲಾತಿ ಹೊರ ಬೀಳುತ್ತಿದ್ದಂತೆಯೇ ಪಾಲಿಕೆಯ ಸದಸ್ಯರು ಒಳರಾಜಕೀಯ ಶುರುವಿಟ್ಟುಕೊಂಡಿದ್ದರು. ಪ್ರಸ್ತುತ [illegible]ವಧಿಯಲ್ಲಿ ನಗರಪಾಲಿಕೆ ಅಧಿಕಾರ ಹಿಡಿಯಲು ಯಾವ ಪಕ್ಷಕ್ಕೂ ಬಹುಮತ ಇಲ್ಲದಿರುವುದರಿಂದ ಮೈತ್ರಿ [illegible]ರ್ಪಾಟಿನ ಕಸರತ್ತುಗಳೂ ನಡೆದಿದ್ದವು.

ಜೆಡಿಎಸ್‌ಗೆ ಮೈತ್ರಿ ಲಾಭ

ಮೈಸೂರು ಮಹಾನಗರ ಪಾಲಿಕೆಯಲ್ಲಿ ಒಟ್ಟು 65 ಸದಸ್ಯ ಸ್ಥಾನಗಳಿದ್ದು, ಕಾಂಗ್ರೆಸ್ ಮತ್ತು ಜೆಡಿಎಸ್‌ನ ತಲಾ [illegible] ಸದಸ್ಯರು, ಬಿಜೆಪಿಯಲ್ಲಿ 13, ಕೆಜೆಪಿಯ ಒಬ್ಬರು, ಬಿಎಸ್‌ಆರ್‌ನ ಒಬ್ಬರು, ಎಸ್‌ಡಿಪಿಐ ಪಕ್ಷದಿಂದ [illegible] ಸದಸ್ಯರು ಹಾಗೂ 8 ಮಂದಿ ಪಕ್ಷೇತರ ಸದಸ್ಯರು ಚುನಾಯಿತರಾಗಿದ್ದಾರೆ. ಯಾವ ಪಕ್ಷಕ್ಕೂ ಬಹುಮತ ಇಲ್ಲದ ಕಾರಣಕ್ಕಾಗಿ ಮೈತ್ರಿ ಅನಿವಾರ್ಯ. ಈ ಹಿಂದೆ ಜೆಡಿಎಸ್ ಹಾಗೂ ಬಿಜೆಪಿ ಎರಡೂ ಪಕ್ಷಗಳು ಹೊಂದಾಣಿಕೆ ಮಾಡಿಕೊಂಡು ಅಧಿಕಾರದ ಚುಕ್ಕಾಣಿ ಹಿಡಿದಿದ್ದವು. ಕಾಂಗ್ರೆಸ್ ಪಕ್ಷವೂ ಮೈತ್ರಿಗೆ ಉತ್ಸುಕತೆ ತೋರಿತ್ತಾದರೂ ಉದ್ದೇಶಪೂರ್ವಕವಾಗಿ ಮೈತ್ರಿಯನ್ನು ತಪ್ಪಿಸಲಾಗಿತ್ತು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ತವರು ಜಿಲ್ಲೆಯಲ್ಲಿ ಕಾಂಗ್ರೆಸ್ ಒಂದ ಅಧಿಕಾರ ಹಿಡಿಯುವ ಅವಕಾಶವನ್ನು [illegible]ತ್ತಿಕೊಳ್ಳುವುದು ಬಿಜೆಪಿಯ ಉದ್ದೇಶವಾಗಿತ್ತು. [illegible] ಅವಕಾಶವನ್ನು ಸಮರ್ಥವಾಗಿ ಬಳಸಿಕೊಂಡಿದ್ದ ಜೆಡಿಎಸ್, ಬಿಜೆಪಿ ಜೊತೆ ಅಧಿಕಾರ ಹಂಚಿಕೆಯ ಮೈತ್ರಿ ಮಾಡಿಕೊಂಡು ಸತತವಾಗಿ ಮೂರನೇ ಬಾರಿಗೆ ಮೇಯರ್ ಸ್ಥಾನವನ್ನು ದಕ್ಕಿಸಿಕೊಳ್ಳುವಲ್ಲಿ ಯಶಸ್ವಿಯಾಗಿದೆ. ಈಗಾಗಲೇ [illegible]ರಡು ಅವಧಿಯಲ್ಲೂ ಜೆಡಿಎಸ್-ಬಿಜೆಪಿ ಹೊಂದಾಣಿಕೆ ಮಾಡಿಕೊಂಡು ಅಧಿಕಾರ ನಡೆಸುತ್ತಿದ್ದು, ಅದೇ ಮೈತ್ರಿಯ ರಾಗ ಈ ಬಾರಿಯೂ ಮುಂದುವರಿದಿದೆ.

ಕಾಂಗ್ರೆಸ್ ರಂಗಪ್ರವೇಶವಾಗಿದ್ದೇಗೆ?

ಮೀಸಲಾತಿ ಪ್ರಕಟವಾಗುತ್ತಿದ್ದಂತೆಯೇ ಜೆಡಿಎಸ್‌ನಲ್ಲಿ ರಾಜಕೀಯ ಗರಿಗೆದರಿದ್ದರೆ, ಬಿಜೆಪಿಯಲ್ಲಿ ಆತಂಕ ಮನೆಮಾಡಿತ್ತು. ಇನ್ನು ಕಾಂಗ್ರೆಸ್ ನಡೆ ನಿಗೂಢವಾಗಿತ್ತು. ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಎಚ್.ಸಿ.ಮಹದೇವಪ್ಪ, ಮೈಸೂರಿನ ಶಾಸಕರಾದ ವಾಸು, ಎಂ.ಕೆ.ಸೋಮಶೇಖರ್ ಅವರು ಆರಂಭದಲ್ಲಿ ಇದರಲ್ಲಿ ಯಾವುದೇ ಆಸಕ್ತಿ ತೋರಿರಲಿಲ್ಲ. ಆದರೆ ವಿರೋಧ ಪಕ್ಷದ ನಾಯಕರಾದ ಜಿ.ಎಸ್.ಜಗದೀಶ್, ಮೈಸೂರಿನ ಶಾಸಕರಾದ ವಾಸು ಮತ್ತು ಬಿಡಿಎ ಅಧ್ಯಕ್ಷರೂ ಆಗಿರುವ ಪಿರಿಯಾಪಟ್ಟಣದ ಶಾಸಕ ಕೆ.ವೆಂಕಟೇಶ್ ಅವರ ಬೆಂಬಲಿಗ ಪ್ರಶಾಂತ್ ಗೌಡ ಮಹಾಪೌರ ಆಗುವ ಕನಸಿನಲ್ಲಿ ಕೊಂಚ ಉಸಿರಾಡುತ್ತಿದ್ದರು. ಚುನಾವಣೆ ನಡೆಯುವ ಕೊನೆಯ ವಾರದ ತನಕವೂ ನಿಗೂಢ ನಡೆ ಪ್ರದರ್ಶಿಸಿದ್ದ ಕಾಂಗ್ರೆಸ್ ದಿಢೀರನೆ ಅಖಾಡಕ್ಕಿಳಿದಿತ್ತು. ಸಿದ್ದರಾಮಯ್ಯ ಹಾಗೂ ಎಚ್.ಸಿ.ಮಹದೇವಪ್ಪನವರು ಜೆಡಿಎಸ್ ಶಾಸಕ ಸಾ.ರಾ.ಮಹೇಶ್‌ಗೆ ಫೋನಾಯಿಸಿದ್ದೇ ತಡ ಜೆಡಿಎಸ್ ಮತ್ತು ಕಾಂಗ್ರೆಸ್ ಪಾಳೆಯದಲ್ಲಿ ಭಾರೀ ಸಂಚಲನ ಉಂಟಾಗಿತ್ತು. ಈ ಬಾರಿ ಜೆಡಿಎಸ್ ಮತ್ತು ಕಾಂಗ್ರೆಸ್ ಮೈತ್ರಿ ಮಾಡಿಕೊಳ್ಳಲಿದ್ದು ಬಿಜೆಪಿಗೆ ಗೇಟ್‌ಪಾಸ್ ಗತಿ ಎನ್ನುವ ಮಾತುಗಳೂ ಕೇಳಿಬಂದಿದ್ದವು.






ಕಾಂಗ್ರೆಸ್ ನಾಯಕರು ಮುಂದಿಟ್ಟಿದ್ದ ಮೈತ್ರಿ ಪ್ರಸ್ತಾಪವನ್ನು ಗಂಭೀರವಾಗಿ ಪರಿಗಣಿಸಿದ್ದ ಜೆಡಿಎಸ್ ನಾಯಕರು ಮೊದಲು ಮಹಾಪೌರರ ಅಧಿಕೃತ ನಿವಾಸದಲ್ಲಿ ಸಭೆ ನಡೆಸಿದ್ದರು. ಆ ಸಭೆಯಲ್ಲಿ ಶಾಸಕರಾದ ಜಿ.ಟಿ.ದೇವೇಗೌಡ, ಸಾ.ರಾ.ಮಹೇಶ್, ವಿಧಾನ ಪರಿಷತ್ ಸದಸ್ಯ ಸಂದೇಶ್ ನಾಗರಾಜ್, ಮಹಾಪೌರ ಬಿ.ಎಲ್.ಭೈರಪ್ಪ ಮಾಜಿ ಮಹಾಪೌರ ಮತ್ತು ಹಾಲಿ ಸದಸ್ಯರೂ ಆದ ಸಂದೇಶ್ ಸ್ವಾಮಿ, ಆರ್.ಲಿಂಗಪ್ಪ ಜೆಡಿಎಸ್ ನಗರಾಧ್ಯಕ್ಷ ರಾಜಣ್ಣ ಬಿಜೆಪಿ ನಗರಾಧ್ಯಕ್ಷ ಡಾ.ಬಿ.ಎಚ್.ಮಂಜುನಾಥ್, ಪ್ರಧಾನ ಕಾರ್ಯದರ್ಶಿ ಎಚ್.ವಿ.ರಾಜೀವ್, ಬಿಜೆಪಿ ನಾಯಕ ಹಾಗೂ ವಿಧಾನ ಪರಿಷತ್ ಮಾಜಿ ಸದಸ್ಯ ಗೋ.ಮಧುಸೂದನ್, ಮುಡಾ ಮಾಜಿ ಅಧ್ಯಕ್ಷ ಎಲ್. ನಾಗೇಂದ್ರ, ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ ಬಿ.ಪಿ.ಮಂಜುನಾಥ್ ಸೇರಿದಂತೆ ಹಲವರು ಭಾಗವಹಿಸಿ ಚರ್ಚೆ ನಡೆಸಿದ್ದರು. ನಂತರ ಆಪರೇಷನ್ ಹಸ್ತದ ಭಯದಿಂದಾಗಿ ಬೆಂಗಳೂರಿನ ಈಗಲ್‌ಟನ್ ರೆಸಾರ್ಟ್‌ನತ್ತ ತಮ್ಮ ಸದಸ್ಯರನ್ನು ಎಳೆದುಕೊಂಡು ಹೋಗಿದ್ದರು.



ಚೆಲುವೆಗೌಡ



ಇತ್ತ ಕಾಂಗ್ರೆಸ್ ಕೂಡ ಸಚಿವ ತನ್ವೀರ್ ಸೇಠ್, ಶಾಸಕರಾದ ವಾಸು, ಎಂ.ಕೆ.ಸೋಮಶೇಖರ್, ವಿಧಾನ ಪರಿಷತ್ ಸದಸ್ಯ ಆರ್.ಧರ್ಮಸೇನಾ, ನಗರಾಧ್ಯಕ್ಷ ಟಿ.ಎಸ್.ರವಿಶಂಕರ್, ಮುಡಾ ಅಧ್ಯಕ್ಷ ಧ್ರುವಕುಮಾರ್, ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಬಿ.ಸಿದ್ದರಾಜು, ಮೃಗಾಲಯ ಪ್ರಾಧಿಕಾರದ ಅಧ್ಯಕ್ಷೆ ಮಲ್ಲಿಗೆ ವೀರೇಶ್, ಅರಗು ಮತ್ತು ಬಣ್ಣ ಕಾರ್ಖಾನೆ ಅಧ್ಯಕ್ಷ ಎಚ್.ಎ.ವೆಂಕಟೇಶ್, ಮಾಜಿ ಮಹಾಪೌರರಾದ ಅನಂತು, ನಾರಾಯಣ, ಬಿ.ಕೆ.ಪ್ರಕಾಶ್, ಪುರುಷೋತ್ತಮ, ಟಿ.ಬಿ.ಚಿಕ್ಕಣ್ಣ, ಪುಷ್ಪಲತಾ ಚಿಕ್ಕಣ್ಣ, ಮೋದಾಮಣಿ, ದಕ್ಷಿಣಾ ಮೂರ್ತಿ ಮೊದಲಾದವರನ್ನು ಒಳಗೊಂಡ ಸಭೆ ನಡೆಸಿ ಕಾದುನೋಡುವ ತಂತ್ರಕ್ಕೆ ನಿರ್ಧರಿಸಿತ್ತು. ಇನ್ನು ಬಿಜೆಪಿಯೂ ಸಂಸದ ಪ್ರತಾಪ ಸಿಂಹ ಮತ್ತು ಮಾಜಿ ಸಚಿವ ಎಸ್.ಎ.ರಾಮದಾಸ್ ನೇತೃತ್ವದಲ್ಲಿ ಮೈಸೂರಿನ ಖಾಸಗಿ ಹೋಟೆಲ್ ಒಂದರಲ್ಲಿ ಸಭೆ ನಡೆಸಿತ್ತು.

ಆಪರೇಷನ್ ಹಸ್ತ ನಡೆಯಲಿಲ್ಲ, ಆದರೆ...

ಪಾಲಿಕೆ ಸದಸ್ಯರ 65 ಸ್ಥಾನಗಳ ಜೊತೆಗೆ ಒಬ್ಬ ಲೋಕಸಭಾ ಸದಸ್ಯ, 4 ಶಾಸಕರು, 4 ವಿಧಾನ ಪರಿಷತ್ ಸದಸ್ಯರು ಮತ ಚಲಾಯಿಸುವ ಹಕ್ಕು ಹೊಂದಿದ್ದು ಮಹಾಪೌರರಾಗಲು 38 ಮತಗಳ ಬೇಕಾಗಿತ್ತು. ಕಾಂಗ್ರೆಸ್‌ಗೆ ಪಾಲಿಕೆಯ 20 ಮಂದಿ ಸದಸ್ಯರಲ್ಲದೆ 3 ಜನ ಶಾಸಕರು, ಒಬ್ಬ ವಿಧಾನ ಪರಿಷತ್ ಸದಸ್ಯರೂ ಸೇರಿದಂತೆ 24 ಮತಗಳು ಮಾತ್ರ ಲಭ್ಯವಾಗುತ್ತವೆ. ಹಾಗಾಗಿ ಕಾಂಗ್ರೆಸ್ ಜಯಗಳಿಸಲು ಬೇರೆ ಸದಸ್ಯರನ್ನು ಸೆಳೆಯಬೇಕಿತ್ತು. ಆದ್ದರಿಂದ ಆಪರೇಷನ್ ಹಸ್ತ ನಡೆಯಬಹುದೆನ್ನುವ ಅನುಮಾನ ಮೂಡಿತ್ತು. ಆದರೆ ಕಾಂಗ್ರೆಸ್ ಅಂತಹ ದುಸ್ಸಾಹಸಕ್ಕೆ ಕೈಹಾಕಲಿಲ್ಲ.

ಆದರೆ ಇಲ್ಲೊಂದು ಅಚ್ಚರಿಯ ಬೆಳವಣಿಗೆ ನಡೆದಿದೆ. ಅದೇನೆಂದರೆ ಜೆಡಿಎಸ್‌ಗೆ ಪಾಲಿಕೆಯಲ್ಲಿ ಇರೋದು 19 ಸದಸ್ಯರು. ಇನ್ನು ಇತ್ತೀಚೆಗೆ ಅಶ್ವಿನಿ ಅನಂತು, ಚನ್ನಪ್ಪ, ರವೀಂದ್ರ ಕುಮಾರ್, ಬಿ.ಎಲ್. ಭೈರಪ್ಪ ಎಂಬ ನಾಲ್ವರು ಪಕ್ಷೇತರರು ಜೆಡಿಎಸ್ ಸೇರಿಕೊಂಡಿರುವುದರಿಂದ ಅದರ ಬಲ 23 ಆಗುತ್ತೆ. ಅದೇರೀತಿ ಕ್ಷೇತ್ರ ವ್ಯಾಪ್ತಿಯ ಒಬ್ಬ ಶಾಸಕ ಜಿ.ಟಿ.ದೇವೇಗೌಡ, ಮೂವರು ವಿಧಾನ ಪರಿಷತ್ ಸದಸ್ಯರಾದ ಸಂದೇಶ್ ನಾಗರಾಜ್, ಮರಿತಿಬ್ಬೇಗೌಡ, ಕೆ.ಟಿ.ಶ್ರೀಕಂಠೇಗೌಡರ ಮತಗಳೂ ಸೇರಿದರೆ ಜೆಡಿಎಸ್‌ಗೆ 27 ಮತಗಳು ಬೀಳುತ್ತವೆ. ಇನ್ನು ಬಿಜೆಪಿ ಜೊತೆ ಮೈತ್ರಿ ಮಾಡಿಕೊಂಡಿರುವುದರಿಂದ ಆ ಪಕ್ಷದ 13 ಮತಗಳೂ ಜೆಡಿಎಸ್‌ಗೆ ಬೀಳುವುದರಿಂದ ಜೆಡಿಎಸ್‌ನ ಮೇಯರ್ ಅಭ್ಯರ್ಥಿ ರವಿಕುಮಾರ್‌ಗೆ 40 ಮತಗಳು ಬೀಳಬೇಕಿತ್ತು. ಆದರೆ ರವಿಕುಮಾರ್ ಗಳಿಸಿದ್ದು 43 ಮತಗಳು! ಇನ್ನುಳಿದ ಪಕ್ಷೇತರರು ಮತ ಹಾಕಿರಬಹುದು ಅನ್ನೋ ಸರಳ ಲೆಕ್ಕಾಚಾರ ತೇಲಿಬರಬಹುದಾದರು ಕಾಂಗ್ರೆಸ್‌ನಲ್ಲೇ ಒಂದಷ್ಟು ಮಂದಿ ಅಡ್ಡಮತ ಹಾಕಿರುವ ಗಾಳಿ ಸುದ್ದಿ ಕೈ ಪಾಳಯದಲ್ಲಿ ಹರಿದಾಡುತ್ತಿರೋದಕ್ಕೂ ಈ ಏರುಪೇರು ಲೆಕ್ಕಕ್ಕೂ ಏನೋ ಸಂಬಂಧ ಇದ್ದಿರಬಹುದು ಅನ್ನಿಸುತ್ತಿದೆ.

ಕುಮಾರಣ್ಣನ ಲಕೋಟೆ ರಾಜಕಾರಣ

ಜೆಡಿಎಸ್‌ನಿಂದ ಸತತ 4ನೇ ಬಾರಿ ಆಯ್ಕೆಯಾಗಿರುವ 27ನೇ ವಾರ್ಡ್ ಸದಸ್ಯ ಕೆ.ಟಿ.ಚಲುವೇಗೌಡ ಅವರು, 4 ಬಾರಿ ಗೆದ್ದು ಬಂದಿದ್ದು, ಹಿರಿಯ ಸದಸ್ಯರಾಗಿ, ಪಕ್ಷಕ್ಕೆ ಹೆಚ್ಚು ನಿಷ್ಠನಾಗಿದ್ದೇನೆ. ಹಾಗಾಗಿ ಮಹಾಪೌರ ಸ್ಥಾನವನ್ನು ತನಗೇ ನೀಡಬೇಕು ಎಂದು ಪಟ್ಟು ಹಿಡಿದಿದ್ದರು. ಎರಡು ಬಾರಿ ಜೆಡಿಎಸ್‌ನಿಂದ ಆಯ್ಕೆಯಾಗಿರುವ ಕೆ.ವಿ.ಮಲ್ಲೇಶ್ ಕೂಡಾ ಹಣಬಲದ ಮೂಲಕ ಕಣದಲ್ಲಿದ್ದರು. ಜೆಡಿಎಸ್ ಒಳಗಿನ ಮೇಯರ್ ರೇಸ್‌ನಲ್ಲಿ ನೇರಾನೇರ ಪೈಪೋಟಿ ಇದ್ದದ್ದು ಚಲುವೇಗೌಡ ಮತ್ತು ಎಂ.ಜೆ. ರವಿಕುಮಾರ್ ನಡುವೆ. ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಹಾಗೂ ಅನಿತ ಕುಮಾರಸ್ವಾಮಿ ಅವರೊಂದಿಗಿದ್ದ ಆಪ್ತತೆಯ ಕಾರಣಕ್ಕೆ ಎಂ.ಜೆ.ರವಿಕುಮಾರ್ ರೇಸ್‌ನಲ್ಲಿ ಕೊಂಚ ಮುಂದಿದ್ದರು. ಅಂತಿಮವಾಗಿ ಎಚ್.ಡಿ.ಕುಮಾರಸ್ವಾಮಿ ಲಕೋಟೆ ರಾಜಕಾರಣ ಚಿನ್ನಿ ರವಿಗೆ ಅದೃಷ್ಟ ತಂದಿತು. ರವಿಕುಮಾರ್ ಲಿಂಗಾಯತ ಎಂಬ ಕಾರಣಕ್ಕೆ, ಲಿಂಗಾಯತರನ್ನು ಒಲೈಸುವುದಕ್ಕೆ ಎಚ್.ಡಿ. ಕುಮಾರಸ್ವಾಮಿ ಯವರು ಈ ತಂತ್ರ ಮಾಡಿದ್ದಾರೆ. ಅವರು [illegible] ಲಕೋಟೆಯಲ್ಲಿ ಎಂ.ಜೆ.ರವಿಕುಮಾರ್ (ಚಿನ್ನಿ ರವಿ) [illegible] ಅದರಂತೆ ಚಿನ್ನಿ ರವಿ ಮೇಯರ್ ಆಗಿ ಅಧಿಕಾರಕ್ಕೇರಿದ್ದಾರೆ.

■ ವರದಿ

[illegible]ನೀಡಿಕೊಳ್ಳಲು ಒಬ್ಬರ ಅವಶ್ಯಕತೆ ಇದೆ ಎಂಬುದನ್ನು [illegible] ಅರ್ಥ ಮಾಡಿಕೊಳ್ಳಬೇಕು. ಪುರುಷ ರಾಜಕಾರಣಿಗೆ [illegible]ಯಲ್ಲಿ ಹೆಂಡತಿ ಇರುತ್ತಾಳೆ. ಮಹಿಳೆ ರಾಜಕಾರಣಿಗೆ [illegible]ನೋ, ಸಹೋದರನೋ ಇರುತ್ತಾರೆ. ನನಗೆ ಯಾರೂ [illegible]. ಈ ಕಾರಣಕ್ಕೇ ಸಸಿಕಲಾ ನನ್ನ ಮನೆಯ [illegible] ಜವಾಬ್ದಾರಿಗಳನ್ನು ಹೊತ್ತಿದ್ದರಿಂದ ನಾನು ರಾಜಕೀಯಕ್ಕೆ [illegible] ಸಂಪೂರ್ಣ ಗಮನವನ್ನು ಕೊಡಲು ಸಾಧ್ಯವಾಯಿತು."

* * *

ಸಸಿಕಲಾಳೊಂದಿಗಿನ ಆಕೆಯ ಸಂಬಂಧ ಕುರಿತು [illegible]ರದ ಮಾತುಗಳೂ ಕೇಳಿಬಂದಿವೆ. ಹಲವರು [illegible] ಲೆಸ್ಬಿಯನ್ಸ್ ಎಂದೂ ಆರೋಪಿಸಿದ್ದಾರೆ. [illegible] ಸಂಬಂಧ ಕುರಿತು ಜಯಲಲಿತಾ ತನ್ನ ಖಾಸಗಿ [illegible]ಗೆ ಬರೆದ ಪತ್ರವನ್ನು ಬೇಕಂತಲೇ ಯಾರೋ [illegible] ಮಾಡಿದರು. ಆದರೆ ಜಯಲಲಿತಾ ಮತ್ತು [illegible] ವೈದ್ಯರು ಅಂತಹ ಪತ್ರದ ಅಸ್ತಿತ್ವವನ್ನೇ [illegible]. ಅದರಲ್ಲೂ ಡಿಎಂಕೆ ಪಕ್ಷದ ನಾಯಕರು [illegible] ಆಕೆಯ ವಿರುದ್ಧ ಅಸ್ತ್ರವಾಗಿ [illegible]ಗಿಸಿಕೊಂಡರು. ಈ ಕುರಿತು ಸಿಮಿ ಗಾರೆವಾಲ್ [illegible] ಜಯಲಲಿತಾ [illegible] ಎಂದರು.

[illegible] ಮತ್ತು ಆಕೆಯ [illegible] - [illegible]

ಮತ್ತು ಜಯಲಲಿತಾರ ಚಲನವಲನಗಳನ್ನು ನಿಯಂತ್ರಿಸುತ್ತಿದ್ದದ್ದು, ಯಾರು ಆಕೆಯನ್ನು ಭೇಟಿಯಾಗುತ್ತಾರೆ, ಯಾರು ಕರೆ ಮಾಡುತ್ತಾರೆ ಎಂದೆಲ್ಲ ನಿಗ್ರಹಿಸುತ್ತಿದ್ದದ್ದು ಸಾಬೀತಾಗುತ್ತಾ ಹೋಯಿತು. ಜಯಲಲಿತಾರ ಜೀವನವನ್ನು ಸಸಿಕಲಾ ಪ್ರವೇಶಿಸಿದ ನಂತರ ಬಹಳ ವರ್ಷಗಳಿಂದ ಆಕೆಗೆ ನಿಷ್ಠರಾಗಿದ್ದವರೆಲ್ಲ ನಿಧಾನವಾಗಿ ದೂರವಾದರು.

ಜಯಲಲಿತಾರ ಆಲ್ಟರ್ ಈಗೋ ಸಸಿಕಲಾ ಆಗಿಹೋದಳು.

ಅವರಿಬ್ಬರು ಈಗ ಒಂದು ಆರ್ಥಿಕ ಬಲೆಯಲ್ಲಿ ಸಿಲುಕಿಕೊಂಡಿದ್ದಾರೆ. ಸಸಿಕಲಾ ಈಗ ಎಲ್ಲವೂ ಗೊತ್ತಿರುವ ಮಹಿಳೆ. ಆದ್ದರಿಂದ ಜಯಲಲಿತಾ ಆಕೆಯನ್ನು ಹೊರಗೋಡಿಸುವುದು ಅಸಾಧ್ಯವಾಗಿದೆ ಎಂದೇ ಹಿರಿಯ ಪತ್ರಕರ್ತರೊಬ್ಬರು ವ್ಯಾಖ್ಯಾನಿಸುತ್ತಾರೆ.

* * *

ಎಂದೆಂದಿಗೂ ಅಮ್ಮ

ಕಳೆದ ಚುನಾವಣಾ ಪ್ರಚಾರದ ವೇಳೆ, ಎಐಎಡಿಎಂಕೆ ಪಕ್ಷದ ಬಾವುಟ ಹೊತ್ತ ಬೆಳ್ಳಿ ಬಣ್ಣದ ಟೊಯೋಟಾ ಪ್ರಾಡೊ ಕಾರಿನಲ್ಲಿ ಆಕೆ ಬರುತ್ತಿದ್ದಂತೆ ಜನ ಹರ್ಷೋದ್ಗಾರದಿಂದ ಕೂಗುತ್ತಿದ್ದರು. ಆಕೆ ನಿಧಾನಕ್ಕೆ ವೇದಿಕೆಯನ್ನೇರಿ ತನಗಾಗಿ ಏರ್ ಕೂಲರ್‌ಗಳ ನಡುವೆ ಇಟ್ಟಿದ್ದ ಕುರ್ಚಿಯ ಮೇಲೆ ಕೂರುತ್ತಿದ್ದರು. ಈ ಬಾರಿ ಆಕೆ ತನ್ನ ಎಂದಿನ ಬಡಿದೇಳಿಸುವಂತಹ ಭಾಷಣವನ್ನು ಮಾಡುತ್ತಿರಲಿಲ್ಲ. ಬದಲಾಗಿ, ಬೆಳಗ್ಗೆಯಿಂದ ತನ್ನನ್ನು ಕೇಳಲು ಬಿಸಿಲಿನಲ್ಲೂ ಕಾದಿರುತ್ತಿದ್ದ ಲಕ್ಷಾಂತರ ಜನರ ಮುಂದೆ ತಾನು ಸಿದ್ಧಪಡಿಸಿಕೊಂಡು ಬಂದಿದ್ದ ಭಾಷಣವನ್ನೇ ಓದುತ್ತಿದ್ದರು. ತನ್ನ ಸಾಧನೆಗಳನ್ನು ಮತ್ತು ತನ್ನ ವೈರಿ ಕರುಣಾನಿಧಿಯ ವಿರುದ್ಧದ ತನ್ನ ದೂರುಗಳನ್ನು ಒಪ್ಪಿಸುತ್ತಿದ್ದರು. ಈ ಬಾರಿ ಆಕೆಯ ಭಾಷಣಗಳಲ್ಲಿ ಎಂದಿನ ಬೆಂಕಿಚೆಂಡುಗಳು ಮತ್ತು ಭಾವೋದ್ರೇಕತೆಗಳು ಇರಲಿಲ್ಲ. ಆದರೆ ನೆರೆಯುತ್ತಿದ್ದ ಜನಸಾಗರಕ್ಕೆ ಅದು ಮುಖ್ಯವೂ ಆಗಿರಲಿಲ್ಲ. ಒಂದು ರ್‍ಯಾಲಿಯಿಂದ ಇನ್ನೊಂದು ರ್‍ಯಾಲಿಗೆ ಹೋಗುತ್ತಾ ಸುಸ್ತಾದವರಂತೆ, ವಯಸ್ಸಾದವರಂತೆ ಕಾಣುತ್ತಿದ್ದ ಆಕೆಯನ್ನು ಕಣ್ಣಾರೆ ನೋಡಿದ್ದರಿಂದ ಜನರಲ್ಲಿನ ರಕ್ಷಣಾ ಭಾವ ಎಚ್ಚೆತ್ತುಗೊಂಡಂತಿತ್ತು.

"ಮತ್ತೆ ಇವರಿಗೇ ಓಟು ಹಾಕುತ್ತೀರೇನು?" ಎಂಬ ಪತ್ರಕರ್ತರ ಪ್ರಶ್ನೆಗಳಿಗೆ ಜನರು ನಿರ್ದಿಷ್ಟ ಉತ್ತರ ಕೊಡಲು ನಿರಾಕರಿಸುತ್ತಿದ್ದರು. ಆದರೆ ಅವರಲ್ಲಿ ಬಹಳಷ್ಟು ಜನ 'ನಾವು ಅವರಿಗೆ ಓಟು ಹಾಕಿದರೂ, ಹಾಕದೆ ಇದ್ದರೂ ಅವರನ್ನು ಕೇಳಿಸಿಕೊಳ್ಳಲಂತೂ ಬಂದೇ ಬರುತ್ತೇವೆ" ಎಂದು ಉದ್ಗರಿಸುತ್ತಿದ್ದರು. ಯಾಕೆಂದರೆ, ಜಯಲಲಿತಾ ಅಧಿಕಾರದಲ್ಲಿ ಇರಲಿ, ಇರದಿರಲಿ, ಜನರ ಪಾಲಿಗೆ ಆಕೆ ಎಂದೆಂದಿಗೂ 'ಅಮ್ಮ'ನೇ.

■ ವಾಸಂತಿ

(ಕನ್ನಡಕ್ಕೆ: ಸಾವಂತಿ)

ನೋಟು ರದ್ದತಿ: ಯಾರಿಗೆ ಲಾಭ, ಯಾರಿಗೆ ನಷ

ಮೋದಿ ಸರ್ಕಾರದ ನೋಟು ರದ್ದತಿ ಕಾರ್ಯಾಚರಣೆ ಪ್ರಾರಂಭವಾದಂದಿನಿಂದ ದೇಶದೆಲ್ಲೆಡೆ ಸೃಷ್ಟಿಯಾಗಿರುವ ಗೊಂದಲ, ಸಮಸ್ಯೆ ಹಾಹಾಕಾರಗಳಿಗೆ ಪೂರ್ವಸಿದ್ಧತೆಯ ಕೊರತೆಯೆ ಕಾರಣ ಎಂಬುದಕ್ಕೆ ಸರ್ಕಾರ ಹೊರಡಿಸಬೇಕಾಗಿ ಬಂದ ಸುಮಾರು 27 ಅಧಿಸೂಚನೆ, ಸುತ್ತೋಲೆಗಳೆ ಸ್ಪಷ್ಟ ರುಜುವಾತು. ಬಚ್ಚಿಟ್ಟ ಕಂತೆಕಂತೆ ಕಪ್ಪುಹಣವನ್ನು ಹೊರತೆಗೆಯಲೆಂದು ಹೇಳಲಾದ ಈ ಕಾರ್ಯಾಚರಣೆಯ ಅನುಷ್ಠಾನ ನೋಡುವಾಗ ಇದೊಂಥರಾ ಮಕ್ಕಳ ಕಳ್ಳ ಪೊಲೀಸ್ ಆಟದ ಹಾಗಿದೆ. ಇವರು ಚಾಪೆ ಅಡಿ ತೂರಲು ನೋಡಿದರೆ ಅವರಾಗಲೆ ರಂಗೋಲಿ ಕೆಳಗಿನ ಅವಕಾಶವನ್ನು ಕಂಡುಹಿಡಿದಿರುತ್ತಾರೆ! ಕೊನೆಯಲ್ಲಿ ಕಳ್ಳರು ಸಿಕ್ಕಿಬೀಳುತ್ತಾರೆ ಎಂದಿಟ್ಟುಕೊಂಡರೂ ಅಷ್ಟರೊಳಗಾಗಿ ನಗದು ರೂಪದ ಕಪ್ಪುಹಣವೆಲ್ಲಾ ಬಿಳಿಯಾಗಿರುವ ಸಾಧ್ಯತೆಗಳೇ ಹೆಚ್ಚು ಎಂದು ಇದುವರೆಗಿನ ಬೆಳವಣಿಗೆಗಳು ಸೂಚಿಸುತ್ತಿವೆ.

ಖುಲ್ಲಂಖುಲ್ಲಾ ಪಕ್ಷಪಾತ

ಇತ್ತೀಚಿನ ವರದಿಗಳ ಪ್ರಕಾರ ಕೋಟಿಗಟ್ಟಲೆ ಮೌಲ್ಯದ ಹೊಸ ರೂ. 2000 ಮತ್ತು ಹಳೆಯ ನೋಟುಗಳೊಂದಿಗೆ ಸಿಕ್ಕಿಬಿದ್ದವರಲ್ಲಿ ಭಾರತೀಯ ಜನತಾ ಪಕ್ಷದ ಮಂದಿ ಕೂಡಾ



ಇದ್ದಾರೆ. ಉದಾಹರಣೆಗೆ ತಮಿಳುನಾಡಿನ ಸೇಲಂನ ಬಿಜೆಪಿ ಯುವ ಘಟಕ ಕಾರ್ಯದರ್ಶಿ ಜೆ.ವಿ.ಆರ್.ಅರುಣ್ ಬಳಿ ರೂ 20.5 ಲಕ್ಷ ಮುಖಬೆಲೆಯ ಹೊಸ ನೋಟುಗಳು ಪತ್ತೆಯಾಗಿವೆ. ತಮಾಷೆಯೆಂದರೆ ಈತ ನೋಟು ರದ್ದತಿಯನ್ನು ಬೆಂಬಲಿಸಿ ಅದಕ್ಕೆ ಭಾರಿ ಪ್ರಚಾರ ನೀಡಿದವನು! ಮತ್ತೊಬ್ಬ ಅಭಿನವ್ ವರ್ಮಾ ಎಂಬಾತ ಕುರುಡರಿಗೋಸ್ಕರ ಅಭಿವೃದ್ಧಿಪಡಿಸಿದ ಹೊಸ ಸಾಧನವೊಂದು "ಮೇಕ್ ಇನ್ ಇಂಡಿಯ"ಕ್ಕೆ ಅತ್ಯುತ್ತಮ ನಿದರ್ಶನ ಎಂದು ಕಳೆದ ಡಿಸೆಂಬರ್‌ನಲ್ಲಿ ಬೆಂಗಳೂರಿನಲ್ಲಿ ನಡೆದ ಭಾರತೀಯ ವಿಜ್ಞಾನ ಸಮ್ಮೇಳನದ ವೇಳೆ ಮೋದಿಯಿಂದ ಶಹಬ್ಬಾಸ್‌ಗಿರಿ ಪಡೆದಿತ್ತು, ಇದೇ ವರ್ಮಾ ಈಗ ಚಂಡೀಗಢದಲ್ಲಿ ಇನ್ನೊಂದು ಸ್ಪೆಷಲ್ "ಮೇಕ್ ಇನ್ ಇಂಡಿಯ" ಮಾಡಲು ಹೊರಟು ಪೊಲೀಸರ ಅತಿಥಿಯಾಗಿದ್ದಾನೆ! ಈತನಿಂದ ಒಂದು ಖೋಟಾನೋಟು ಮುದ್ರಿಸುವ ಯಂತ್ರ ಮತ್ತು ರೂ. 42 ಲಕ್ಷ ಮೌಲ್ಯದ ಖೋಟಾನೋಟುಗಳನ್ನು ವಶಪಡಿಸಿಕೊಳ್ಳಲಾಗಿದೆ! ರೂ 13,860 ಕೋಟಿ ಆದಾಯ ಘೋಷಿಸಿ ನಾಪತ್ತೆಯಾಗಿದ್ದ ಗುಜರಾತಿ ಉದ್ಯಮಿ ಮಹೇಶ್ ಶಾ ಪ್ರಕಾರ ಆ ಹಣವೆಲ್ಲ ವಿವಿಧ ರಾಜಕಾರಣಿಗಳು, ಅಧಿಕಾರಿಗಳು ಮತ್ತು ಉದ್ಯಮಿಗಳಿಗೆ ಸೇರಿದ್ದಂತೆ. ಅವರ ಹೆಸರುಗಳನ್ನು ಬಹಿರಂಗಪಡಿಸುವುದಕ್ಕೂ ಮೊದಲೇ ಪೊಲೀಸರು ಟಿವಿ ಸ್ಟೂಡಿಯೋಗೆ ದಾಳಿ ಮಾಡಿ ಆತನನ್ನು ಬಂಧಿಸುತ್ತಾರೆಂದರೆ ಸದರಿ ವ್ಯಕ್ತಿಗಳು ಪೊಲೀಸರನ್ನು ನಿಯಂತ್ರಿಸುವಷ್ಟು ಪ್ರಭಾವಶಾಲಿ ಸ್ಥಾನದಲ್ಲಿ ಇರಲೇಬೇಕು. ನರೇಂದ್ರ ಮೋದಿ ಗುಜರಾತ್ ಮುಖ್ಯಮಂತ್ರಿಯಾಗಿದ್ದಾಗ ಇದೇ ಶಾ ಆಗಾಗ ಮುಖ್ಯಮಂತ್ರಿ ಕಚೇರಿಗೆ ಭೇಟಿ ನೀಡುತ್ತಿದ್ದ ಎನ್ನಲಾಗಿದೆ. ಈ ಸಂದರ್ಭದಲ್ಲಿ ಬಿಜೆಪಿ ಪಕ್ಷಾಧ್ಯಕ್ಷ ಅಮಿತ್ ಶಾ ಹೆಸರೂ ಕೇಳಿಬರುತ್ತಿದೆ.

ಮೋದಿಯ ಸಚಿವಸಂಪುಟದ 76 ಸದಸ್ಯರಲ್ಲಿ ಅನೇಕರು ಇದೇ ವರ್ಷದ ಮಾರ್ಚ್ 31ರ ವರೆಗೆ ಲಕ್ಷಗಟ್ಟಲೆ ನಗದು ಹಣ ಹೊಂದಿದ್ದರೆಂಬ ಸತ್ಯಾಂಶ ಮಾಹಿತಿ ಹಕ್ಕು ಕಾಯ್ದೆಯಡಿ ಬಯಲಾಗಿದೆ. ಜೇಟ್ಲಿ ಬಳಿ ರೂ. 65 ಲಕ್ಷಕ್ಕೂ ಅಧಿಕ, ಹಂಸರಾಜ ಅಹಿರ್ ಬಳಿ ರೂ. 10 ಲಕ್ಷಕ್ಕೂ ಅಧಿಕ, ಶ್ರೀಪಾದ ಯೆಸೊ ನಾಯಕ್ ಬಳಿ ರೂ. 22 ಲಕ್ಷ, ಮೋದಿ ಬಳಿ ರೂ. 89,700 ನಗದು ಇತ್ತಂತೆ. ಇನ್ನು ಗಡ್ಕರಿ, ಉಮಾ ಭಾರತಿ, ಪರಿಕ್ಕರ್ ಸೇರಿದಂತೆ ಒಟ್ಟು 36 ಮಂದಿ ತಮ್ಮ ಆಸ್ತಿ ವಿವರಗಳನ್ನೆ ಸಲ್ಲಿಸಿಲ್ಲವಂತೆ. ಈ ಮಂತ್ರಿಗಳೆಲ್ಲ ಸರತಿಯ ಸಾಲಿನಲ್ಲಿ ನಿಂತು ತಮ್ಮ ಹಳೆ ನೋಟುಗಳನ್ನು ಬದಲಾಯಿಸಿಕೊಂಡರೆ ಅಥವಾ ತಮ್ಮ ನೌಕರ, ಚಾಕರರನ್ನು ಕಳುಹಿಸಿದರೆ? ಖಾತೆಗೆ ರೂ. 2.5 ಲಕ್ಷಕ್ಕೂ ಹೆಚ್ಚು ಹಣ ತುಂಬಿಸುವಂಥ ಮಂತ್ರಿಗಳ ಮೇಲೆ ತೆರಿಗೆ ಇಲಾಖೆ ಕಣ್ಣಿಡಲಿದೆಯೆ? ಸಾಮಾನ್ಯ ಪ್ರಜೆಯೊಬ್ಬನಿಗೆ ವಾರಕ್ಕೆ ಬರೀ ರೂ. 24,000 ತೆಗೆಯುವ ಮಿತಿ ಇರುವಾಗ ತಮ್ಮ ಮಕ್ಕಳ ಅದ್ದೂರಿ ಮದುವೆಗಾಗಿ ಲಕ್ಷಗಟ್ಟಲೆ, ಕೋಟಿಗಟ್ಟಲೆ ವ್ಯಯಿಸುವ ಗಡ್ಕರಿ, ಮಹೇಶ್ ಶರ್ಮನಂತಹ ಮಂತ್ರಿಗಳಿಗೆ ಅಷ್ಟೊಂದು ನಗದು ಎಲ್ಲಿಂದ, ಹೇಗೆ ಸಿಗುತ್ತದೆ ಎಂದು ಯಾರಾದರೂ ಪ್ರಶ್ನಿಸಲಿದ್ದಾರೆಯೇ?

ಇದ್ಯಾವುದರ ಬಗ್ಗೆಯೂ ತುಟಿಪಿಟಕ್ಕೆನ್ನದ ಮೋದಿ ಅದೇ ಕರ್ನಾಟಕ, ಕೇರಳ, ಪ.ಬಂಗಾಳಗಳಲ್ಲಿ ಭ್ರಷ್ಟ ಅಧಿಕಾರಿಗಳು ಹೊಸಾ ನೋಟುಗಳೊಂದಿಗೆ ಸಿಕ್ಕಿಬಿದ್ದಾಕ್ಷಣ ತೆರಿಗೆ ಇಲಾಖೆಗೆ ಕರೆ ಮಾಡಿ ಅಭಿನಂದನೆ ಹೇಳಿದನಂತೆ. ಈ ಎಲ್ಲಿಲ್ಲದ ಹುಮ್ಮಸ್ಸಿಗೆ ಸದರಿ ರಾಜ್ಯಗಳಲ್ಲಿ ಬಿಜೆಪಿಯೇತರ ಸರಕಾರಗಳಿರುವುದೆ ಕಾರಣವಿರಬಹುದೆ? ಪ್ರಶ್ನೆ ಏನೆಂದರೆ ಇಂತಹ ದಾಳಿ ಕಾರ್ಯಾಚರಣೆಗಳು ಇನ್ನುಳಿದ ರಾಜ್ಯಗಳಲ್ಲಿ ನಡೆಯುತ್ತಿಲ್ಲವೆ? ಉತ್ತರ ಹೌದು ಎಂದಾದರೆ ಮಾಧ್ಯಮಗಳಲ್ಲಿ ಏಕೆ ವರದಿಯಾಗುತ್ತಿಲ್ಲ? ಇಲ್ಲ ಎಂದಾದರೆ ತಕ್ಷಣ ಇನ್ನೊಂದು ಪ್ರಶ್ನೆ ಎದ್ದುನಿಲ್ಲುತ್ತದೆ: ಹಾಗಾದರೆ ಇತರ ರಾಜ್ಯಗಳ ನೀರಾವರಿ, ಲೋಕೋಪಯೋಗಿ, ವಿದ್ಯುತ್ತು ಮತ್ತಿತರ ಸರಕಾರಿ ಇಲಾಖೆ ಮತ್ತು ಸಂಸ್ಥೆಗಳಲ್ಲಿ ಭ್ರಷ್ಟಾಚಾರ ಇಲ್ಲವೆ? ಅಲ್ಲೆಲ್ಲಾ ಕಪ್ಪುಹಣ ಉತ್ಪತ್ತಿ ಆಗುತ್ತಿಲ್ಲವೇ? ಹಾಸ್ಯಾಸ್ಪದ ವಿಷಯವೇನೆಂದರೆ ಬಿಜೆಪಿಗರು ನವಂಬರ್ 8ರ ನಂತರ ಬಂದ ದುಡ್ಡಿನ ಲೆಕ್ಕ ಕೊಡಬೇಕೆಂದು ಮೋದಿ ಆದೇಶಿಸಿದ್ದಾನಂತೆ. ಇಲ್ಲಿ ಮತದಾರರು ಎರಡು, ಮೂರು ಪ್ರಶ್ನೆಗಳನ್ನು ಕೇಳಬೇಕಾಗಿದೆ. ಬಿಜೆಪಿಗರು ಯಾಕೆ ಅಮಿತ್ ಷಾನಿಗೆ ಮಾತ್ರ ಲೆಕ್ಕ ಕೊಡಬೇಕು? ಸಾರ್ವಜನಿಕರಿಗೂ ಕೊಡಬೇಡವೆ? ಮೋದಿ ಯಾಕೆ ನವೆಂಬರ್ 8ಕ್ಕೂ ಹಿಂದಿನ ಲೆಕ್ಕಾಚಾರಗಳನ್ನು ಒಪ್ಪಿಸುವಂತೆ ಹೇಳಿಲ್ಲ? ಇದೆಲ್ಲವೂ ಖುಲ್ಲಂಖುಲ್ಲಾ ಪಕ್ಷಪಾತ ಅಲ್ಲದೆ ಇನ್ನೇನು?

ಅಪ್ರಾಮಾಣಿಕ ಹೋರಾಟ

ಇಂದು ಭ್ರಷ್ಟಾಚಾರದ ವಿರುದ್ಧ ರಣಕಹಳೆ ಊದಿರುವೆನೆನ್ನುವ ಇದೇ ಮೋದಿ ಅಂದು ಗುಜರಾತಿನ ಮುಖ್ಯಮಂತ್ರಿಯಾಗಿದ್ದಾಗ 12 ವರ್ಷಗಳ ಕಾಲ ಲೋಕಾಯುಕ್ತರ ನೇಮಕಾತಿಯನ್ನು ತಡೆಹಿಡಿದಿದ್ದ ಮಾತ್ರವಲ್ಲ ಈ ಕುರಿತಂತೆ ರಾಜ್ಯಪಾಲರ ಜತೆ ಸುದೀರ್ಘ ಕಾಲ ಜಟಾಪಟಿಯನ್ನೂ ಕಾನೂನು ಸಮರವನ್ನೂ ನಡೆಸಿದ್ದ. ಲೂಟಿಕೋರ ಎಸ್ಸಾರ್, ಅದಾನಿ ಮೊದಲಾದ ಕಾರ್ಪೊರೇಟ್‌ಗಳಿಗೆ, ಅಧಿಕಾರಿಗಳಿಗೆ, ರಾಜಕಾರಣಿಗಳಿಗೆ ಪೂರಕವಾದ ವಾತಾವರಣ ನಿರ್ಮಿಸುವುದೇ ಇದರ ಉದ್ದೇಶವಾಗಿತ್ತು, ಈಗ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದು ಎರಡೂವರೆ ವರ್ಷಗಳೆ ಕಳೆದರೂ ಲೋಕಪಾಲರನ್ನು ನೇಮಿಸದಿರುವುದು ಭ್ರಷ್ಟಾಚಾರ ತಡೆಗಟ್ಟುವ ವಿಚಾರದಲ್ಲಿ ಪ್ರಾಮಾಣಿಕತೆಯ ಕೊರತೆಯನ್ನು ತೋರಿಸುವುದಿಲ್ಲವೆ? ಇಂದು ತಾನು ದೇಶದ ಬಡವರಿಗೋಸ್ಕರ ಕಪ್ಪುಹಣದ ವಿರುದ್ಧ ಸಮರ ಸಾರಿರುವೆನೆಂದು ಭಾವನಾತ್ಮಕವಾಗಿ ಭಾಷಣ ಮಾಡುವ ಈ ನಟಸಾರ್ವಭೌಮನ ಈ ತಥಾಕಥಿತ ಹೋರಾಟ ಎಷ್ಟೊಂದು ಅಪ್ರಾಮಾಣಿಕ ಎನ್ನುವುದಕ್ಕೆ ಕೆಳಗಿನ ಮೂರೇ ನಿದರ್ಶನಗಳು ಸಾಕು:

1. ಕೃಷ್ಣಾ ಗೋದಾವರಿ ಜಲಾನಯನ ಕ್ಷೇತ್ರದಲ್ಲಿ ರಿಲಾಯನ್ಸ್ ಸಂಸ್ಥೆ ಒಎನ್‌ಜಿಸಿಯ ಕೊಳವೆಬಾವಿಯಿಂದ ಅನಿಲ ಕದ್ದಿರುವುದಾಗಿ ಅಂತಾರಾಷ್ಟ್ರೀಯ ಮಧ್ಯಸ್ಥಗಾರ ಸಂಸ್ಥೆ DeGolyer - MacNaughton ಅಕ್ಟೋಬರ್ 2015ರಷ್ಟು ಹಿಂದೆಯೆ ತನ್ನ ತೀರ್ಪು ನೀಡಿದೆ. ಅದರ ಬಾಬತ್ತು ರಿಲಾಯನ್ಸ್ ಸಂಸ್ಥೆ ಸರಕಾರಕ್ಕೆ ರೂ. 10,000 ಕೋಟಿ ಪರಿಹಾರ ನೀಡುವುದರೊಂದಿಗೆ ಈಗ ಕದಿಯುತ್ತಿರುವ ಅನಿಲಕ್ಕೂ ಪರಿಹಾರ ಕೊಡಬೇಕೆಂದು ಹೇಳಿದೆ. ನಂತರ ಸರ್ಕಾರವೆ ರಚಿಸಿದ ಎ.ಪಿ.ಶಾ ಸಮಿತಿಯೂ ಇದನ್ನು ಎತ್ತಿಹಿಡಿದಿದೆ. ಈ ಮಹಾ ಭ್ರಷ್ಟಾಚಾರದಲ್ಲಿ ಭಾಗಿಯಾದ ಎಲ್ಲಾ ಸರ್ಕಾರಿ ಅಧಿಕಾರಿಗಳು ಮತ್ತು ರಾಜಕಾರಣಿಗಳ ಮೇಲೂ ದಾಳಿಯಾಗಬೇಕಿತ್ತಲ್ಲವೇ?


2. ಉಷ್ಣ ವಿದ್ಯುತ್ ಸ್ಥಾವರಗಳನ್ನು ನಡೆಸುತ್ತಿರುವ ಎಸ್ಸಾರ್, ಅನಿಲ್ ಅಂಬಾನಿ, ಜಿಂದಾಲ್, ಅದಾನಿ ಮತ್ತಿತರ ಕಾರ್ಪೊರೇಟುಗಳು ಕಲ್ಲಿದ್ದಲು ಮತ್ತು ಸ್ಥಾವರ ಯಂತ್ರೋಪಕರಣಗಳನ್ನು ಆಮದು ಮಾಡಿಕೊಳ್ಳುವಾಗ ಇರುವುದಕ್ಕಿಂತಲೂ ಅಧಿಕ ಬೆಲೆ ತೋರಿಸಲಾಗಿತ್ತೆಂದು ತಿಳಿದುಬಂದಿದೆ. ಈ ಕಾಳಧನದ ಮೊತ್ತ ಸುಮಾರು ರೂ. 50,000 ಕೋಟಿಯಷ್ಟಿದೆ. ಇವರೆಲ್ಲರ ವಿರುದ್ಧ ಕ್ರಮ ಕೈಗೊಳ್ಳಬೇಕಿತ್ತಲ್ಲವೇ?

3. ವಾಜಪೇಯಿ ಕಾಲದಲ್ಲಿ ಬಹಿರಂಗಗೊಂಡಿದ್ದ "ಎಸ್ಸಾರ್ ಪೇಪರ್ಸ್"ನಲ್ಲಿ ಕೇಂದ್ರ ಮಂತ್ರಿಯೊಬ್ಬ ಒಳಗೊಂಡಿದ್ದ ಕೊಲೆ ಪ್ರಕರಣದಲ್ಲಿ ಕೈವಾಡ ನಡೆಸಿರುವುದು; ನ್ಯಾಯಾಧೀಶರೊಬ್ಬರಿಗೆ 2 ಕೋಟಿ ಲಂಚ ಒಡ್ಡಿರುವುದು; ಸೂಕ್ಷ್ಮ ಕಡತವೊಂದನ್ನು ನಾಪತ್ತೆಯಾಗಿಸಿ ಲಾಭ ಬಾಚಿಕೊಂಡಿರುವುದು; ಕಾರ್ಪೊರೇಟುಗಳು ರಾಜಕೀಯ ಪಕ್ಷಗಳಿಗೆ ದೇಣಿಗೆ ನೀಡಿರುವುದು; ಬ್ಯಾಂಕು ಸಾಲದ ನಿಯಮಾವಳಿಗಳನ್ನು ತಮಗನುಕೂಲಕರವಾಗಿ ಬದಲಾಯಿಸಿರುವುದು ಮುಂತಾದ ಹತ್ತು ಹಲವು ಕ್ರಿಮಿನಲ್ ಪಿತೂರಿಗಳನ್ನು ಉಲ್ಲೇಖಿಸಲಾಗಿದೆ. ಇದರ ನಂತರ ಬಯಲಾದ "ಪನಾಮಾ ಪೇಪರ್ಸ್"ನಲ್ಲಿ ವಿದೇಶಗಳಲ್ಲಿ ಅಪಾರ ಸಂಪತ್ತನ್ನು ಶೇಖರಿಸಿದಂಥ ಹಲವಾರು ಪ್ರಭಾವಿ ವ್ಯಕ್ತಿಗಳ ಹೆಸರುಗಳಿವೆ. ಇತ್ತೀಚೆಗೆ ಹೊರಬಿದ್ದ "ಸಹಾರಾ ಪೇಪರ್ಸ್"ನಲ್ಲಿ ಬಿರ್ಲಾ ಮತ್ತು ಸಹಾರಾ ಸಂಸ್ಥೆಗಳಿಂದ ಗುಜರಾತ್ ಸಿಎಂ ಸೇರಿದಂತೆ ಹಲವಾರು ರಾಜಕಾರಣಿಗಳಿಗೆ ಕೋಟ್ಯಂತರ ಹಣ ಸಂದಾಯವಾಗಿರುವ ವಿವರಗಳಿವೆ. ಇವೆಲ್ಲವನ್ನು ತನಿಖೆಗೊಳಪಡಿಸಿ ತಪ್ಪಿತಸ್ಥ ಭ್ರಷ್ಟರಿಗೆ ಶಿಕ್ಷೆ ವಿಧಿಸಬೇಕಿತ್ತಲ್ಲವೇ?

ನೋಟು ರದ್ದತಿಯ ಅನಾಹುತಗಳು

ನೊಬೆಲ್ ಪ್ರಶಸ್ತಿ ವಿಜೇತರಾದ ಅಮಾರ್ತ್ಯ ಸೆನ್ ಮತ್ತು ಪೌಲ್ ಕ್ರುಗ್‌ಮನ್, ನೋಟು ರದ್ದತಿಯನ್ನು ಕಠಿಣ ಶಬ್ದಗಳಲ್ಲಿ ಟೀಕಿಸಿದ್ದಾರೆ. "ನೋಟು ರದ್ದತಿ ವಿಶ್ವಾಸದ ಆಧಾರದಲ್ಲಿ ನಡೆಯುವ ಭಾರತದ ಆರ್ಥಿಕತೆಯ ಬುಡಕ್ಕೆ ಕೊಡಲಿ ಏಟು ನೀಡುವ ನಿರಂಕುಶ ಕ್ರಮ" ಎಂದು ಅಮಾರ್ತ್ಯ ಸೆನ್ ಹೇಳಿದರೆ ಪೌಲ್ ಕ್ರುಗ್‌ಮನ್ "ನೋಟು ರದ್ದತಿ ಹಿಂದಿನ ಉದ್ದೇಶ ನನಗೆ ಅರ್ಥವಾಗಿದೆ..... ಆದರೆ ಅದರಿಂದ ಕಾಳಧನಿಕರ ವರ್ತನೆಯಲ್ಲಿ ಗಮನ ಸೆಳೆಯುವ ಬದಲಾವಣೆ ಆಗಲಾರದು. ಅವರು ತಮ್ಮ ಕಪ್ಪನ್ನು ಬಿಳಿಯಾಗಿಸುವ ದಂಧೆಯಲ್ಲಿ ಮುಂದಿನ ಬಾರಿ ಸಿಕ್ಕಿಬೀಳದಂತಿರಲು ಇನ್ನಷ್ಟು ಎಚ್ಚರಿಕೆ ವಹಿಸಲಿದ್ದಾರೆ, ಇನ್ನಷ್ಟು ಆಧುನಿಕ ವಿಧಾನ ಬಳಸಲಿದ್ದಾರೆ" ಎಂದಿದ್ದಾರೆ. ನೋಟು ರದ್ದತಿಯನ್ನು "ವ್ಯವಸ್ಥಿತ ಲೂಟಿ, ಕಾನೂನು ಬದ್ಧವಾಗಿಸಿದ ದರೋಡೆ" ಎಂದು ಕರೆದಿರುವ ಮಾಜಿ ಪ್ರಧಾನಿ ಮನಮೋಹನ ಸಿಂಗ್ ಪ್ರಕಾರ ಜಿಡಿಪಿಯಲ್ಲಿ ಸುಮಾರು 2% ಇಳಿಕೆಯಾಗಲಿದೆ.

ನೋಟು ರದ್ದತಿ ವಿಷಯದಲ್ಲಿ ಶೇಕಡಾ 90ರಷ್ಟು ಜನ ತನ್ನನ್ನು ಬೆಂಬಲಿಸುತ್ತಿದ್ದಾರೆಂದು ತಾನೇ ನಡೆಸಿದಂಥಾ ಒಂದು ಪ್ರಶ್ನಾರ್ಹ ಸಮೀಕ್ಷೆಯ ಆಧಾರದಲ್ಲಿ ಮೋದಿ ಹೇಳುತ್ತಿದ್ದಾನೆ. ಆದರೆ ನಿಜಸಂಗತಿ ಏನೆಂದರೆ ಆತನ ಸಮೀಕ್ಷೆ ಕೇವಲ ಸ್ಮಾರ್ಟ್ ಫೋನ್ ಹೊಂದಿರುವ 5 ಲಕ್ಷ ಮಧ್ಯಮ ವರ್ಗದ ಜನರನ್ನಷ್ಟೆ ಒಳಗೊಂಡಿತ್ತು! ಈ ಸಂದರ್ಭದಲ್ಲಿ ಇಟಲಿಯ ದಾರ್ಶನಿಕ ಎಕೊ ಉಂಬೆರ್ಟೊ ಮಾತುಗಳು ನೆನಪಾಗುತ್ತವೆ: "ಭವಿಷ್ಯದಲ್ಲಿ ನಾಯಕರು ಟಿವಿ ಅಥವಾ ಅಂತರ್ಜಾಲದ ಮೂಲಕ ಜನಪ್ರಿಯತೆ ಪಡೆಯಲಿದ್ದಾರೆ. ಆಯ್ದ ಗುಂಪುಗಳ ಭಾವನಾತ್ಮಕ ಪ್ರತಿಕ್ರಿಯೆಗಳನ್ನು ಜನತೆಯ ಧ್ವನಿ ಎಂದು ಬಿಂಬಿಸಲಿದ್ದಾರೆ." ಮೋದಿ ಇವತ್ತು 5 ಲಕ್ಷ ಜನರ ಗುಂಪಿನಲ್ಲಿ 4.5 ಲಕ್ಷ ಮಂದಿ ಬೆಂಬಲಿಸಿರುವುದನ್ನೆ ಭಾರತದ 125 ಕೋಟಿ ಜನತೆಯ ಬೆಂಬಲ ಎಂಬಂತೆ ಬಿಂಬಿಸುತ್ತಿದ್ದಾನೆ! ಜನಸಾಮಾನ್ಯರು ಭಾರಿ ಸಂಕಷ್ಟಕ್ಕೆ ತುತ್ತಾಗಿರುವುದನ್ನು, ದೇಶದ ಆರ್ಥಿಕತೆ ಕುಸಿದಿರುವುದನ್ನು ಆತ ಮರೆಮಾಚುತ್ತಿದ್ದಾನೆ. ದೇಶದಲ್ಲಿ ಉತ್ಪಾದನೆಯ ಪ್ರಮಾಣವನ್ನು ತೋರಿಸುವ ನಿಕ್ಕಿ ಸೂಚ್ಯಂಕ ಅಕ್ಟೋಬರ್‌ನಲ್ಲಿ 54.4 ಇದ್ದುದು ನವಂಬರ್‌ನಲ್ಲಿ 52.3ಕ್ಕೆ ಇಳಿದಿರುವುದೇ ಇದಕ್ಕೆ ಸಾಕ್ಷಿ. ಇನ್ನು ಇದುವರೆಗೆ ನಡೆದಿರುವ, ಈಗಲೂ ಮುಂದುವರಿದಿರುವ ಅನಾಹುತಗಳು ಒಂದೆ, ಎರಡೆ? ಡಿಸೆಂಬರ್ 1ರ ವೇತನದ ದಿನ ಅನೇಕ ಬ್ಯಾಂಕುಗಳು ಮತ್ತು ಎಟಿಎಂಗಳ ಮುಂದೆ "ನೊ ಕ್ಯಾಶ್" ಬೋರ್ಡ್‌ಗಳು ಕಂಡುಬಂದಿವೆ. ಅನೇಕ ಪಿಂಚಣಿದಾರರಿಗೆ ಪಿಂಚಣಿ ಲಭಿಸಿಲ್ಲ. ಲಕ್ಷಾಂತರ ಬೀಡಿ ಕಾರ್ಮಿಕರಿಗೆ ವೇತನ ದೊರೆತಿಲ್ಲ. ಚಾತೋಟಗಳ ಕಾರ್ಮಿಕರು ಸಂಬಳಕ್ಕಾಗಿ ಪರದಾಡುತ್ತಿದ್ದಾರೆ. ಸೂರತ್‌ನ ವಜ್ರ; ಆಗ್ರಾ, ಕಾನಪುರಗಳ ಪಾದರಕ್ಷೆ; ಮೋರ್ಬಿಯ ಸೆರಾಮಿಕ್ ಟೈಲ್ಸ್, ಗಡಿಯಾರ, ಕಾಗದ; ಕಟ್ಟಡ ನಿರ್ಮಾಣ ಇವೇ ಮುಂತಾದ ಕಿರು ಉದ್ದಿಮೆಗಳಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕರಲ್ಲಿ ಹೆಚ್ಚಿನವರನ್ನು ಮನೆಗೆ ಕಳುಹಿಸಲಾಗಿದೆ. ಕೆಲವೊಂದು ಕಡೆ ಕೆಲಸಗಾರರಿಗೆ ಸೂಪರ್‌ಮಾರ್ಕೆಟ್ ಕೂಪನ್‌ಗಳನ್ನು ವಿತರಿಸಲಾಗುತ್ತಿದೆಯಂತೆ. ಕೆಲವು ಡಾಕ್ಟರುಗಳ ಕ್ಲಿನಿಕ್ಕುಗಳಿಗೆ ಬರುವ ರೋಗಿಗಳ ಸಂಖ್ಯೆಯಲ್ಲಿ ಇಳಿಕೆಯಾಗಿದೆ. ಎಲ್ಲಕ್ಕೂ ಹೆಚ್ಚು ದುಃಖದ ವಿಷಯವೆಂದರೆ ನೋಟು ರದ್ದತಿ ದೇಶಾದ್ಯಂತ 82ಕ್ಕೂ ಅಧಿಕ ಜನರನ್ನು (ಡಿಸೆಂಬರ್ 1ರ ತನಕ) ಬಲಿ ತೆಗೆದುಕೊಂಡಿದೆ. ಇವರಲ್ಲಿ ಹೃದಯಾಘಾತದಿಂದ ತೀರಿಕೊಂಡವರಿದ್ದಾರೆ, ಆತ್ಮಹತ್ಯೆಗೆ ಶರಣಾದವರಿದ್ದಾರೆ,



ಔಷಧ ಸಿಗದೆ ಸತ್ತವರಿದ್ದಾರೆ. ಈ ಎಲ್ಲಾ ನತ
ಮೋದಿಗೆ ಯಾವ ಕಾಳಜಿಯೂ ಇರುವಂತಿಲ್ಲ
ಸಾವಿರಾರು ಪ್ರಜೆಗಳ ಮಾರಣಹೋಮ
ಯಾಚಿಸಲೊಪ್ಪದವನು 82 ಜನರ
ಮರುಗಲಿದ್ದಾನೆಂದು ನಿರೀಕ್ಷಿಸುವುದೂ ತಪ್ಪೆಂದ

ಭಾರತೀಯ ರಿಸರ್ವ್ ಬ್ಯಾ
ಸ್ವಾಯತ್ತತೆಗೆ ಧಕ್ಕೆ

ಭಾರತೀಯ ರಿಸರ್ವ್ ಬ್ಯಾಂಕು ಮೋದಿ
ಕೇಸರೀಕರಣ ಪ್ರಕ್ರಿಯೆಯ ಇತ್ತೀಚಿನ ಬಲಿಪ
ಪ್ರಾಮಾಣಿಕತೆ ಮತ್ತು ದಕ್ಷತೆಗೆ ಹೆಸರು ಮಾಡಿ
ಇಂದು ಆ ಹೆಸರನ್ನು ಪೂರ್ತಿ ಮಣ್ಣುಪಾ
ತೋರುತ್ತದೆ. ನವಂಬರ್ 8ರ ನಂತರದ
ಕೋಲಾಹಲ, ಅನಾಹುತಗಳ ನಡುವೆ ಬ್ಯಾಂಕಿ
ಊರ್ಜಿತ್ ಪಟೇಲ್‌ರ ದೀರ್ಘ ಮೌನ ಎದ್ದುಕಾ
ಆರ್‌ಬಿಐ ಮೇಲಿಂದ ಮೇಲೆ ಬ್ಯಾ
ಅಧಿಸೂಚನೆಗಳನ್ನು ನೀಡಲು ಶುರುಮಾಡಿರು
ಸೂರೆ ಹೋದ ಮೇಲೆ ದಿಡ್ಡಿ ಬಾಗಿಲು
ಎಂಬಂತಿದೆ. ರದ್ದು ಮಾಡಿದ ನೋಟುಗಳಿಗೆ
ಇಳಿಬಿಡಲು ಸಾಕಷ್ಟು ಹೊಸ ನೋಟುಗಳು
ರಿಸರ್ವ್ ಬ್ಯಾಂಕು ಮೋದಿ ಸರ್ಕಾರಕ್ಕೆ ಹೇಳಿತ
ಗೊತ್ತಿಲ್ಲ. ಆದರೆ ಅದು ಈಗ ಜನಸಾ
ಹೇಳುತ್ತಿರುವುದೇನು? "ಸಾಕಷ್ಟು ನೋಟುಗಳ
ಆಗಿವೆ; ನಗದಿನ ಕೊರತೆ ಇಲ್ಲ; ಗ್ರಾಹಕ
ಪಡಬೇಕಾಗಿಲ್ಲ"! ವಾಸ್ತವವಾಗಿ ಹೊಸ ನೋ
ಹೊಸ ನಿರ್ದೇಶಕರ ಸಹಿ ಇರುವುದರ ಆ
ಅದರ ಮುದ್ರಣ ಪ್ರಾರಂಭವಾಗಿರುವುದೆ
ಪಟೇಲ್ ಅಧಿಕಾರ ವಹಿಸಿಕೊಂಡ ಬಳಿಕ.
ಮುದ್ರಣಕೇಂದ್ರಗಳು ದಿನದ 24 ತಾಸು ಕೆಲಸ
ರದ್ದಾದ ನೋಟುಗಳ ಬದಲಿಗೆ ಬೇಕಿರು
ನೋಟುಗಳನ್ನು ಮುದ್ರಿಸಲು ಸುಮಾರು 6
ಬೇಕಾಗಬಹುದು!

ಅಷ್ಟಕ್ಕೂ ಎಷ್ಟು ಕಪ್ಪುಹಣ ಸಿ

ಪರಿವರ್ತಿಸಲು ಆಗದೆ ಉಳಿಯುವ ಸುಮ
ಲಕ್ಷ ಕೋಟಿಯಷ್ಟು ಕಪ್ಪುಹಣವೆಲ್ಲ ತನಗ
ಲಕ್ಷಾಂತರ ಕೋಟಿ ಮೊತ್ತದ ಅನುತ್ಪಾದಕ
ಕಂಗೆಟ್ಟಿರುವ ಬ್ಯಾಂಕುಗಳಿಗೆ ಜೀವದಾನ ನೀಡಬ
ಮೋದಿ ಸರ್ಕಾರ ಲೆಕ್ಕ ಹಾಕಿದಂತೆ ಕಾಣುತ್ತ
ಈ ಲೆಕ್ಕಾಚಾರಗಳೆಲ್ಲ ತಲೆಕೆಳಗಾಗುವ ಸ
ಗೋಚರಿಸತೊಡಗಿವೆ. ಇತ್ತೀಚಿನ ಒಂದು
ಪ್ರಕಾರ ಈ ಕಪ್ಪುಹಣದ ಶೇಕಡಾ 95ಕ್ಕೂ
ಬಿಳಿಯಾಗಬಹುದು. ಸರ್ಕಾರದ ಮತ್ತು ರಿಸರ್
ಅಂಕಿಅಂಶಗಳೆ ಹೇಳುವಂತೆ ರೂ. 1000 ಮ
500ರ ನೋಟುಗಳ ರೂಪದಲ್ಲಿದ್ದ ಸುಮಾ
15.44 ಲಕ್ಷ ಕೋಟಿಯಲ್ಲಿ ಇದುವರೆಗೆ
10ರಿಂದ 27ರ ತನಕ) ಸುಮಾರು ರೂ.
ಕೋಟಿ ವ್ಯವಸ್ಥೆಯೊಳಗೆ ಮರಳಿಬಂದಿದೆಯ
ವೇಳೆ ಕಪ್ಪುಬಿಳುಪಿನ ದಂಧೆಯೊಂದು ನಡ
ಅದರಲ್ಲಿ ಕೆಲವೊಂದು ಬ್ಯಾಂಕು ಅಧಿಕಾರಿಗ
ಮಠಮಂದಿರಗಳೂ ಭಾಗಿಯಾಗಿದ್ದಾರೆ
ಈಗಾಗಲೆ ಸುಮಾರು ರೂ. 2 ಲಕ್ಷ ಕೋ
ಕಪ್ಪುಹಣ ಬಿಳಿಯಾಗಿ ಬದಲಾಗಿರುವ
ಹೀಗಿರುವಾಗ ಮಿಕ್ಕ ರೂ. 1-3 ಲಕ್ಷ ಕೋಟಿ
ಡಿಸೆಂಬರ್ 30ರ ಒಳಗಾಗಿ ಜಮೆಯಾಗದಿದ್ದ
ಅದು ಸರ್ಕಾರಕ್ಕೆ ಸಿಗಲಿದೆ. ಒಂದು ವೇಳೆ ಜ

ಗಣೆಯುಪ್ಪ ಮತ್ತು ಧಣಿಯುಪ್ಪ




ಗಣೆಯುಪ್ಪ ಮತ್ತು ಧಣಿಯಪ್ಪ ಎಂಬ ಎರಡು ...ಸ ಕೆಲಸ ಹುಡುಕಿಕೊಂಡು ಊರೂರು ...ಯುತ್ತಾ ಬಳ್ಳವೂರು ಎಂಬ ಗ್ರಾಮಕ್ಕೆ ಬಂದವು. ...ದ ಜನ ಅವಕ್ಕೆ ಊಟ ಕೊಟ್ಟು, ಉಪಚಾರ ... ತಮ್ಮ ಗ್ರಾಮದಲ್ಲೆ ಅಗಸನ ಕೆಲಸಕ್ಕೆಂದು ...ಕೊಂಡರು. ಊರೂರು ಸುತ್ತಿ ಸಾಕಾಗಿದ್ದ ಆ ... ಕತ್ತೆಗಳಿಗೆ ಈ ಊರಲ್ಲಿ ಇದ್ದರೆ ಸುತ್ತುವುದು ...ವಯೆಂದು ಸಂತೋಷದಿಂದ ಕೊಟ್ಟ ಕೆಲಸವನ್ನು ...ಲು ಒಪ್ಪಿಕೊಂಡವು. ಎಲ್ಲವೂ ಸರಿಯಾಗಿ ...ಯುತ್ತಿರಬೇಕಾದರೆ ಗಣೆಯಪ್ಪನ ಮನಸ್ಸಿನಲ್ಲಿ ... ಕೆಟ್ಟ ಯೋಚನೆ ಹುಟ್ಟಿತು.

...ಧಣಿಯಪ್ಪನನ್ನು ಕರೆದು, "ಗೆಳೆಯ ಧಣಿ, ...ಡು ನಾವಿಬ್ಬರೂ ಈ ಗ್ರಾಮದ ಜನರಿಗಾಗಿ ...ದು. ದುಡಿದು ಸಾಕಾಗಿದೆ. ಎಷ್ಟು ಅಂತ ನಾವು ... ಕತ್ತೆಗಳ ಹಾಗೆ ದುಡಿಯೋದು? ನಾವು ಕೆಲಸ ...ದಷ್ಟು ಈ ಊರ ಜನರಿಗೆ ತೃಪ್ತಿ ಇಲ್ಲ, ಹೀಗೆ ...ದುವರೆದರೆ ಹೇಗೆ? ದುಡಿದು, ದುಡಿದು ...ಯೇ ಸಾಯಬೇಕಾಗುತ್ತದೆ. ಹಾಗಾಗಿ ನಾಳೆಯಿಂದ ... ಕೆಲಸ ಮಾಡೋದೆ ಬೇಡ" ಎಂದು ಹೇಳಿತು. ...ಯುಪ್ಪ "ಅಲ್ಲ ಗಣಿ, ಈ ಜನ ನಮ್ಮನ್ನ ...ಾಗಿ ನೋಡಿಕೊಳ್ಳುತ್ತಿದ್ದಾರಲ್ಲ? ಹೊತ್ತೊತ್ತಿಗೆ ..., ಉಪಚಾರ ಆಗುತ್ತಿದೆಯಲ್ಲ? ಕೆಲಸ ಮಾಡದೆ ... ನಮಗೆ ಊಟ ಕೊಡ್ತಾರ? ಉಪವಾಸ ...ಬೇಕಾಗುತ್ತದೆ" ಎಂದಿತು. ಅದಕ್ಕೆ ಗಣೆಯಪ್ಪ ...ಪದಿಂದ, "ನೋಡು, ಹುಟ್ಟಿಸಿದ ದೇವರು ...ಲ್ಲಿ ಮೇಯಿಸುತ್ತಾನೆಯೇ? ಏನಾದರು ...ಪಾಡಿಗೆ ಸಿಗುತ್ತೆ, ಆದರೆ ಈ ಗ್ರಾಮದವರಿಗೆ ... ಕಲಿಸಬೇಕು. ನಮ್ಮ ದುಡಿಮೆಗೆ ತಕ್ಕ ಪ್ರತಿಫಲ ...ಲ್ಲ, ನಮ್ಮನ್ನ ಶೋಷಣೆ ಮಾಡುತ್ತಿದ್ದಾರೆ" ... ವಾದಿಸಿತು. ಧಣಿಯಪ್ಪ ಹೆಚ್ಚು ವಾದ ...ಡದೆ ಸುಮ್ಮನಾಯಿತು. ಮರುದಿನದಿಂದ ಅವು ... ಮಾಡದೆ ಕಾಡೆಮ್ಮೆಗಳ ಹಾಗೆ ಬಿದ್ದುಕೊಂಡವು. ...ುವತನಕ ನೋಡಿ ಗ್ರಾಮದ ಜನ ಈ ಎರಡು ...ಂದ ಇನ್ನು ಉಪಯೋಗವಿಲ್ಲವೆಂದು ಅವುಗಳ ...ಯ ಮೇಲೆ ಎರಡು ಲಾತ ಕೊಟ್ಟು ಊರ ...ಗಿರುವ ಗುಡ್ಡದ ಕಡೆಗೆ ಒದ್ದೋಡಿಸಿದರು.

...ಗುಡ್ಡದ ಕಡೆಗೆ ಹೋದ ಗಣೆಯಪ್ಪ ಮತ್ತು ...ಯುಪ್ಪ ಮುಂದೆ ಹೊಟ್ಟೆಗೆ ಏನು ಮಾಡಬೇಕೆಂದು ...ಕ್ರಾಂತವಾದವು. ಪ್ರತಿದಿನ ಊರ ಜನರು ...ತ್ತಿದ್ದ ಮೃಷ್ಟಾನ್ನ ಭೋಜನವನ್ನು ಮೇಯುತ್ತಿದ್ದ ...ರಡು ಕತ್ತೆಗಳು ಹೊಟ್ಟೆಗೆ ಏನೂ ಇಲ್ಲದೆ ಎಷ್ಟು ಅಂತ ಇದ್ದಾವು!? ಹಾಗಾಗಿ ಹೊಟ್ಟೆಹಸಿವನ್ನು ...ಲು ಗುಡ್ಡದ. ಮೇಲೆ ಬೆಳೆದಿರುವ ಹುಲ್ಲು, ...ಗಂಟಗಳು, ಮರ-ಬಳ್ಳಿಗಳು, ಹೂ-ಹಣ್ಣುಗಳನ್ನು ... ಶುರು ಮಾಡಿದವು. ಪಕ್ಕದಲ್ಲೇ ಇದ್ದ ಒಂದು ...ಮಾ ಕೊಳದಲ್ಲಿ ನೀರು ಕುಡಿದು, ಅಲ್ಲೇ ವಾಸ ...ತೊಡಗಿದವು. ಮಾಯಾ ಕೊಳದ ನೀರನ್ನು ಕುಡಿದಷ್ಟು ಅವುಗಳ ಹಸಿವು ಹೆಚ್ಚಾಗತೊಡಗಿತು. ಹಸಿವು ನೀಗಿಸಿಕೊಳ್ಳಲು ಗುಡ್ಡದ ಮೇಲೆ ಏನೇನು ಸಿಗುತ್ತವೊ ಎಲ್ಲವನ್ನು ಅವು ತಿನ್ನತೊಡಗಿದವು. ನಿಧಾನವಾಗಿ ಎಲ್ಲವೂ ಒಂದೊಂದಾಗಿ ಖಾಲಿಯಾಗತೊಡಗಿದವು. ಎಲ್ಲವೂ ಖಾಲಿಯಾಗಿ, ಬೋಳು ತಲೆಯಂತಾದಾಗ ಆ ಕತ್ತೆಗಳು ಗುಡ್ಡದ ಕಲ್ಲು-ಖನಿಜಗಳನ್ನು, ಮಣ್ಣು-ಮರಳನ್ನು ತಿನ್ನತೊಡಗಿದವು. ತಿಂದಷ್ಟು ಮತ್ತೆ ಮತ್ತೆ ತಿನ್ನಬೇಕೆಂದು ಅನಿಸಿತು. ಹಾಗಾಗಿ ರಾತ್ರಿ-ಹಗಲು ಎಡಬಿಡದೆ ಗುಡ್ಡದ ಮಣ್ಣನ್ನು ಕೆದರಿ, ಕೆದರಿ, ಹೊಟ್ಟೆ-ಮುಕುಳಿ ಬಿರಿಯುವಷ್ಟು ತಿನ್ನತೊಡಗಿದವು.

ನೆರಳು, ಮಳೆ, ಬೆಳೆಗಳನ್ನು ನೀಡಿ, ಸೌಂದರ್ಯದಿಂದ ನಳನಳಿಸುತ್ತಿದ್ದ ಆ ಗುಡ್ಡ ನಿಧಾನವಾಗಿ ಕರಗುತ್ತಿರುವುದನ್ನು ನೋಡಿ ಗ್ರಾಮದ ಜನ ಗಾಬರಿಯಾದರು. ಗುಡ್ಡ ಸಣ್ಣದಾಗುತ್ತಿರುವುದಕ್ಕೆ ಗಣೆಯಪ್ಪ ಮತ್ತು ಧಣಿಯಪ್ಪಗಳೆ ಕಾರಣ ಎಂದು ಅವರಿಗೆ ತಿಳಿಯಿತು. ಅವೆರಡನ್ನು ಹೀಗೆ ಬಿಟ್ಟರೆ ಇಡೀ ಗುಡ್ಡವನ್ನು ತಿಂದು, ತೇಗುತ್ತಾವೆಂದು ತಿಳಿದು, ಇದನ್ನು ತಪ್ಪಿಸಲು ಏನಾದರು ಉಪಾಯ ಹುಡುಕಬೇಕೆಂದು ಜನ ನಿರ್ಧರಿಸಿದರು. ಗ್ರಾಮದ ಮುಖಂಡ ಹತ್ತಾರು ಜನರ ಜೊತೆಗೂಡಿ ಆ ಎರಡು ಕತ್ತೆಗಳಿಗೆ ಚೆನ್ನಾಗಿ ತದಕಿ, ಅಲ್ಲಿಂದ ಕಂಬಿ ಕೀಳುವಂತೆ ಮಾಡಲು ಕೋಲು, ಮಚ್ಚು ಮತ್ತು ಕುಡಗೋಲುಗಳ ಸಮೇತ ಹೊರಟ. ಆದರೆ ಆದದ್ದೆ ಬೇರೆ. ಗುಡ್ಡದ ಕಲ್ಲು-ಖನಿಜವನ್ನು ತಿಂದಿದ್ದ ಆ ಎರಡು ಕತ್ತೆಗಳ ದೇಹ ಕಬ್ಬಿಣದಂತಾಗಿದ್ದವು. ಬಂದಿದ್ದ ಗ್ರಾಮದವರಿಗೆ ತಮ್ಮ ಹಿಂಗಾಲಿನಿಂದ ಅವರ ದವಡೆ ಮುರಿಯುವ ಹಾಗೆ ಒದ್ದವು. ಚರ್ಮ ಕಿತ್ತುಬರುವ ಹಾಗೆ ಅವರ ಮುಕಳಿಗಳನ್ನು ಕಚ್ಚಿ ಹಾಕಿದವು. ಬಂದವರು "ಬದುಕಿದೆನೋ, ಸತ್ತೆನೋ" ಎಂದು ಕಾಲಿಗೆ ಬುದ್ಧಿ ಹೇಳಿದರು. ಅವರು ಎದ್ದು, ಬಿದ್ದು ಓಡುತ್ತಿರುವುದನ್ನು ನೋಡಿ ಆ ಎರಡು ಕತ್ತೆಗಳು ಬಿದ್ದು, ಬಿದ್ದು ನಕ್ಕವು.

ಕತ್ತೆಗಳನ್ನು ಮಾಟ-ಮಂತ್ರಗಳಿಂದ ಹೆದರಿಸುವ ಪ್ರಯತ್ನವು ಕೂಡ ವಿಫಲವಾಯಿತು. ಹೀಗೆ ಅವರು ನಿಸ್ಸಹಾಯಕರಾಗಿ ಕೈ ಚೆಲ್ಲಿ ಕುಳಿತಿರಬೇಕಾದರೆ, ಒಬ್ಬ ಫಕೀರ ಇವರ ಸಮಸ್ಯೆಯನ್ನು ಅರ್ಥಮಾಡಿಕೊಂಡು ಹೀಗೆ ಹೇಳಿದ: "ನೀವು ಹೀಗೆ ಕೈಚೆಲ್ಲಿ ಕುಳಿತರೆ ಉಪಯೋಗವೇನು? ಆ ಕತ್ತೆಗಳು ಈಗ ಕೊಬ್ಬಿದ ಕಾಡೆಮ್ಮೆಗಳಾಗಿವೆ. ನಾನು ಹೇಳಿದ ಹಾಗೆ ಕೇಳಿ. ಊರ ಕೊನೆಯಲ್ಲಿ ಇರುವ ಗುಹೆಯಲ್ಲಿ ಬ್ರಹ್ಮ ರಾಕ್ಷಸನ ಹಾಗೆ ಒಬ್ಬ ಹುಲಿರಾಯ ಇದ್ದಾನೆ. ಅವನ ಸಹಾಯ ಕೇಳಿ. ನಿಮ್ಮ ಕೆಲಸ ಆಗುತ್ತದೆ."



ಫಕೀರನ ಮಾತಿನಂತೆ ಗ್ರಾಮದ ಜನರೆಲ್ಲ ಹುಲಿರಾಯ ಇರುವ ಗುಹೆಗೆ ಹೋಗಿ, ಅವನ ಮುಂದೆ ಕೈಮುಗಿದು ನಿಂತು, "ಹುಲಿರಾಯ, ನಾವೆಲ್ಲರೂ ನಿನ್ನ ಸಹಾಯವನ್ನು ಬೇಡಲು ಬಂದಿದ್ದೇವೆ" ಎಂದು ಬೇಡಿದರು. ಆಗತಾನೆ ಗಾಢ ನಿದ್ದೆಯಿಂದ ಎದ್ದಿದ್ದ ಹುಲಿರಾಯ ಘರ್ಜಿಸುತ್ತಾ, "ಓಹೋ, ನರಮನುಷ್ಯರಿಗೆ ನನ್ನಂತ ಪ್ರಾಣಿಗಳಿಂದ ಸಹಾಯ ಕೇಳುವ ದುಸ್ಥಿತಿ ಬಂತೆ!? ಇರಲಿ. ಏನು ಸಹಾಯ ಕೇಳಲು ಬಂದಿದ್ದೀರಿ?"

ಜನ, "ಹುಲಿಯಣ್ಣ, ನಮ್ಮೂರಿನ ಗುಡ್ಡವನ್ನು ಗಣೆಯಪ್ಪ ಮತ್ತು ಧಣಿಯಪ್ಪ ಎಂಬ ಎರಡು ಕತ್ತೆಗಳು ತಿಂದು, ತಿಂದು, ಹೇಲುತ್ತಿವೆ. ಗುಡ್ಡ ಖಾಲಿಯಾದರೆ ನಮಗೆ ಬರುವ ಮಳೆ, ಸಿಗುವ ನೆರಳು, ಕಾಣುವ ಪ್ರಕೃತಿ ಸೌಂದರ್ಯ ಎಲ್ಲಾ ಹಾಳಾಗಿಹೋಗುತ್ತದೆ. ಹಾಗಾಗಿ ನೀನು ಆ ಕತ್ತೆಗಳಿಗೆ ತಕ್ಕ ಶಾಸ್ತಿ ಮಾಡಿ, ಅವುಗಳನ್ನು ಅಲ್ಲಿಂದ ಓಡಿಸಿ ನಮ್ಮ ಗುಡ್ಡವನ್ನು ಉಳಿಸಿಕೊಡಬೇಕು" ಎಂದು ಬೇಡಿಕೊಂಡರು.

"ನಿಮಗೆ ಸಹಾಯ ಮಾಡಿದರೆ ನನಗೇನು ಲಾಭ?" ಎಂದು ಹುಲಿರಾಯ ಕೇಳಿದ.

"ನಿನಗೆ ನಾವು ಮುಂದಿನ ಹತ್ತು ವರ್ಷಗಳವರೆಗೆ ತಿನ್ನಲು ಮಾಂಸ ನೀಡುತ್ತೇವೆ" ಎಂದು ಜನ ಪ್ರಮಾಣ ಮಾಡಿದರು. ಇನ್ನು ಸಾಯುವವರೆಗೂ ಬೇಟೆಯಾಡಿ ಹೊಟ್ಟೆ ಹೊರೆದುಕೊಳ್ಳುವುದು ತಪ್ಪಿತೆಂದು ಹುಲಿರಾಯನಿಗೆ ಸಂತೋಷವಾಗಿ, ಆ ಎರಡು ಕತ್ತೆಗಳಿಗೆ ಪಾಠ ಕಲಿಸಲು ಒಪ್ಪಿಕೊಂಡಿತು.

* * * * *

ಹುಲಿರಾಯ ಗುಡ್ಡದ ಹತ್ತಿರ ಬಂದಾಗ ಗಣೆಯಪ್ಪ ಮತ್ತು ಧಣಿಯಪ್ಪ ಗುಡ್ಡವನ್ನು ಮುಕಳಿಪೂರ್ತಿ ಮೇಯುತ್ತಿದ್ದವು. ಅವುಗಳನ್ನು ನೋಡುತ್ತಲೆ ಹುಲಿರಾಯ ಒಮ್ಮೆ ಜೋರಾಗಿ ಘರ್ಜಿಸಿದ, "ನಿಮ್ಮಿಬ್ಬರನ್ನು ನಾನು ಈಗ ತಿಂದು ಹಾಕುತ್ತೇನೆ". ದೈತ್ಯಾಕಾರದ ಆ ಹುಲಿರಾಯನನ್ನು ನೋಡಿದ ಆ ಎರಡು ಕತ್ತೆಗಳು ಬೆವರಿ ಹೋದವು. ಅದರ ಬಾಯಿಂದ ಹೇಗಾದರೂ ಪಾರಾಗ ಬೇಕೆಂದು ಉಪಾಯ ಹುಡುಕಿ "ಬ್ಯಾಡ ಹುಲಿರಾಯ. ನಮ್ಮನ್ನು ತಿನ್ನಬೇಡ. ನೋಡು ನಾವು ಎಷ್ಟು ಬಡಕಲು ಅದಿವಿ. ನಮ್ಮ ಮೈಯಲ್ಲಿ ಎಷ್ಟು ಮಾಂಸ ನಿನಗೆ ಸಿಕ್ಕೀತು? ನಾವಿಬ್ಬರು ಚೆನ್ನಾಗಿ ಮೇಯ್ದು, ದಷ್ಟಪುಷ್ಟವಾಗಿ ಬರುತ್ತೀವಿ. ಅಲ್ಲಿಯವರೆಗೂ ನೀನು ನಮಗಾಗಿ ತಾಳ್ಮೆಯಿಂದ ಕಾಯಿ" ಎಂದವು. ಅದಕ್ಕೆ ಹುಲಿರಾಯ ಒಪ್ಪಿ "ಹಂಗಾದ್ರೆ ನಾನು ಇಲ್ಲೇ ಇರ್ತೀನಿ. ನೀವು ಚೆನ್ನಾಗಿ ಮೇದು ಇದೇ ಜಾಗಕ್ಕೆ ಬರಬೇಕು" ಎಂದು ಹೇಳಿತು.

ಗಣೆಯಪ್ಪ, ಧಣಿಯಪ್ಪ ಗುಡ್ಡದ ಒಂದು ಅಂಚಿಗೆ ಹೋಗಿ, ಹುಲಿರಾಯನಿಗೆ ಕಾಣಿಸದ ಹಾಗೆ ಅಲ್ಲಿನ ಕೆಸರಿನಲ್ಲಿ ಚೆನ್ನಾಗಿ ಉರುಳಾಡಿದವು. ಮೈತುಂಬ ಕೆಸರಿನ ಕೆಂಪುಮಣ್ಣು ಮೆತ್ತಿಕೊಂಡಿತು. ಈಗ ಆ ಎರಡು ಕತ್ತೆಗಳು ಇನ್ನಷ್ಟು ದಪ್ಪಗಾಗಿ ಕಂಡವು. ಹುಲಿರಾಯನ ಹತ್ತಿರ ಬಂದು, "ಹುಲಿರಾಯ, ಈಗ ನೀನು ನಮ್ಮನ್ನು ತಿನ್ನಬಹುದು. ಆದರೆ ಒಂದು ಕರಾರು. ಏನಪ್ಪಾ ಅಂದ್ರೆ, ನೀನು ಮೂರೇ ಮೂರು ಸಾರಿ ನಮ್ಮ ಮೈಗೆ ಬಾಯಿ ಹಾಕಬೇಕು. ಬಾಯಿಗೆ ಬಂದಷ್ಟು ಮಾತ್ರ ತಿನ್ನಬೇಕು. ನಂತರ ನಾವು ಮೂರೇ ಮೂರು ಸಾರಿ ನಿನ್ನನ್ನು ಒದಿತೀವಿ. ಒದಿಸ್ಕೋಬೇಕು" ಅಂತ ಹೇಳಿದವು. ಅದಕ್ಕೆ ಹುಲಿರಾಯ ಒಪ್ಪಿಕೊಂಡು ಮೂರು ಸಾರಿ ಆ ಎರಡು ಕತ್ತೆಗಳ ಮೈಗೆ ಬಾಯಿ ಹಾಕಿತು. ಆದರೆ ಹುಲಿರಾಯನ ಬಾಯಿಗೆ ಆ ಕತ್ತೆಗಳ ಕೆಸರು ಅಂಟಿಕೊಂಡಿತೆ ಹೊರತು, ಮಾಂಸ ಸಿಗಲಿಲ್ಲ. ಈಗ ಕತ್ತೆಗಳ ಸರದಿ ಬಂತು. ಕರಾರಿನಂತೆ ಎರಡು ಕತ್ತೆಗಳು ತಮ್ಮ ಹಿಂಗಾಲಿನಿಂದ ಹುಲಿರಾಯನನ್ನು ಒಮ್ಮೆ ಒದ್ದವು. ಅವುಗಳ ಹೊಡೆತ ಹೆಂಗಿತ್ತೆಂದರೆ ಹುಲಿರಾಯನಿಗೆ ತಲೆಯ ಸುತ್ತ ನಕ್ಷತ್ರಗಳು ಕಂಡವು. ಯಾರೋ ದೊಡ್ಡ ಸುತ್ತಿಗೆಯಿಂದ ತಲೆಗೆ ಹೊಡೆದ ಹಾಗೆ ಆಯಿತು. ಬಾಯಿಂದ ಎರಡು ಹಲ್ಲುಗಳು ನೆಲಕ್ಕೆ ಉದುರಿದವು. ಮೂರ್ಛೆ ಹೋಗುವ ಅನುಭವವಾಯಿತು. ಇನ್ನು ಇಲ್ಲೇ ಇದ್ದರೆ ತನಗೆ ಉಳಿಗಾಲ ಇಲ್ಲ ಎಂದು ಹುಲಿರಾಯ ಅಲ್ಲಿಂದ ಒಂದೇ ಓಟಕ್ಕೆ ಮಾಯವಾಯಿತು.

* * * * *

ಗಣೆಯಪ್ಪ ಮತ್ತು ಧಣಿಯಪ್ಪನಿಗೆ ಈಗ ಯಾರೂ ಸಾಟಿಯಿರಲಿಲ್ಲ. ಯಾರ ತೊಂದರೆಯಿಲ್ಲದೆ ಅವೆರಡು ಒಂದು ಗುಡ್ಡವನ್ನು ಖಾಲಿ ಮಾಡಿ ಮತ್ತೊಂದು ಗುಡ್ಡವನ್ನು ಮೇಯಲು ಶುರುಮಾಡಿದವು.


■ ಡಾ.ವಿಜಯಕುಮಾರ ಎಂ ಬೋರಟ್ಟಿ

◀◀

...ಹಣವನ್ನೆಲ್ಲಾ ಬಿಳಿಯಾಗಿಸಲಾಗಿದೆ ಎಂದರ್ಥ... ...ಸಿದಷ್ಟು ಪ್ರಮಾಣದಲ್ಲಿ "ಕಪ್ಪು" ನೋಟುಗಳು ...ಮಬಾರದ ಕಾರಣಕ್ಕೇ ಮೊನ್ನೆ ಲೋಕಸಭೆಯಲ್ಲಿ ...ವುದೇ ಚರ್ಚೆ ಅಥವಾ ತಿದ್ದುಪಡಿಗೂ ಅವಕಾಶ ... ತೆರಿಗೆ ತಿದ್ದುಪಡಿ ಕಾನೂನನ್ನು ಬುಲ್ಡೋಜ್ ...ಲಾಗಿದೆ. ಇದೊಂದು ತೆರಿಗೆಕಳ್ಳ, ಭ್ರಷ್ಟ ಕಾಳಧನಿಕರನ್ನು ...ಉಳಿಸುವ ಯತ್ನದಂತೆ ತೋರುತ್ತದೆ.

...ರಿಸರ್ವ್ ಬ್ಯಾಂಕಿನ ಸುತ್ತೋಲೆಯೆ ಹೇಳುವಂತೆ ...ರ ಆಗಸ್ಟ್ ಮತ್ತು ಸೆಪ್ಟಂಬರ್ ತಿಂಗಳುಗಳಲ್ಲಿ ...ುಗಳು ಒಟ್ಟು ರೂ. 3.67 ಲಕ್ಷ ಕೋಟಿಯಷ್ಟು ...ರಿಗಿಂತ ಸುಮಾರು ನಾಲ್ಕು ಪಟ್ಟು ಜಾಸ್ತಿ) ಠೇವಣಿ ... ಸ್ವೀಕರಿಸಿವೆಯಂತೆ! ಇದರರ್ಥ ಕೆಲವರಿಗೆ (ಕಾಳ ...ಗೆ?) ನೋಟು ರದ್ದತಿಯ ಮುನ್ಸೂಚನೆ ಸಿಕ್ಕಿತ್ತು, ...ಲ್ಲಿ ಕಪ್ಪು ಎಷ್ಟು, ಬಿಳಿ ಎಷ್ಟು ಯಾರು ಬಲ್ಲರು? ...ಬರ್ ತಿಂಗಳ ಠೇವಣಿ ವಿವರಗಳು ಇನ್ನು ...ಕಷ್ಟೆ!

...ಹಾಗಾದರೆ ನೋಟು ರದ್ದತಿಯಿಂದ ಏನು ಸಾಧಿಸಿ...ದಂತು? ಇತ್ತ ಶ್ರೀಸಾಮಾನ್ಯನಿಗೆ ಗಡಿ ಕಾಯುವ ...ಉದಾಹರಣೆ ಕೊಟ್ಟು, ಅವರು ತಪ್ಪೆಲ್ಲಾ ಕಷ್ಟಗಳನ್ನು ...ಕೊಳ್ಳುವಂತೆ ಮಾಡಿ, ಅವರನ್ನು "ಅಚ್ಛೇ ದಿನ್" ...ಭ್ರಮೆಯಲ್ಲಿ ತೇಲಿಸಿ ಅತ್ತ ಕಾಳಧನಿಕರಿಗೆ ... ನಗದು ರೂಪದಲ್ಲಿದ್ದ ಕಪ್ಪುಹಣವನ್ನೆಲ್ಲ ಬಿಳಿಯಾಗಿಸಲು ಅವಕಾಶ ಕಲ್ಪಿಸಿಕೊಟ್ಟಂತಾಯಿತು! ಭ್ರಷ್ಟಾಚಾರವನ್ನು ಹಾಗೇ ಉಳಿಸಿದಂತಾಯಿತು.



ಕಪ್ಪುಹಣ ಬದಿಗೆ, ನಗದುರಹಿತ ವಹಿವಾಟು ಮುನ್ನೆಲೆಗೆ

ಮೋದಿ ಸರ್ಕಾರದ ಕಾಳಧನ ವಿರುದ್ಧ "ಸರ್ಜಿಕಲ್ ದಾಳಿ" ಈಗ "ನಗದುರಹಿತ ಭಾರತ" ಎಂಬುದಾಗಿ ಬದಲಾಗಿರುವಂತೆ ತೋರುತ್ತಿದೆ. ಇತ್ತೀಚೆಗೆ ಉತ್ತರ ಪ್ರದೇಶದ ಮೊರಾದಾಬಾದ್‌ನ ಚುನಾವಣಾ ಸಭೆಯೊಂದರಲ್ಲಿ ನಗದುರಹಿತ ಆರ್ಥಿಕತೆ ವಿಷಯವನ್ನು ಪ್ರಸ್ತಾಪಿಸಿದ ಮೋದಿ "ಭಾರತೀಯರು ಸಮಯ ವ್ಯರ್ಥ ಮಾಡದೆ ಬದಲಾವಣೆಯನ್ನು ಸ್ವೀಕರಿಸುತ್ತಾರೆ" ಎಂದು ಹೇಳುತ್ತಾ ಅದಕ್ಕೆ ಪುರಾವೆಯಾಗಿ ದಾನಿ ಮುಂದೆ ನಿಂತ ಭಿಕ್ಷುಕನೊಬ್ಬ ತನ್ನ ಜೋಳಿಗೆಯಿಂದ ಸ್ವೈಪ್ ಮಷೀನ್ ಹೊರತೆಗೆದು ಕ್ರೆಡಿಟ್ ಕಾರ್ಡ್ ಕೊಡಿ ಎಂದು ಕೇಳುವ ವಿಡಿಯೊ ಒಂದರ ಉದಾಹರಣೆ ಕೊಡುತ್ತಾನೆ. ಆದರೆ ಅದು ನಿಜವಾಗಿ ನಡೆದ ಘಟನೆಯ ವಿಡಿಯೊ ಅಲ್ಲ; ಎರಡು ವರ್ಷಗಳ ಹಿಂದೆ ನಗದುರಹಿತ ವಹಿವಾಟನ್ನು ಗೇಲಿ ಮಾಡಲೆಂದು ನಟರನ್ನು ಬಳಸಿ ತಯಾರಿಸಿದ್ದ ವ್ಯಂಗ್ಯಚಿತ್ರ! ಸರ್ವಾಧಿಕಾರಿ ಪ್ರವೃತ್ತಿಯ ನಾಯಕರು ಜನರನ್ನು ವಂಚಿಸುವ ನೂರಾರು, ಸಾವಿರಾರು ವಿಧಾನಗಳಲ್ಲಿ ಇದೂ ಒಂದು. ಅಮಾಯಕ ಜನ ಇದನ್ನೇ ಸತ್ಯವೆಂದು ನಂಬಿ ಮೋಸಹೋಗುತ್ತಿರುವುದು ದೊಡ್ಡ ದುರಂತ.

ನಗದುರಹಿತ ಆರ್ಥಿಕತೆಯನ್ನು ಅಳವಡಿಸಲು ಅವಸರದಿಂದಿರುವ ಮೋದಿಗೆ ಪ್ರಾಯಶಃ ಅಭಿವೃದ್ಧಿಯಾದ ದೇಶಗಳಲ್ಲಿ ವಿದ್ಯುನ್ಮಾನ ಪಾವತಿ ಎಷ್ಟಿದೆಯೆಂದು ಗೊತ್ತಿಲ್ಲ. ಅತ್ಯಧಿಕ ನಗದುರಹಿತ ವಹಿವಾಟಿನ ದೇಶವಾದ ಸಿಂಗಾಪುರದಲ್ಲಿ ಅದು 61% ಇದ್ದರೆ ಅಮೆರಿಕದಲ್ಲಿ 45% ಇದೆ ಅಷ್ಟೆ. 2% ವಹಿವಾಟಿನೊಂದಿಗೆ ತೀರ ಕೆಳಗಿನ ಮಟ್ಟದಲ್ಲಿರುವ ಭಾರತ ಪಾಶ್ಚಿಮಾತ್ಯ ರಾಷ್ಟ್ರಗಳ ಮಟ್ಟಕ್ಕೆ ಬರಬೇಕಾದರೆ ಇನ್ನೂ ಹಲವಾರು ದಶಕಗಳೇ ಬೇಕಾಗಬಹುದು. ಅದೂ ಸಾಕ್ಷರತೆ, ಬ್ಯಾಂಕು ಶಾಖೆಗಳ ಮತ್ತು ಎಟಿಎಂಗಳ ಲಭ್ಯತೆ ಇತ್ಯಾದಿಗಳನ್ನು ಸಮರೋಪಾದಿಯಲ್ಲಿ ಮಾಡಿದರೆ. ನಗದುರಹಿತ ವಹಿವಾಟು ಪುಕ್ಕಟೆಯೆಂದು ಯಾರಾದರೂ ಭಾವಿಸಿದರೆ ಅದು ತಪ್ಪು ತಿಳಿವಳಿಕೆ. ನಮ್ಮ ಖರೀದಿಗಳಿಗೆ ಇಂತಿಷ್ಟೆಂದು ಕಮಿಷನ್ ನೀಡಬೇಕಾಗುತ್ತದೆ. ಉದಾಹರಣೆಗೆ ನೀವು ಪೆಟ್ರೋಲ್ ಬಂಕಿನಲ್ಲಿ ರೂ. 2000ರ ಇಂಧನ ಹಾಕಿಸಿಕೊಂಡು ಎಟಿಎಂ ಕಾರ್ಡ್ ಸ್ವೈಪ್ ಮಾಡಿದರೆ ಬ್ಯಾಂಕು ಸುಮಾರು ರೂ. 70ರಷ್ಟು ಕಮಿಷನ್‌ಅನ್ನು ನಿಮ್ಮ ಖಾತೆಯಿಂದ ಮುರಿದುಕೊಳ್ಳುತ್ತದೆ. ಹೀಗೆ ಪ್ರತಿಯೊಂದು ಖರೀದಿಗೂ ಕಮಿಷನ್ ಕೊಡಬಲ್ಲವರು ಯಾರು? ಕೇವಲ ಮಧ್ಯಮ, ಮೇಲ್ಮಧ್ಯಮ ವರ್ಗಗಳ ಜನರಷ್ಟೆ ಹೊರತು ಸಾಮಾನ್ಯ ಜನರಲ್ಲ. ವಿದ್ಯುನ್ಮಾನ ಪಾವತಿಯ ಮತ್ತೊಂದು ಅಪಾಯವೆಂದರೆ ಹೆಚ್ಚಿನ Appಗಳು ವೈಯಕ್ತಿಕ ದತ್ತಾಂಶಗಳಿಗೆ ಕನ್ನ ಹಾಕುತ್ತವೆ.

ನಿರಂಕುಶ ಮನೋವೃತ್ತಿಯ ನಾಯಕರು ಅಂತಿಮವಾಗಿ ಒಂದು ದೇಶವನ್ನು ಎತ್ತ ಒಯ್ಯಲಿರುವರು ಎಂಬುವಕ್ಕೆ ಇತಿಹಾಸದಲ್ಲಿ ಹೇರಳ ನಿದರ್ಶನಗಳು ಸಿಗುತ್ತವೆ. ಪ್ರಶ್ನೆ ಏನೆಂದರೆ ಭಾರತೀಯರು ಈಗಲಾದರೂ ಎಚ್ಚೆತ್ತುಕೊಂಡು ತಮ್ಮ ಮೇಲೆ ಕವಿದಿರುವ ಭ್ರಮೆಯ ಪೊರೆಯನ್ನು ಹರಿದು ಭಾರತವನ್ನು ಸರಿದಾರಿಗೆ ತಿರುಗಿಸುವ ಬಗ್ಗೆ ಗಂಭೀರವಾಗಿ ಯೋಚಿಸುವರೆ?

■ ಸುರೇಶ್ ಭಟ್ ಬಾಕ್ರಬೈಲ್

ದಾಖಲೆ ನಿರ್ಮಿಸಿದ ರಾಯಚೂರು ಸಮ್ಮೇಳ



ರಾಯಚೂರಿನಲ್ಲಿ ನಡೆದ ಸಾಹಿತ್ಯ ಸಮ್ಮೇಳನ ಹಲವು ದಾಖಲೆಗಳನ್ನು ಮಾಡಿದೆ. ಇಡೀ ಸಮ್ಮೇಳನದಲ್ಲಿ ಇದರ ರೂವಾರಿಯಾದ ಸಾಹಿತ್ಯ ಪರಿಷತ್ ಅಧ್ಯಕ್ಷ ಮನು ಬಳಿಗಾರರ ಸಮರ್ಥ ನಿರ್ವಹಣೆ ಎದ್ದು ಕಾಣುತ್ತಿತ್ತು. ಹಾಗೆ ನೋಡಿದರೆ, ಇದೊಂದು ಬೃಹತ್ ಬಂಡಾಯ ಸಾಹಿತ್ಯ ಸಮ್ಮೇಳನವಾಗಿತ್ತು. ಎಂಬತ್ತರ ದಶಕದ ಆರಂಭದಲ್ಲಿ ಇಲ್ಲೊಂದು ಬಂಡಾಯ ಸಾಹಿತ್ಯ ಸಮ್ಮೇಳನ ನಡೆದಿತ್ತು. ಅವರ ರೂವಾರಿ ಬರಗೂರು ರಾಮಚಂದ್ರಪ್ಪನವರು. ಆಗವರು ಬಂಡಾಯ ಸಂಘಟನೆಯ ಬಹುಮುಖ್ಯ ಭಾಷಣಕಾರರಾಗಿದ್ದರು. ಅವರ ಆರಂಭದ ಭಾಷಣದ ಆಶಯದಂತೆಯೇ ಬಂಡಾಯ ಸಮ್ಮೇಳನ ಜರುಗುತ್ತಿದ್ದವು. ಹಂಪನಾ ನಡೆಸುತ್ತಿದ್ದ ಸಾಹಿತ್ಯ ಸಮ್ಮೇಳನಗಳ ವಿರುದ್ಧವಾಗಿ ನಡೆಯುತ್ತಿದ್ದ ಅಂದಿನ ಬಂಡಾಯ ಸಾಹಿತ್ಯ ಸಭೆಗಳು ಬಿರುಸಾಗಿ ಜರುಗುತ್ತಿದ್ದವು.

ರಾಯಚೂರಿನಲ್ಲಿ ಅಂದು ನಡೆದ ಬಂಡಾಯ ಸಾಹಿತ್ಯ ಸಮ್ಮೇಳನ ಚಿಕ್ಕಮಗಳೂರಲ್ಲಿ ನಡೆದ ಪುತಿನ ಅಧ್ಯಕ್ಷತೆಯ ಸಮ್ಮೇಳನಕ್ಕೆ ವಿರುದ್ಧ ನಡೆದ ಸಮ್ಮೇಳನದಂತಿತ್ತು. ಈ ಹಂಪನ ದೆಸೆಯಿಂದಲೇ ಇಂದು ಅಸಂಖ್ಯಾತವಾಗಿ ಹೆಚ್ಚಿಕೊಂಡಿರುವ ಜಗದ್ಗುರುಗಳು ಸಾಹಿತ್ಯ ಸಮ್ಮೇಳನಗಳಲ್ಲಿ ವಿರಾಜಮಾನರಾಗತೊಡಗಿದ್ದು. ಚಿಕ್ಕಮಗಳೂರಲ್ಲಿ ನಡೆದ ಸಾಹಿತ್ಯ ಸಮ್ಮೇಳನದಲ್ಲೂ ಆರಂಭಿಕ ಭಾಷಣವನ್ನು ಧರ್ಮಸ್ಥಳದ ವೀರೇಂದ್ರ ಹೆಗ್ಗಡೆ ಮಾಡಿದ್ದು ಬಂಡಾಯದವರನ್ನು ಕೆರಳಿಸಿತ್ತು.

ಸುಮಾರು ಆದೇ ಸಮಯಕ್ಕೆ ನಡೆದ ರಾಯಚೂರಿನ ಬಂಡಾಯ ಸಾಹಿತ್ಯ ಸಮ್ಮೇಳನ ತುಂಬ ಬಡತನದಿಂದ ಕೂಡಿತ್ತು. ಅತಿಥಿಗಳ ಹೊರತಾಗಿ ಇನ್ನಾರಿಗೂ ಕುರ್ಚಿಗಳಿರಲಿಲ್ಲ. ದೇವನೂರು ಮಹಾದೇವ ಕೂಡ ನೆಲದಲ್ಲೇ ಕುಳಿತು ಎಲ್ಲಾ ಗೋಷ್ಠಿಗಳನ್ನು ಗಂಭೀರವಾಗಿ ಕೇಳಿದ್ದರು. ಅಂದು ಬಂಡಾಯದ ರೂವಾರಿಗಳಾದ ಬರಗೂರು, ಕಾಳೇಗೌಡ ನಾಗವಾರ, ಸಿದ್ಧಲಿಂಗಯ್ಯ, ಚಂಪಾ, ಚೆನ್ನಣ್ಣ, ರಂಜಾನ್ ದರ್ಗಾ, ದೇವಯ್ಯ ಹರವೆ, ಬಿ.ಟಿ. ಲಲಿತಾ ನಾಯಕ್, ವೈಕುಂಠ ರಾಜು ಮುಂದಾಳತ್ವ ವಹಿಸಿದ್ದರು. ಸಮ್ಮೇಳನಕ್ಕೂ ಮುನ್ನ ಮೆರವಣಿಗೆಯಿತ್ತು. 'ಸೀತಾಯಣ'ದಿಂದ ಖ್ಯಾತರಾಗಿದ್ದ ಪೋಲಂಕಿ ರಾಮಮೂರ್ತಿ ಅಂದು ನೆನಪಿಡುವ ಭಾಷಣ ಮಾಡಿದ್ದರು. ಯಾರೊ ಮೈಸೂರು ಕಡೆಯ ಪುಣ್ಯಾತ್ಮ ಎಲ್ಲರಿಗೂ ಎರಡು ದಿನ ಊಟ ಹಾಕಿದ್ದರು. ಸಾಹಿತ್ಯ ಅದರಲ್ಲಿನ ಬಂಡಾಯ ಇತ್ಯಾದಿ ಪ್ರಮುಖವಾಗಿದ್ದ ಆ ಸಮ್ಮೇಳನ ನಿಜವಾದ ಸಾಹಿತ್ಯ ಸಮ್ಮೇಳನದ ಮಾದರಿಗೊಂದು ಉದಾಹರಣೆಯಾಗಿತ್ತು.

ಆದರೆ ಈ ನಾಲ್ಕು ದಶಕದಲ್ಲಿ ಅಂದಿನ ಎಲ್ಲ ಬಂಡಾಯದವರ ಕಸುವು ಕರಗಿ ಸಮನ್ವಯತೆ ಮೈದುಂಬಿಕೊಂಡಿದೆ. ಅಂದು ಬಂಡಾಯದ ದನಿಯಲ್ಲಿ ಠೇಂಕರಿಸಿದವರೆಲ್ಲಾ ಸರ್ಕಾರಗಳ ಸ್ಥಾನಮಾನಗಳಲ್ಲಿ ಕುಳಿತು ಆಡಳಿತ ಮಾಡಿದ್ದಾರೆ. ಅವರುಗಳು ನಿರ್ವಹಿಸಿದ ಜವಾಬ್ದಾರಿಗಳಿಗೆ ಖಚಿತ ರೂಪುರೇಷೆ ಕೊಟ್ಟಿದ್ದಾರೆ. ಅಂದು ರಾಯಚೂರಲ್ಲಿ ನಡೆದ ಬಂಡಾಯ ಸಾಹಿತ್ಯ ರೂವಾರಿಗಳೆಲ್ಲಾ ಇಂದು ನಡೆದ ಸಾಂಸ್ಕೃತಿಕ ಸಾಹಿತ್ಯ ಸಮ್ಮೇಳನದಲ್ಲಿ ವಿರಾಜಮಾನರಾಗಿದ್ದನ್ನ ನೋಡಲು ಎರಡು ಕಣ್ಣು ಸಾಲದಾಗಿತ್ತು!



ಅಹಿಂದ ಸರ್ಕಾರದಲ್ಲಿ ಸಮ್ಮೇಳನದ ಅಧ್ಯಕ್ಷರು ಇನ್ಯಾರಾಗಲು ಸಾಧ್ಯ? ಬ್ರಾಹ್ಮಣರು, ಲಿಂಗಾಯತರು ಒಕ್ಕಲಿಗರ ಹೊರತಾಗಿ ಯಾರಾದರೂ ಆಗಬಹುದೆಂಬ ಚರ್ಚೆಗಳು ಅಹಿಂದ ಅಲ್ಲದವರ ಚಾವಡಿಗಳಲ್ಲಿ ನಡೆಯುತ್ತಿರುವಾಗಲೇ ಬರಗೂರು ಪಡೆಯಿಂದ ಈ ಸಂಬಂಧವಾದ ವಾಸನೆ ಹರಡತೊಡಗಿತ್ತು. ಆದರೆ "ಸಾಹಿತ್ಯ ಕ್ಷೇತ್ರದಲ್ಲಿ ಬರಗೂರು ಸಾಧನೆ ಬುರ್ನಾಸು. ನೆನಪಿಡುವಂತಹ ಒಂದು ಕಾವ್ಯದ ಸಾಲಿಲ್ಲ. ಕೋಟ್ ಮಾಡಲು ಒಂದು ಕಥೆಯಿಲ್ಲ, ಕಾದಂಬರಿಯೂ ಇಲ್ಲ, ಇನ್ನು ಸಿನಿಮಾಗಳಲ್ಲಂತೂ ಜೀವವೇ ಇಲ್ಲ" ಎಂದು ಬರಗೂರು ಕಂಡರಾಗದ ಕಿಡಿಗೇಡಿಗಳು ಸಾಹಿತ್ಯದ ವಾತಾವರಣದಲ್ಲಿ ಹೊಟ್ಟೆಕಿಚ್ಚಿನ ಮಾತುಗಳನ್ನು ತೂರಿಬಿಟ್ಟಿದ್ದರು. ಆದರೂ ಕೂಡ ಅಂತಿಮವಾಗಿ ಬರಗೂರು 82ನೇ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಆಯ್ಕೆಯಾದದ್ದು ಈಗ ಇತಿಹಾಸ.

ರಾಯಚೂರಲ್ಲಿ ನಡೆದ ಸಾಹಿತ್ಯ ಸಮ್ಮೇಳನಕ್ಕೆ ಸೇರಿದ್ದ ಜನಸಮೂಹ ಈ ಹಿಂದೆ ನಡೆದ ಸಮ್ಮೇಳನಗಳ ದಾಖಲೆಯನ್ನು ಮುರಿದಿದೆ. ಗಡಿನಾಡಿಗೆ ಸಮೀಪವಿರುವ ರಾಯಚೂರಿಗೆ ಇಷ್ಟೊಂದು ಜನ ಜಮಾಯಿಸಿದ್ದು ಅಚ್ಚರಿ ಮೂಡಿಸಿತ್ತು. ಉದ್ಘಾಟನೆಯ ಸಮಾರಂಭದಲ್ಲಿ ಮಾತನಾಡಿದ ಎಲ್ಲರೂ ಚೆನ್ನಾಗಿ ಮಾತನಾಡಿದರು. ಮೂರ್‍ನಾಲ್ಕು ಗಂಟೆ ಬಜೆಟ್ ಭಾಷಣ ಓದುವ ಸಿದ್ದರಾಮಯ್ಯನವರೂ "ಬರಗೂರು ಭಾಷಣ ಕೇಳಲು ಉತ್ಸುಕನಾಗಿದ್ದೇನೆ" ಎಂದರು. ಬರಗೂರು ಭಾಷಣ ಮಾಡುವ ಹೊತ್ತಿಗಾಗಲೇ ಊಟದ ಸಮಯ ಮೀರಿಹೋಗಿತ್ತು, ಆದರೂ ಒತ್ತರಿಸಿಕೊಂಡು ನಿಂತಿದ್ದ ಜನರು ಒಂದಿಷ್ಟೂ ಕದಲದೆ ಭಾಷಣ ಕೇಳಿದ್ದೊಂದು ದಾಖಲೆ. ನಿಜಕ್ಕೂ ಭಾಷಣ ಕಲೆ ಎನ್ನುತ್ತಾರಲ್ಲ, ಆ ಕಲೆ ಬರಗೂರರಿಗೆ ಸಿದ್ದಿಸಿದೆ. ಕನ್ನಡದ ದಿನನಿತ್ಯದ ಬದುಕಿನ ಪದಗಳು ಅವರಲ್ಲಿ ಕಾವ್ಯದ ರೂಪ ಪಡೆಯುತ್ತವೆ. ಕೇಳುಗರನ್ನು ಮಂತ್ರಮುಗ್ಧವಾಗಿಸುತ್ತವೆ. ಸಾಮಾನ್ಯ ಜನ ಕೂಡ ರಾಯಚೂರಿನಲ್ಲಿ ಬರಗೂರು ರಾಮಚಂದ್ರಪ್ಪ ಅದ್ಭುತವಾಗಿ ಮಾತನಾಡಿದರು ಎನ್ನುತ್ತಿದ್ದರು. ಏನು ಮಾತನಾಡಿದರೆಂದು ಕೇಳಿದರೆ ಅದರ ವಿವರ ಸಾಧ್ಯವಿಲ್ಲದೆ "ಒಟ್ನು ಚೆನ್ನಾಗಿ ಮಾತಾಡಿದ್ರು ಸಾರ್" ಎ...

ಈ ಸಮ್ಮೇಳನದ ವಿಶೇಷವೆಂದರೆ ಬರಗೂ... ಸಿದ್ದಲಿಂಗಯ್ಯನವರೇ ಮೊದಲು ಅಧ್ಯಕ್ಷ... ಬರಗೂರು ಅಧ್ಯಕ್ಷರಾಗಿದ್ದು "ಗುರುವಿಗೆ ... ಬದಲು ಬಾವುಟವನ್ನು ಹಸ್ತಾಂತರಿಸುತ್ತಿದ್ದೇ... ಸಿದ್ದಲಿಂಗಯ್ಯ ಹೇಳಿದಾಗ ತಿರುಮಂತ್ರ 81... ಸಮ್ಮೇಳನಾಧ್ಯಕ್ಷರಾದಾಗಲೇ ಹೇಳಿಯಾಗಿದೆ ... ಇತಿಹಾಸ ಬಲ್ಲವರ ಪಿಸುಮಾತಾಗಿತ್ತು.

ರಾಯಚೂರಲ್ಲಿನ ಸಾಹಿತ್ಯ ಸಮ್ಮೇಳನದ ಮ... ಉದ್ದ ಬರೋಬ್ಬರಿ ಆರು ಕಿಲೋಮೀಟರಿಗೂ ... ಇಲ್ಲಿ ಇನ್ನೊಂದು ದಾಖಲೆ ಎಂದರೆ ಮೂರು... ಅಡಿ ಉದ್ದದ ಬಾವುಟವನ್ನು ಮೆರವಣಿಗೆ ... ಹಿಡಿದು ಬಂದ ಅಭಿಮಾನಿಗಳ ಸಾಧ... ಘೋಷಣೆಗಳು ಮುಗಿಲು ಮುಟ್ಟಿತ್ತು.


ಸಾಹಿತ್ಯ ಸಮ್ಮೇಳನದಲ್ಲಿ ನಡೆದಂತಹ ಸ... ಗೋಷ್ಠಿಗಳು ಅರ್ಥಪೂರ್ಣವಾಗಿದ್ದವು. ಒ... ಮುಖ್ಯವೇದಿಕೆಯ ಗೋಷ್ಠಿಗಿಂತಲೂ ಇವ... ಮೂಡಿಬಂದವು. ನಾಡಿನ ಪತ್ರಿಕೆಗಳು ಅತ್ಯುತ್ತಾ... ಇಡೀ ಸಮ್ಮೇಳನದ ವರದಿಯನ್ನು ನೀಡಿದ... ಸಾಹಿತ್ಯ ಸಮ್ಮೇಳನದಿಂದ ಹೊರಬಂದು ನ... ಮಾಧ್ಯಮದ ನಿರ್ಲಕ್ಷ್ಯ ಕೇಳಿ ತುಂಬ ಬೇಸರ... ಕನಿಷ್ಠ ಜನಾರ್ದನ ರೆಡ್ಡಿ ಮಗಳ ಮದುವೆ... ಸಮಯದ ಅರ್ಧವನ್ನಾದರೂ ಸಾಹಿತ್ಯ ಸಮ್ಮೇಳ... ಮೀಸಲಿಡಬಹುದಿತ್ತು. ಕನ್ನಡದ ಚಾನಲ್‌ಗಳ... ಭಾಷಿಕರ ಚಾನಲ್‌ಗಳು ನಮ್ಮ ಸಾಹಿತ್ಯ ಸ... ಸುದ್ದಿಗಳನ್ನು ಬಿತ್ತರಿಸಲು ಸಾಧ್ಯವೇ? ದೂರದ ರಾ... ಬರಲಾಗದ ಸಾಹಿತ್ಯಾಸಕ್ತರಿಗೆ ಮತ್ತು ಕನ್ನಡಿ... ಚಾನಲ್‌ಗಳು ಮಾಡಿರುವ ಕೃತ್ಯ ಅಕ್ಷಮ್ಯವಾದ... ಕನ್ನಡ ದ್ರೋಹವೆಂದು ಅನಿವಾರ್ಯವಾಗಿ ಹೇಳ...

ಎಲ್ಲ ವಿಧದಿಂದಲೂ ಯಶಸ್ವಿಗೊಂಡು... ನಿರ್ಮಿಸಿದ ರಾಯಚೂರು ಸಾಹಿತ್ಯ ಸಮ್ಮೇಳನದ ... ನಡುವೆ ಈ ಟಿವಿಗಳನ್ನ ನಮ್ಮ ಜನ ಮರೆತೇ ಬಿ... ಸುದೈವದಿಂದ ಇದು ಯಾರ ಗಮನಕ್ಕೂ ಬಂದಿ... ಏಕೆಂದರೆ ಈಚೆಗೆ ನಮ್ಮ ಚಾನಲ್‌ಗಳ... ಮಾಡಿಕೊಂಡು ಸುಮ್ಮನೆ ಕೂರುವಂತ ರೇಜಿಗೆ ...

■ ವರ...

ರೋಣ: ರಂಗೇರಿದ ರಾಜಕಾರಣದಲ್ಲಿ 'ಪಾಟೀಲ'ರ 'ಬಂಡಿ

ಗದಗ ಜಿಲ್ಲೆಯ ರೋಣ ತಾಲೂಕಿನ ರಾಜಕೀಯ ಈಗ ರಂಗೇರತೊಡಗಿದೆ. ರೋಣದಲ್ಲಿ ಗೌಡರ ದರ್ಬಾರು ಮುಂದುವರೆದಿದೆ. ಇತ್ತ ಗೌಡರ ಮನೆತನದ ಜಿ.ಎಸ್.ಪಾಟೀಲ ಮೂರನೇ ಬಾರಿಗೆ ಶಾಸಕರಾಗಿ ಮಿಂಚುತ್ತಿದ್ದರೆ, ಅತ್ತ ಅವರ ಎದುರಾಳಿ ಮಾಜಿ ಮಂತ್ರಿ ಕಳಕಪ್ಪ ಬಂಡಿ ಮೂರನೇ ಬಾರಿಗೆ ವಿಧಾನಸಭಾ ಮೆಟ್ಟಲು ಏರುವದು ಹೇಗೆಂಬ ಚಿಂತೆಯಲ್ಲಿ ತಮ್ಮದೇ ರಾಜಕೀಯ ಲೆಕ್ಕಾಚಾರ ಹೆಣೆಯುತ್ತಿದ್ದಾರೆ. ಇನ್ನು ಎಚ್.ಎಸ್. ಸೊಂಪೂರ ಮತ್ತು ನಿಂಗನಗೌಡ ಮಾಲಿ ಪಾಟೀಲ ಜೆ.ಡಿ.ಎಸ್‌ನ ಟಿಕೇಟಿಗೆ ಲಾಬಿ ನಡೆಸುತ್ತಿದ್ದಾರೆ. 1999 ಮತ್ತು 2008ರ ಚುನಾವಣೆಯಲ್ಲಿ ಸ್ಪರ್ಧಿಸಿ ಸೋತಿರುವ ಅಮರೇಶ್ವರ ಬೂದಿಹಾಳ, ಕೇಜಿವಾಲರ ಆಮ್ ಆದ್ಮಿ ಪಕ್ಷವನ್ನು ಸಂಘಟಿಸಲು ಹೆಣಗಾಡುತ್ತಿದ್ದಾರೆ.




ಜಿ.ಎಸ್. ಪಾಟೀಲ

ರೋಣದ ದೊಡ್ಡಮೇಟಿ ಕುಟುಂಬ ತನ್ನ ರಾಜಕೀಯ ಚಾಣಕ್ಯ ನೀತಿಯಿಂದ ಜನಪರ ಕೆಲಸಗಳ ಮೂಲಕ ಗಮನ ಸೆಳೆದಿತ್ತು. ಅಂದಾನಪ್ಪ ದೊಡ್ಡಮೇಟಿಯವರು ಸ್ವಾತಂತ್ರ್ಯ ಹೋರಾಟಗಾರರಾಗಿ, ಕರ್ನಾಟಕ ಏಕೀಕರಣದ ನೇತಾರರಾಗಿ ಹಾಗೂ ಮಾಜಿಮಂತ್ರಿಯಾಗಿ ಮೆರೆದಂತವರು. ಅವರು 20 ವರ್ಷಗಳ ರಾಜಕೀಯ ಬದುಕಿನಲ್ಲಿ ಮೂರು ಬಾರಿ ಶಾಸಕರಾಗಿದ್ದರು. 1978ರಲ್ಲಿ ದೊಡ್ಡಮೇಟಿಯವರ ಕಾಲಾಧೀನನಂತರ ಕಾಂಗ್ರೆಸ್ ಮುಖಂಡರಾದ ಈರಣ್ಣ ಮತ್ತಿಕಟ್ಟಿಯವರು 1978 ರಲ್ಲಿ ಶಾಸಕರಾಗಿ ಒಂದು ಅವಧಿ ಮುಗಿಸಿ, ಕೆಲಕಾರಣಗಳಿಂದ ರೋಣದಿಂದ ಕಾಲ್ಕಿತ್ತರು. 1983ರಲ್ಲಿ ಅನ್ನದಾನಪ್ಪ ದೊಡ್ಡಮೇಟಿಯವರ ಮಗನಾದ ಜ್ಞಾನದೇವ ದೊಡ್ಡಮೇಟಿಯವರು ಶಾಸಕರಾಗಿ ಆಯ್ಕೆಯಾದರು. 1985ರಲ್ಲೂ ಇದೇ ಜ್ಞಾನದೇವರು ರೋಣದ ಗೌಡ್ರ ಮನೆತನದ ಆರ್.ಎಚ್ ಪಾಟೀಲರನ್ನು ಸೋಲಿಸಿ ಎರಡನೇ ಬಾರಿಗೆ ಶಾಸಕರಾದರು. ಆದರೆ 1989ರಲ್ಲಿ ರಾಜ್ಯಾದ್ಯಂತ ಬೀಸಿದ ಕಾಂಗ್ರೆಸ್ ಅಲೆಗೆ ಈ ಜ್ಞಾನದೇವ ದೊಡ್ಡಮೇಟಿಯವರು ಜಿ.ಎಸ್.ಪಾಟೀಲರ ವಿರುದ್ಧ ಸೋಲುಂಡರು. ಇಲ್ಲಿ ಗಮನಿಸುವ ಅಂಶವೇನೆಂದರೆ, ದೊಡ್ಡಮೇಟಿ ಮತ್ತು ರೋಣದ ಗೌಡರ ಕುಟುಂಬ ಲಿಂಗಾಯತ ರೆಡ್ಡಿ ಪಂಗಡಕ್ಕೆ ಸೇರಿದವರು, ಮತ್ತಿಕಟ್ಟಿ ಮಾತ್ರ ಲಿಂಗಾಯತ ಬಣಜಿಗ ಸಮಾಜಕ್ಕೆ ಸೇರಿದಾತ.

ಉದಯಿಸಿದ ಪರ್ಯಾಯ ಶಕ್ತಿ

1994ರಲ್ಲಿ ಈ ತಾಲೂಕಿನಲ್ಲಿ 40 ಸಾವಿರಕ್ಕೂ ಹೆಚ್ಚಿನ ಜನಸಂಖ್ಯೆ ಹೊಂದಿದ್ದ ಲಿಂಗಾಯತ ಪಂಚಮಸಾಲಿ ಸಮಾಜ ಸಂಘಟನೆಯ ಹಾದಿ ತುಳಿಯುವ ಮೂಲಕ ರಾಜಕೀಯ ಪ್ರಜ್ಞೆ ಬೆಳೆಸಿಕೊಂಡಿತು. 1994ರಲ್ಲಿ ಈ ಸಮಾಜದ ಸೂಡಿಯ ಶ್ರೀಶೈಲಪ್ಪ ಬಿದರೂರರವರು ಜನತಾದಳ ಪಕ್ಷದ ಸಂಘಟನೆಯ ನೊಗ ಹೊತ್ತುಕೊಂಡರು. ಇವರಿಗೆ ಸಾಥ್ ನೀಡಿದ್ದು ಅಮರೇಶ್ವರ ಬೂದಿಹಾಳ, ಚೆನ್ನೂ ಪಾಟೀಲ, ಕಳಪ್ಪ ಬಂಡಿ ಮತ್ತು ಇನ್ನಿತರ ನಾಯಕರು. 1994ರಲ್ಲಿ ಚುನಾವಣೆ ಎದುರಾದಾಗ ರೋಣದ ಗೌಡರ ವಿರುದ್ಧ ಪರ್ಯಾಯ ರಾಜಕೀಯ ಶಕ್ತಿಯೊಂದು ಉದಯಿಸಿತು. ಅದು ಶ್ರೀಶೈಲಪ್ಪ ಬಿದರೂರ ನೇತೃತ್ವದಲ್ಲಿ ಎಂಬುದು ವಿಶೇಷ. ಆ ಚುನಾವಣೆಯಲ್ಲಿ ಬಿದರೂರರವರು 10 ಸಾವಿರ ಮತಗಳ ಅಂತರದಿಂದ ಅಂದಿನ ಶಾಸಕ ಜಿ.ಎಸ್.ಪಾಟೀಲರಿಗೆ ಸೋಲಿನ ರುಚಿ ಉಣ್ಣಿಸಿದ್ದರು. ಮುಂದೆ 1999ರಲ್ಲಿ ಇದೇ ಬಿದರೂರು ಜೆಡಿಎಸ್‌ನಿಂದ ಸ್ಪರ್ಧಿಸಿದರೆ ಗಾಣಿಗ ಸಮಾಜದ ಅಶೋಕ ನವಲಗುಂದ ಜೆಡಿಯು ಪಕ್ಷದಿಂದ ಸ್ಪರ್ಧಿಸಿದ್ದರು. ಅಮರೇಶ್ವರ ಬೂದಿಹಾಳ ಬಿಜೆಪಿ ಸೇರಿ ಆ ಪಕ್ಷ ಬೆಳೆಸಿದನಾದರೂ ಕೇಸರಿ ಪಡೆ ಬೂದಿಹಾಳನಿಗೆ ಕೈಕೊಟ್ಟಿತ್ತು. ಅಂದು ಜೆಡಿಯು ಮತ್ತು ಬಿಜೆಪಿ ಚುನಾವಣೆ ಹೊಂದಾಣಿಕೆ ಮಾಡಿಕೊಂಡಿದ್ದವು. ಮತ ವಿಭಜನೆಯ ಲಾಭದಿಂದ ಮತ್ತೆ ಜಿ.ಎಸ್. ಪಾಟೀಲರು 2ನೇ ಬಾರಿ ಶಾಸಕರಾದರು. ಆ ಸಂದರ್ಭದಲ್ಲಿ ಜಿ.ಎಸ್.ಪಾಟೀಲ್ ರೋಣ ಶಾಸಕನಾದರೆ ಅವರ ಸಹೋದರ ಆರ್.ಎಸ್.ಪಾಟೀಲ ಬಾಗಲಕೋಟ ಸಂಸದನಾ ಗಿದ್ದ ಇನ್ನೊಬ್ಬ ಸಹೋದರ ಬಿ.ಎಸ್.ಪಾಟೀಲರು ಎಸ್.ಎಂ.ಕೃಷ್ಣ ಸರಕಾರದಲ್ಲಿ ರಾಜ್ಯದ ಮುಖ್ಯಕಾರ್ಯದರ್ಶಿಯಾಗಿದ್ದ, ಮತ್ತೊಬ್ಬ ಸಹೋದರ ಐ.ಎಸ್.ಪಾಟೀಲ ಕೆ.ಸಿ.ಸಿ ಬ್ಯಾಂಕಿನ ಅಧ್ಯಕ್ಷನಾಗಿದ್ದ. ಒಟ್ಟಿನಲ್ಲಿ ಉತ್ತರ ಕರ್ನಾಟಕದಲ್ಲಿ ಈ ರೋಣದ ಗೌಢರ ದರ್ಬಾರು ಭರ್ಜರಿಯಾಗಿ ಸದ್ದು ಮಾಡತೊಡಗಿತ್ತು. ಹೀಗಾಗಿ ರೋಣದಲ್ಲಿ ಗೌಡರ ವಿರುದ್ಧ ಸೊಲ್ಲೆತ್ತುವವರೇ ಇಲ್ಲದಂತಾಯಿತು.

ಆದರೆ 2004ರಲ್ಲಿ ಉತ್ತರ ಕರ್ನಾಟಕದಾದ್ಯಂತ ಕೇಸರಿ ಗಾಳಿ ಬೀಸಿದ ಸಂದರ್ಭದಲ್ಲಿ ಕಳಕಪ್ಪ ಬಂಡಿ ತನ್ನ ಗಾಡ್‌ಫಾದರ್ ಜಗದೀಶ್ ಶೆಟ್ಟರ್ ಮೂಲಕ ಬಿಜೆಪಿ ಟಿಕೆಟ್ ಗಿಟ್ಟಿಸಿಕೊಂಡಿದ್ದ. ಆ ಸಲ ಮಾಜಿ ಶಾಸಕ ಶ್ರೀಶೈಲಪ್ಪ ಬಿದರೂರಗೆ ಜೆಡಿಎಸ್ ಟಿಕೆಟ್ ಸಿಗುವ ಸಂಭವವಿತ್ತು. ಇಲ್ಲಿ ಗಮನಿಸುವ ಅಂಶವೇನೆಂದರೆ ಕಳಕಪ್ಪ ಬಂಡಿ ಮತ್ತು ಶ್ರೀಶೈಲಪ್ಪ ಬಿದರೂರ ಇಬ್ಬರೂ ಪಂಚಮಸಾಲಿ ಜನಾಂಗಕ್ಕೆ ಸೇರಿದವರು. ಹೀಗಾಗಿ ಬಿದರೂರು ನಮ್ಮಿಬ್ಬರ ನಡುವೆ ಮತ ವಿಭಜನೆಯಾಗಿ ಮತ್ತೆಲ್ಲಿ ಜಿ.ಎಸ್.ಪಾಟೀಲ್ ಗೆಲ್ಲುತ್ತಾನೋ ಎಂಬ ಆತಂಕದಿಂದ ಬಿಜೆಪಿ ಸೇರಿದ್ದ. ಹೀಗಾಗಿ ಕಳಕಪ್ಪ ಬಂಡಿ ಜಿ.ಎಸ್.ಪಾಟೀಲರ ವಿರುದ್ಧ 10 ಸಾವಿರ ಮತಗಳ ಅಂತರದಿಂದ ಗೆಲುವಿನ ನಗೆಬೀರಿದ್ದ. 2008ರಲ್ಲಿಯೂ ಕಳಕಪ್ಪ ಬಂಡಿ ಮತ್ತು ಜಿ.ಎಸ್.ಪಾಟೀಲ ಎದುರುಬದುರಾದಾಗ ಕಳಕಪ್ಪ ಬಂಡಿ 2ನೇ ಬಾರಿಗೆ ಜಿ.ಎಸ್.ಪಾಟೀಲರನ್ನು ಕೇವಲ 1700 ಮತಗಳಿಂದ ಸೋಲಿಸಿದ್ದ. ಅಲ್ಲದೇ 2012ರಲ್ಲಿ ಜಗದೀಶ್ ಶೆಟ್ಟರ್ ಮುಖ್ಯಮಂತ್ರಿಯಾದಾಗ ಅವರ ಆಪ್ತನಾದ ಕಳಕಪ್ಪ ಬಂಡಿಗೆ ಮಂತ್ರಿ ಭಾಗ್ಯ ಒಲಿದುಬಂದಿತ್ತು. ಆದರೂ ಆ ಮಂತ್ರಿಗಿರಿಗೆ ಕಳಕಪ್ಪ ಬಂಡಿಯನ್ನು 2013ರ ಚುನಾವಣಾ ಸೋಲಿನಿಂದ ಬಚಾವು ಮಾಡಲಾಗಲಿಲ್ಲ.



ಕಳಕಪ್ಪ ಬಂಡಿ

ಅಸಲಿ ವಾರ್‌ಗೆ ತಯಾರು

ಈಗ ರೋಣದಲ್ಲಿ ಅಸಲಿ ರಾಜಕೀಯ ಕದನ ಏರ್ಪಟ್ಟಿದೆ. ಜಿ.ಎಸ್.ಪಾಟೀಲರು ಮೂರು ಬಾರಿ ಶಾಸಕರಾದರೂ ಅವರಿಗೆ ಮಂತ್ರಿಗಿರಿ ತಪ್ಪುವುದಕ್ಕೆ ಜಿಲ್ಲಾ ಉಸ್ತುವಾರಿ ಮಂತ್ರಿ ಎಚ್.ಕೆ.ಪಾಟೀಲರೆ ಕಾರಣ ಎನ್ನುವ ಆರೋಪ ಕೇಳಿಬರುತ್ತಿದೆ. ಗದಗ ಜಿಲ್ಲೆಯಲ್ಲಿ ತಾವೊಬ್ಬರೇ ರಾಜಕೀಯ ಮೇಲ್ಪಂಕ್ತಿಯಾಗಿ ಮೆರೆಯಬೇಕೆನ್ನುವ ಹಪಾಹಪಿ ಹೆಚ್.ಕೆ. ಪಾಟೀಲರಿಗೆ ಇದೆ, ಹಾಗಾಗಿಯೇ ಜಿ.ಎಸ್.ಪಾಟೀಲರು ಮಂತ್ರಿ ಭಾಗ್ಯದಿಂದ ವಂಚಿತರಾಗುತ್ತಿದ್ದಾರೆ ಎನ್ನುವುದು ಆ ಆರೋಪದ ಒಟ್ಟಾರೆ ಸಾರಾಂಶ. 2018ರ ಚುನಾವಣೆಯಲ್ಲಿ ತಮ್ಮ ಪುತ್ರ ... ಪಾಟೀಲ್‌ರನ್ನು ಕಾಂಗ್ರೆಸ್‌ನಿಂದ ಅಖಾಡಕ್ಕೆ ಇಳಿಸ... ಸುದ್ದಿ ಹಬ್ಬಿದೆ. ಇತ್ತ ಜಿಎಸ್ ಪಾಟೀಲರ ಹ... ಎದುರಾಳಿ ಕಳಕಪ್ಪ ಬಂಡಿ ತನ್ನ ಕೆಲ ಸ್ವಯಂಕೃ... ಗಳಿಂದ ಸೋಲು ಅನುಭವಿಸಿದ್ದ ಅವುಗಳನ್ನು ತಿ... ಮಾತ್ರ ಬಂಡಿ ಮುಂದಕ್ಕೆ ಸಾಗಲಿದೆ.

ಕಾಂಗ್ರೆಸ್ ಮತ್ತು ಬಿಜೆಪಿಗೆ ಫೈಟ್ ... ಜೆಡಿಎಸ್‌ನಿಂದ ಎಡಪಂಥೀಯ ಹೋರಾಟ... ನಂತರ ಕನ್ನಡಪರ ಹೋರಾಟಗಾರನಾಗಿ ಗ... ಗಜೇಂದ್ರಗಡದ ಎಚ್.ಎಸ್.ಸೋ... ಸ್ಪರ್ಧಿಸಲು ಟೊಂಕ ಕಟ್ಟಿದ್ದಾರೆ. ಈ... ಪರಮಾಪ್ತ ಮಾಜಿಮಂತ್ರಿ ಬಂಡೆಪ್ಪ ಕ... ಮೂಲಕ ಜೆಡಿಎಸ್ ಟಿಕೆಟ್‌ಗಾ... ಪ್ರಯತ್ನ ನಡೆಸಿದ್ದಾನೆ. ಆದರೆ ಕ... ವರ್ಷಗಳಿಂದ ಜೆಡಿಎಸ್‌ನಲ್ಲಿ ಸಕ್ರಿಯ... ನಿಂಗನಗೌಡ ಪಾಟೀಲ್ ಕಣಗಿನಹಾ... ಜೆಡಿಎಸ್ ಟಿಕೆಟಿಗಾಗಿ ಯತ್ನಿಸುತ್ತಿ... ಸೋಂಪೂರಗೆ ದುಬಾರಿಯಾಗಬ... ಯಾಕೆಂದರೆ ಇವರು ಸಹಕಾರ ರಂಗ... ಸಿದ್ದನಗೌಡ ಪಾಟೀಲರ ಮೊಮ್ಮಗ. ಬೆಂ... ಬಿ.ಬಿ.ಎಂ.ಪಿ.ಯಲ್ಲಿ ಗುತ್ತಿಗೆದಾರರಾಗಿರುವ ಈತ 2... ಜೆಡಿಎಸ್ ಟಿಕೆಟಿಗಾಗಿ ಪ್ರಯತ್ನಿಸಿ ವಿಫಲರಾಗಿದ್ದ... ಗಮನಾರ್ಹ ಸಂಗತಿಯೆಂದರೆ ಜೆಡಿಎಸ್ ... ಪೈಪೋಟಿ ನಡೆಸುತ್ತಿರುವ ಎಚ್.ಎಸ್.ಸೋಂಪೂ... ನಿಂಗನಗೌಡ ಪಾಟೀಲ ಇಬ್ಬರೂ ರೋಣದ... ಸಾವಿರಕ್ಕೂ ಅಧಿಕ ಜನಸಂಖ್ಯೆಯಿರುವ ಕುರುಬ ಸ... ಸೇರಿದವರು. ರೋಣದಲ್ಲಿ ಇದುವರೆಗೆ ಕುರುಬ ಸ... ಸೇರಿದ ಯಾರೂ ಶಾಸಕರಾಗಿಲ್ಲ. ಅತ್ತ ರೋಣ ತಾ... ಬಿಜೆಪಿಗೆ ಬಲತುಂಬಿದ್ದೇ ಅಮರೇಶ್ವರ ಬೂದಿಹಾ... ಆ ಪಕ್ಷ ಅವರಿಗೆ ಟಿಕೇಟ್ ನೀಡದೆ ವಂಚಿಸಿತು. ... ಆಮ್ ಆದ್ಮಿ ಪಕ್ಷದ ಜಿಲ್ಲಾಧ್ಯಕ್ಷರಾಗಿ ಮುಂಬರುವ... ರ ಚುನಾವಣೆಯಲ್ಲಿ ಆಪ್‌ನಿಂದ ಸ್ಪರ್ಧಿಸಲು ಸಜ್ಜ... ಚುನಾವಣೆಯ ವೇಳೆಗೆ ಇನ್ನೂ ಏನೇನು ಅ... ಘಟಿಸುತ್ತವೋ ಗೊತ್ತಿಲ್ಲ...

■ ಸ.ಶರಣಪ್ಪ ಪಾಟೀಲ ಕರ...

ಯೋಗೇಶ್ ಮಾಸ್ಟರ್

ಪುರಾಣದ ಹೂರಣ

ಶರಣರ ಬಾಳನು ಮರಣದಿ ಕಾಣು

ಮರಣದ ಜಯ

ಜಯಲಲಿತಾ ಸತ್ತಿದ್ದಾರೆಂದು ಟಿವಿ ಚಾನೆಲ್‌ಗಳು ...ಸುವಾಗ, ಅಪೋಲೋ ಹಾಸ್ಪಿಟಲ್‌ನಿಂದ ಇದು ತಪ್ಪು ...ತಿ ಎಂಬ ಸಂದೇಶವೂ ರವಾನೆಯಾಗುತ್ತಿತ್ತು. ಅವರ ...ನ ನಂತರದ ಸಾಮಾಜಿಕ ಮತ್ತು ಸಮೂಹದ ...ಸ್ಥಿತಿಗಳನ್ನು ಎದುರಿಸಲು ಸರಿಯಾದ ಸಿದ್ಧತೆಯನ್ನು ...ಡಿಕೊಳ್ಳದೇ ವ್ಯವಸ್ಥೆಯು ಎಡವಟ್ಟು ಮಾಡಿಕೊಳ್ಳಲು ...ವಿಲ್ಲದೇ ಇದ್ದಂತಹ ಹಿಂಜರಿಕೆಯೂ ಇದ್ದಿರಬಹುದು. ...ನೇ ಆಗಲಿ, ಹಾಲು ಕುಡಿದ ಮಕ್ಕಳೇ ಬದುಕಲ್ಲ, ...ಡ್ಯಾಂ ನೀರ್ ಕುಡಿದವರು ಬದುಕುತ್ತಾರಾ ಎಂದು ...ಯುವವರನ್ನು ಲೇವಡಿ ಮಾಡುವವರು, ಒಂದು ಹೆಣ್ಣು ...ದಸರನ್ನು ಮಣಿಸಿ ಅಧಿಕಾರ ಹಿಡಿದು, ಸಾಮ್ರಾಜ್ಯವನ್ನು ... ಏಳುಬೀಳುಗಳನ್ನೆಲ್ಲಾ ಕಂಡು ಯಶಸ್ವಿ ರಾಜಕಾರಣಿ ...ಾಗಿಯೇ ನಿರ್ಗಮಿಸುವುದು ಈ ಪುರುಷಾಧಿಕ್ಯದ ...ಸ್ಥಿತಿಗಳ ನಡುವೆ ಅದೆಷ್ಟರ ಮಟ್ಟಿಗಿನ ಕಷ್ಟ ಎಂಬುದನ್ನೂ ...ಸಿಕೊಳ್ಳುವವರು, ಸಾವನ್ನು ಲೇವಡಿ ಮಾಡುವಂತಹ ...ತ್ತು ಸಾವನ್ನು ಸಂಭ್ರಮಿಸುವಂತಹ ಕೀಳುಮಟ್ಟಕ್ಕೆ ...ಯಬಾರದು ಎಂದು ಕೋರಿಕೊಳ್ಳುತ್ತಿರುವವರು; ಹಲವು ...ಯ ಸಂದೇಶಗಳು ಫೇಸ್‌ಬುಕ್‌ನಲ್ಲಿ ಹರಿದಾಡುತ್ತಿದ್ದವು.

ವ್ಯಕ್ತಿ ಎಷ್ಟೇ ಸಕಾರಾತ್ಮಕವಾಗಿ ಕೆಲಸಗಳನ್ನು ಮಾಡಿದ್ದರೂ, ...ರಾತ್ಮಕವಾದವುಗಳನ್ನು ಮಾಡಿದ್ದರೂ, ಎಷ್ಟೇ ...ರುಗಳನ್ನು ಮಣಿಸಿದ್ದರೂ, ಎಷ್ಟೇ ಕೇಸುಗಳನ್ನು ಗೆದ್ದಿದ್ದರೂ ...ವೊಮ್ಮೆ ಮರಳುವುದೋ, ವಿದಾಯ ಹೇಳುವುದೋ, ...ೀಗುವುದೋ ಎಂತದ್ದೋ ಒಂದು ಮಾಡಲೇಬೇಕು. ...ದ್ದರಿಂದಲೇ ಶರಣರು 'ಶರಣರ ಬಾಳನು ಮರಣದಲಿ ...ಣು' ಎಂದರು. ತಾವು ಯಾವುದಕ್ಕೆ ಯಾವ ಆಶಯಕ್ಕೆ ...ಾವ ಉದ್ದೇಶಕ್ಕೆ ಮರಣವು ತಾನಾಗೇ ಎದುರಾದರೂ, ...ಜ ಧೈರ್ಯದಿಂದ ಅದರ ಬಗ್ಗೆ ನಕಾರಾತ್ಮಕ ...ೋರಣೆಯನ್ನು ಹೊಂದದೇ ಅದನ್ನು ಅಪ್ಪುವುದು. ತಮ್ಮ ...ಚರರ ಸಾವಿಗೆ ಕುಗ್ಗಿ ದುಃಖದಿಂದ ಧೃತಿಗೆಡದೇ, ತಾವೂ ...ತ್ತು ಹೋಗುತ್ತೇವೆಂದು ಭಯಪಡದೇ ಸಾವೊಂದು ...ರ್ಗಧರ್ಮದ ಭಾಗವೆಂದು ಸ್ವೀಕರಿಸುವ ಧೋರಣೆಯೇ ...ಯ ಸಂದರ್ಭ ಬಂದಾಗ ಧೈರ್ಯವಾಗಿ ಸ್ವೀಕರಿಸುವ ...ನಸ್ಥಿತಿಯೇ ಶರಣರದ್ದು ಅಥವಾ ಯಾವುದೇ ಆಧ್ಯಾತ್ಮಿಕ ...ಧಕರದ್ದು. ಕಲ್ಯಾಣಕ್ರಾಂತಿಯ ಸಮಯದಲ್ಲಿ ಕಣ್ಣುಗಳನ್ನು ...ಿಸಿಕೊಂಡು, ಆನೆಗಳ ಕಾಲಿಗೆ ಎಳೆಸಿಕೊಳ್ಳುವಂತ ...ದರ್ಭವು ಎದುರಾಗಿ, ಶಿಕ್ಷೆಗೆ ಒಳಗಾಗಿ ಸಾಯುವಂತಹ ... ಬಂದಾಗಲೂ ಅವರು ಹೆದರಲಿಲ್ಲ, ಶಿಕ್ಷೆ ಕೊಡುವವರ ...ನೋಭಾವವೇ ಹೊರತು, ಈ ಸಾವು ನಮಗೆ ಸಹಜವೇ ...ನ್ನುವಂತಿದ್ದರು. ಇದೇ ಮನಸ್ಥಿತಿ ಸ್ವಾತಂತ್ರ್ಯ ...ಗ್ರಾಮದಲ್ಲಿಯೂ ಅನೇಕ ಕ್ರಾಂತಿಕಾರರಲ್ಲಿ ಕಂಡಿತ್ತು.

ಪೋನಾಲ್ ಪೋಗೊಟ್ಟುಂ ಪೋಡಾ, ಇಂದ ...ಮಿಯಿಲ್ ನೆಳಿಯ ವಾಳ್ದವನ್ ಯಾರಡಾ? ಎಂಬ ...ರಾಗ್ಯದ ಮನಸ್ಥಿತಿಯೂ ಕೂಡ ಸಾವಿನ ಭಯವನ್ನು ...ಗಣಿಸಿ ಒಂದು ಕಿರುನಗೆಯೊಡನೆ ಒಪ್ಪಿಬಿಡುವಂತಾಗಿ ...ುತ್ತದೆ. ಬೇರೆಯವರು ಸತ್ತಾಗ ಈ ಬಗೆಯ ವೈರಾಗ್ಯದ ...ಸಿರು, ತಮಗೇ ಸಾವು ಬಂದಾಗ ನೀಡುವಂತಹ ...ಕ್ರಿಯೆಗಳು ಬೇರೆಯಾಗಿರುವುದು; ಅದು ಸಾಮಾನ್ಯ. ...ರೆ ಅಸಮಾನ್ಯ ಮನಸ್ಥಿತಿಯ ಶಕ್ತಿಯು ಬೇರೆಯೇ ...ುತ್ತದೆ.

ಆತ್ಮಕ್ಕೆ ಶಾಂತಿ?

ಅಗಲಿದ ಆತ್ಮಕ್ಕೆ ಶಾಂತಿ ಸಿಗಲಿ, ಧೀಮಂತ ಚೇತನದ ...ಮನದಿಂದ ನಾಡಿಗೆ/ದೇಶಕ್ಕೆ/ವಿಶ್ವಕ್ಕೆ/ಅದ್ಯಾವುದೋ ಕ್ಷೇತ್ರಕ್ಕೆ ...ಬಲಾರದ ನಷ್ಟವಾಯಿತು. ಕುಟುಂಬ ವರ್ಗದವರಿಗೆ ...ಖ ಭರಿಸಲು ಶಕ್ತಿ ಕೊಡಲೆಂದು ಭಗವಂತನಲ್ಲಿ ...ರ್ಥಿಸುತ್ತೇವೆ; ಇತ್ಯಾದಿ ಸಂತಾಪ ಸಾಹಿತ್ಯಗಳು ...ತಚರ್ವಣವಾಗಿ ಕ್ಲೀಶೆಯಾಗಿವೆ.

ನಾವು ಪರಿಕಲ್ಪನೆಗಳ ಆಧಾರಗಳಲ್ಲೇ ನಮ್ಮ ಭಾವನೆ ...ತ್ತು ವಿಚಾರಗಳನ್ನು ದಾಟಿಸುತ್ತಾ ಬದುಕಿರುವುದು. ...ಟ್ಟು ಮಾಡಿ ತೋರಲಾಗದ ಅಥವಾ ಇದು ಅದೇ ...ಂದು ಎತ್ತಿ ಹಿಡಿಯಲಾಗದ ಎಲ್ಲಾ ಅಭೌತಿಕ ...ವಿಷಯಗಳನ್ನು ಸೂಚಿಸಲು ಪರಿಕಲ್ಪನೆಗಳು ಬೇಕು ...ತ್ತು ಅವಕ್ಕೆ ಹೆಸರು ಎಂದೂ ಇರಬೇಕು.


ಆತ್ಮವೆಂಬುವ ಪರಿಕಲ್ಪನೆಯನ್ನು ಗಣಿಸುವುದಾದರೆ ...ಅದಕ್ಕೆ ತೃಪ್ತಿ ಅತೃಪ್ತಿ ಎಂಬುದಿಲ್ಲ, ಶಾಂತಗೊಳ್ಳುವುದೋ ...ಅಥವಾ ಅಶಾಂತಿಯಿಂದಿರುವುದೋ ಆಗುವುದಿಲ್ಲ, ಅದಕ್ಕೆ ...ಒಳ್ಳೆಯದು ಕೆಟ್ಟದು ಎಂಬ ಯಾವ ಪರ್ಯಾಯಗಳಿಲ್ಲ, ಒಳ್ಳೆಯದು ಕೆಟ್ಟದು ಎಂಬ ಗುಣಗಳಿಲ್ಲ. ಆದರೂ ಆತ್ಮಕ್ಕೆ ಶಾಂತಿ ಕೋರುತ್ತೇವೆ. ಆತ್ಮಗಳ ಪ್ರೀತ್ಯರ್ಥವಾಗಿ ಆಚರಣೆಗಳನ್ನು ಮಾಡುತ್ತಾರೆ. ಪಾಪಾತ್ಮನೆಂದು ಖಂಡಿಸುತ್ತಾರೆ. ಪುಣ್ಯಾತ್ಮನೆಂದು ಹೊಗಳುತ್ತಾರೆ. ಮಹಾತ್ಮನೆಂದು ಉನ್ನತ ಸ್ಥಾನದಲ್ಲಿಟ್ಟು ಕಾಣುತ್ತಾರೆ.


ಇಲ್ಲಿ ಆತ್ಮದ ಪರಿಕಲ್ಪನೆಯನ್ನು ಉಪಯೋಗಿಸುವಾಗ ಕೊಂಚ ಎಚ್ಚರವನ್ನೂ ವಹಿಸಬೇಕಿದೆ. ಜೀವಚೈತನ್ಯದ ಸೆಲೆಯಾಗಿ ಆತ್ಮವೆಂದು ಪರಿಗಣಿಸುವುದು ಒಂದಾದರೆ, ತನ್ನತನ ಎಂಬ ಅರ್ಥದಲ್ಲಿ ಬಳಸುವ ಬಗೆ ಇನ್ನೊಂದು. ಆತ್ಮಕಥೆ, ಆತ್ಮರತಿ, ಆತ್ಮಹತ್ಯೆ, ಆತ್ಮಾಭಿಮಾನ, ಆತ್ಮಪ್ರಶಂಸೆ, ಆತ್ಮಗೌರವ ಇತ್ಯಾದಿಗಳಿಗೆ ಸಂಬಂಧಪಟ್ಟಂತೆ. ತನ್ನತನವನ್ನು ತಾನು ಉಪಚರಿಸಿಕೊಳ್ಳುವ ಅಥವಾ ನಡೆದುಕೊಳ್ಳುವ ರೀತಿ. ಹಾಗಾಗಿ ವ್ಯಕ್ತಿಯ-ತನಕ್ಕೆ ಅಂದರೆ ವ್ಯಕ್ತಿತ್ವಕ್ಕೇ ಆತ್ಮದ ಹೆಸರಿನಿಂದ ಗುಣವಾಚಕಗಳನ್ನು ಹಚ್ಚುವುದರಿಂದ, ಎರಡು ಪರಿಕಲ್ಪನೆಗಳ ಹೆಸರು ಆತ್ಮವೇ ಆಗಿರುವುದರಿಂದ, ಗಾಂಭೀರ್ಯದ ಆಳಕ್ಕಿಳಿದು ಯೋಚಿಸಲು ಕೊಂಚ ಗೊಂದಲವಾಗಬಹುದು. ಆದರೆ ಅವು ಪರಿಕಲ್ಪನೆಗಳ ಹೆಸರುಗಳೇ ಹೊರತು ನೇರ ಅಸ್ತಿತ್ವಗಳಲ್ಲ ಎಂಬ ಎಚ್ಚರಿಕೆಯಿದ್ದರೆ ಹೆಚ್ಚು ತಲೆಕೆಡಿಸಿಕೊಳ್ಳುವ ಅಗತ್ಯವಿಲ್ಲ.

ತನ್ನ ತಾನು

ಆತ್ಮಹತ್ಯೆ ತನ್ನನ್ನು ತಾನು ಕೊಂದುಕೊಳ್ಳುವುದಾದರೆ, ಆತ್ಮಕ್ಕೆ ಶಾಂತಿ ಕೋರುವುದು ಜೀವದ ಚೈತನ್ಯಕ್ಕೆ ಗೌರವ ಸಲ್ಲಿಸುವುದು. ಸಂತಾಪ ಸೂಚನೆಯ ಸಮಯಗಳಲ್ಲಿ ವ್ಯಕ್ತಿತ್ವವೂ, ಅತಿಭೌತಿಕ ವಿಷಯಗಳೆರಡೂ ಸೇರಿಬಿಡುವುದರಿಂದ ವಿಷಯದ ಗಾಂಭೀರ್ಯವು ಜಾಳಾಗಿಯೂ, ಬಳಸುವ ಪದಗಳು ಕ್ಲೀಶೆಯಾಗಿಯೂ ಕಾಣತೊಡಗಿದೆ. ಕೆಲವು ಬಾರಿ ಸನ್ನಿಗೊಳಗಾದಂತೆ, ಉನ್ಮತ್ತವಾಗುವಂತೆ ಅದೆಷ್ಟು ಗಾಢವಾಗುತ್ತಾ ಹೋಗುತ್ತದೆ ಎಂದರೆ, ಸತ್ತಿರುವವರನ್ನು ಉತ್ಪ್ರೇಕ್ಷಿಸುತ್ತಾ ಬದುಕಿರುವವರನ್ನೆಲ್ಲಾ ಉಪೇಕ್ಷಿಸತೊಡಗುತ್ತಾರೆ. ಹೀಗೆ ಈ ಮರಣಿಸಿದವರು ನಃ ಭೂತೋ ನಃ ಭವಿಷ್ಯತಿ; ಎಂದಾಗ ಒಪ್ಪಿಬಿಡೋಣ. ಪ್ರತಿಯೊಂದು ಜೀವಿಯೂ ಯೂನಿಕ್ ಮತ್ತು ಸಿಂಗಲ್ ಅಸ್ತಿತ್ವವೇ. ಆದರೆ ಇವರಿಲ್ಲದೇ ಈ ಕ್ಷೇತ್ರ ಬಡವಾಯಿತು ಎನ್ನುತ್ತಾ ಅದೇ ಕ್ಷೇತ್ರದಲ್ಲಿ ದುಡಿಯುತ್ತಿರುವವರನ್ನೆಲ್ಲಾ ಒಮ್ಮಿಂದೊಮ್ಮೆಲೇ ಅದೆಲ್ಲೋ ಪಕ್ಕಕ್ಕೆ ಎಸೆದುಬಿಡುತ್ತಾರೆ. ಅವರು ಇದ್ದಾರಲ್ಲಯ್ಯಾ ಅಂದರೆ, ಅವರು ಸತ್ತಾಗಲೂ ಇದೇ ರೀತಿ ಗೌರವಿಸುತ್ತೇವೆ ಬಿಡಿ ಎಂಬ ಒಂದು ಸಾಮೂಹಿಕ ಧೋರಣೆ. ವಯೋಸಹಜವಾಗಿ ಏನೂ ಮಾಡಲಾಗದೇ ಅನೇಕ ವರ್ಷಗಳಿಂದ ನಿಷ್ಕ್ರಿಯರಾಗಿದ್ದು, ಕೋಮಾಗೆ ಹೋಗಿ ತಾವೆಂಬ ಒಂದು ವ್ಯಕ್ತಿ ಇದ್ದೇವೆಂದೇ ತಿಳಿಯದೇ ಸತ್ತುಹೋದಂತಹ ಹಿರಿಯ ಜೀವಗಳಿಗೆಲ್ಲಾ ತುಂಬಲಾರದ ನಷ್ಟ, ನಾಡು ಬಡವಾಯಿತು ಎಂದೆಲ್ಲಾ ಹೇಳುವಾಗ ಸುಳ್ಳುಗಾರರು ಕಾಣಿಸಿಕೊಳ್ಳುತ್ತಾರೆ. ಆ ಹಿರಿಯರೋ ತಮ್ಮ ಶಕ್ತಸಮಯದಲ್ಲಿ ಮಾಡಲು ಸಾಧ್ಯವಾದ ಎಲ್ಲಾ ಸೇವೆಗಳನ್ನು ಮಾಡಿ ಸಾರ್ಥಕಜೀವನ ನಡೆಸಿರುತ್ತಾರೆ. ಅವರೀಗ ತೆರಳಲೇಬೇಕು.

ಮರಣಿಸಿದವರು ಬದುಕಿದ್ದ ರೀತಿಗೆ ಗೌರವ ಸಲ್ಲಿಸಲು ಶ್ರದ್ಧಾಂಜಲಿ ಸಭೆಗಳು ನಡೆಯುವವು. ಅವು ಅಗಲಿದವೆಂದು ಹೇಳಲಾಗುವ ಆತ್ಮಗಳಿಗಲ್ಲ ಎಂದು ಗೊತ್ತು. ಸಾವಿನ ಜೊತೆಗೇ ನಿಗೂಢವಾಗಿರುವ ವಿಷಯಗಳಿಂದಾಗಿ ಉಂಟಾಗುವ ಭಯದಿಂದಾಗಿಯೇ ಅನೇಕ ಆಚರಣೆಗಳು,





ಸಂಪ್ರದಾಯಗಳು ರೂಢಿಯಲ್ಲಿ ಬಂದಿರುವವು.

ಹಾಗೆಯೇ ಸಾವಿನ ಬಗೆಗಿನ ಅವರವರ ಅಭಿಪ್ರಾಯಗಳು ಅವರನ್ನು ಹಾಗೆ ಮಾತಾಡಿಸಬಹುದು. ಅವನ್ನು ಒಪ್ಪುತ್ತೇವೋ ಬಿಡುತ್ತೇವೋ, ಕೇಳಲೇಬೇಕು. ಸಾರ್ವತ್ರಿಕವಾಗಿ ಎಲ್ಲರೂ ಒಮ್ಮತದ ಅಭಿಪ್ರಾಯವನ್ನು ಹೊಂದಬೇಕೆಂದು ನಿರೀಕ್ಷಿಸಲು ಹೇಗೆ ಸಾಧ್ಯ?

ಅಳಿದವರೂ ಆಳುವರು

ಸಾವು ಕೆಲವರಿಗೆ ಸ್ವಾಭಾವಿಕ ನೈಸರ್ಗಿಕ ನಿಯಮವಾದರೆ, ಮತ್ತೆ ಕೆಲವರಿಗೆ ಧುತ್ತೆಂದು ಮೇಲೆರಗಿದ ಶತ್ರು, ಮತ್ತೆ ಕೆಲವೊಮ್ಮೆ ಯಾಚಿತವಾಗಿಯೋ, ಅಯಾಚಿತವಾಗಿಯೋ ಬಂದಂತಹ ಶಿಕ್ಷೆ.

ಅದೇನೇ ಇರಲಿ, ಹೇಗೇ ಬದುಕಿರಲಿ ಸಂಧಿಸಿಯೇ ತೀರುವ, ಸಾವಿಗೇಕೆ ಸಂತಾಪ ಎಂದು ಕೇಳಿದರೆ ನಾನು ಕಠೋರವಾಗಿಯೋ, ಹೃದಯಹೀನನಾಗಿಯೋ ಕಾಣುತ್ತೇನೆ.

ಸಂತಾಪಗಳಲ್ಲಿ ಸಾವೆಂಬುದು ಅನಪೇಕ್ಷಿತ ಎಂಬುದು ತಿಳಿಯುತ್ತದೆ. ನೈಸರ್ಗಿಕ ನಿಯಮವನ್ನು ನಿರಾಕರಿಸುವ ಧೋರಣೆ ಕಾಣುತ್ತದೆ. ಸತ್ತವರು ಬಲಿಪಶು ಎಂದು ಕಾಣುವಂತೆ ಮಾಡುತ್ತಾರೆ. ಅದೇನೇ ಆದರೂ ಮೃತ ವ್ಯಕ್ತಿಗಳು ಅವರಿಗೆ ಸಂಬಂಧಿಸಿದವರೊಡನೆ ಉಳಿಸಿಹೋದ ಭಾವ ಮತ್ತು ಸಂಬಂಧದ ಭಾವ ತೀವ್ರತೆಯ ಮೇಲೆ ಉಳಿದವರೂ ಸ್ಪಂದಿಸುವುದರಿಂದ, ಇತರರು ಸಾವಿಗೆ ಸಾರ್ವತ್ರಿಕವಾಗಿ ಪ್ರತಿಕ್ರಿಯಿಸುವ ಅನಿವಾರ್ಯತೆ ಉಂಟಾಗಿದೆ. ಈ ಸಾರ್ವತ್ರಿಕ ಪ್ರತಿಕ್ರಿಯೆಗಳು ಅನವಶ್ಯಕ ಸಂಘರ್ಷವನ್ನು ಉಂಟುಮಾಡಬಾರದೆಂದೂ, ಇತರರ ಭಾವನೆಗಳಿಗೆ ಧಕ್ಕೆ ಮಾಡಬಾರದೆಂದೋ ಅಥವಾ ಗೌರವಿಸಲೆಂದೋ ಬೇಕಿವೆ ಎಂದೇ ಇಟ್ಟುಕೊಳ್ಳೋಣ. ಆದರೆ ನನ್ನ ಸಾವನ್ನು ನಾನು ಸ್ವೀಕರಿಸುವ ಬಗೆಯನ್ನು ಗಮನಿಸಿದರೆ 'ನೆಮ್ಮದಿ' ಎಂಬುದು ವ್ಯಕ್ತಿಗತವಾದಂತಹ ಒಂದು ಆಲೋಚನೆ.

ವಯಸ್ಸಾಯಿತು, ಸಾಯಲೇಬೇಕಿತ್ತು, ಸತ್ತರು. ಹೆಚ್ಚು ನರಳಲಿಲ್ಲ, ತಾವೂ ಬಾಧೆಗೊಳಗಾಗಲಿಲ್ಲ, ಇತರರಿಗೂ ಬಾಧೆ ಕೊಡಲಿಲ್ಲ ಎಂದೆಷ್ಟೇ ನನ್ನ ತಾಯಿಯ ಸಾವಿನ ಬಗ್ಗೆ ತಾತ್ಕಾಲಿಕವಾಗಿ ಅಂದುಕೊಂಡು ಸಮಾಧಾನಿಸಿಕೊಂಡರೂ, ನಾನೊಬ್ಬನೇ ಇರುವಾಗ ನಾನು ಹುಟ್ಟಿದಾಗಿನಿಂದ, ತಾನು ಸಾಯುವವರೆಗೂ ಜೊತೆಯಲ್ಲಿಯೇ ಇದ್ದು ಒಂದು ಮಧ್ಯಾಹ್ನ ದಿಢೀರನೆ ಹೊರಟುಹೋದ ಆ ತಾಯಿ ನೆನಪುಗಳ ಸಮೇತ ಬಂದುಕಾಣುತ್ತಲೇ ಇರುತ್ತಾರೆ. ಉಮ್ಮಳಿಸಿ ಬರುವ ಅಳುವಿಗೆ ಕಾರಣವಾಗುತ್ತಲೇ ಇರುತ್ತಾರೆ. ನಾನಿನ್ನೇನಾದರೂ ಮಾಡಿದ್ದರೆ, ಎಚ್ಚರಿಕೆ ತೆಗೆದುಕೊಂಡಿದ್ದರೆ ಅವರು ಬದುಕುತ್ತಿದ್ದರೇನೋ. ನನ್ನ ದೆಸೆಯಿಂದ ಅವರ ಅವರ ಬದುಕಿನ ಅವಧಿ ಒಂದಿಷ್ಟು ಮೊಟಕಾಗಿಬಿಟ್ಟಿತೋ ಎಂತೆಲ್ಲಾ ಅಪರಾಧ ಪ್ರಜ್ಞೆಗಳು ಕಾಡತೊಡಗುತ್ತವೆ. ಅವರಷ್ಟು ಕಾಲ ನನ್ನೊಡನೆ ಯಾರೂ ಇರಲಿಲ್ಲ. ಅತ್ಯಂತ ದೀರ್ಘಕಾಲದ ಹಗಲುಇರುಳುಗಳನ್ನು ಈ ಬದುಕಲ್ಲಿ ಬದುಕಾಗಿಯೇ ಹಂಚಿಕೊಂಡವರು.

ಹೌದು, ಅಳಿದವರೂ ಆಳುವರು ಉಳಿದವರ ನೆನಪಲ್ಲಿ ಆಳುವುದು ನಿಂತರೂ ಆ ಅಗಲಿಕೆಯ ನೋವು ಗುಪ್ತಗಾಮಿನಿ. ಅಲ್ಲದೇ ಸತ್ತವರ ತತ್ವ ಸಿದ್ಧಾಂತಗಳು ಇತರರ ಮೂಲಕ ಜಾರಿಯಲ್ಲಿದ್ದು ಅಲ್ಲಿ ಅಳಿದವರೇ ಆಳುತ್ತಿರುತ್ತಾರೆ.

ಜೀವನ ಗೀತೆ

ಹೆನ್ರಿ ವರ್ಡ್ಸ್‌ವರ್ತ್ ಲಾಂಗ್‌ಫೆಲೋ ಅವರ 'ಎ ಸಾಂಗ್ ಆಫ್ ಲೈಫ್'ನ್ನು 'ಜೀವನ ಗೀತೆ' ಎಂದು ನಾನು ಅನುವಾದಿಸಿದಾಗ ಅಂಕಣಗಾರ್ತಿ ಮತ್ತು ಇತಿಹಾಸ ಪ್ರಾಧ್ಯಾಪಕಿ ಡಾ. ಎಂ ವಸು ಮಳಲಿಯವರೊಡನೆ ಅದನ್ನು ಹಂಚಿಕೊಂಡಿದ್ದೆ. ಅವರು ಆಗಷ್ಟೇ ತಮ್ಮ ಕ್ಯಾನ್ಸರ್ ಚಿಕಿತ್ಸೆ ಪಡೆದು ಮತ್ತೆ ತಮ್ಮ ಚಟುವಟಿಕೆಗಳಲ್ಲಿ ನಿಧಾನವಾಗಿ ತೊಡಗಿಸಿಕೊಳ್ಳುತ್ತಿದ್ದ ಸಮಯವದು. ಸಾವನ್ನು ಸಕಾರಾತ್ಮಕವಾಗಿ ಸ್ವೀಕರಿಸಬೇಕು ಎನ್ನುವ ಧೋರಣೆಗಿಂತಲೂ, ಮುಕ್ತವಾಗಿ ಮತ್ತು ಸಹಜವಾಗಿ ಸ್ವೀಕರಿಸಬೇಕು ಎಂಬ ನಿಲುವು ಮತ್ತು ಒಲವಿನಿಂದ ಜೀವನ ಗೀತೆಯಲ್ಲಿ ಇರುವ ವಿಷಯಗಳನ್ನು ಮಾತಾಡಿದಾಗ, "ನೀವು ಸಾವನ್ನು ಎದುರಿಸಿರುವ ನೋವನ್ನು ಅನುಭವಿಸದೇ ಫಿಲಾಸಫಿ ಮಾತಾಡಬಹುದು. ಹಾಗೆ ನಾನೂ ಈ ಹಿಂದೆ ಮಾತಾಡಬಲ್ಲವಳಾಗಿದ್ದೆ. ಆದರೆ ಅದು ನನಗೆ ಆಗುವುದಿಲ್ಲ" ಎಂದಿದ್ದರು.

ವ್ಯಕ್ತಿ ತನ್ನನ್ನು ಕಂಡುಕೊಳ್ಳುವ ಬಗೆ ಮತ್ತು ಪರರನ್ನು ಕಾಣುವ ಬಗೆ, ಅದರಿಂದ ಉಂಟಾಗುವ ವೈಚಾರಿಕ ಸಂಘರ್ಷಗಳು ಅಥವಾ ವೈವಿಧ್ಯತೆಗಳ ಬಗ್ಗೆ ಅವರು ಮಾತಾಡುತ್ತಿದ್ದರು. ನಾನು ಸಾವಿನ ಬಗ್ಗೆ ಏನೊಂದೂ ಮಾತಾಡದೇ ಬರಿದೇ ಜೀವನ್ಮುಖಿಯಾಗಿರುವಂತಹ ಮಾತಾಡಿದರೂ, ಎಲ್ಲಿಯೋ ಒಂದು ಕಡೆ ಅವರೇ ಸಾವು ಮತ್ತು ನೋವಿನ ಬಗ್ಗೆ ಸೊಲ್ಲೆತ್ತಿಬಿಡುತ್ತಿದ್ದರು. ನಂತರ ನಾನು ಅದರ ಬಗ್ಗೆ ಮಾತುಗಳು ಅಗತ್ಯವೇ ಪ್ರಸ್ತುತ ಕೆಲಸಗಳ ಮಧ್ಯೆ ಎಂಬರ್ಥದಲ್ಲಿ ಹೇಳಿದರೆ, ಅವರೇ ನಕ್ಕು, "ಅದು ಗೊತ್ತಿರುವುದೇ ತಾನೇ. ಕೆಲಸಗಳು ಆ ಹೊತ್ತಿಗೆ ಅದನ್ನು ನೆನಪಿಸುವುದಿಲ್ಲ ಅಷ್ಟೇ" ಎಂದರೂ ಅವರು ಜೀವನವನ್ನು ಪ್ರೀತಿಸುತ್ತಿದ್ದವರಾಗಿ ಕೆಲಸಗಳಲ್ಲಿ ತೊಡಗಿಕೊಳ್ಳುತ್ತಿದ್ದರು. ತನ್ನಂತೆ ಪರರನ್ನು ಬಗೆಯುವ ಸಮಾಜಮುಖಿಯೂ, ದುಡಿಮೆಗೆ ಗೌರವ ಮತ್ತು ನ್ಯಾಯ ಸಲ್ಲಿಸುವ ಜೀವಿಯೂ ಆಗಿದ್ದರು. ಅಷ್ಟೇ ಅಲ್ಲದೇ ಯಾವುದೇ ಬಗೆಯ ಅಸಮಾನತೆಗೆ, ಶೋಷಣೆಗೆ ಬಂಡಾಯದ ದನಿಯೂ ಆಗಿದ್ದರು.


ಸಾವೆಂಬುದು ಹೋಗುವುದಲ್ಲ; ಮರಳುವುದು. ಸಾವೆಂಬುದು ಶಿಕ್ಷೆಯಲ್ಲ, ನಿಯಮ ಎಂದೆಷ್ಟೇ ಸೈದ್ಧಾಂತಿಕವಾಗಿ ನಾನು ತಿಳಿದಿದ್ದರೂ ಅವರು ಮರಣಿಸಿದರು ಎಂದು ತಿಳಿದಾಗ ಅವರ ಬಗ್ಗೆ ನನಗಿದ್ದ ಒಲವು ಮತ್ತು ಆದರದ ಭಾವುಕತೆಯು ನನ್ನೆಲ್ಲಾ ತತ್ವ ಸಿದ್ಧಾಂತಗಳನ್ನೂ ಕೊಚ್ಚಿಕೊಂಡುಹೋಗಿತ್ತು.

ಸಾವೆಂಬುದು ಗುಪ್ತ ಶತ್ರು ಎಂದು ಭಾವಿಸಿದ್ದಂತಹ ಅದೊಂದು ಸಮಯದಲ್ಲಿ ಸಾವು ಶತ್ರುವಲ್ಲ, ಆದರೆ ರೋಗವೆಂಬುದು ಗುಪ್ತ ಶತ್ರು ಎಂದು ನನಗೆ ತಿಳಿಸಿದವನು ನಾವು ಬಂಟಿ ಎಂದು ಕರೆಯುವ ಆದಿತ್ಯ. ಹೈಸ್ಕೂಲ್ ಓದಬೇಕಿದ್ದ ಆ ಹುಡುಗ ಮೆದುಳಿನ ಬ್ಲಾಸ್ಟೋಮಾಗೆ ತುತ್ತಾಗಿ, ಅವನ ಕುಟುಂಬ ಜಗತ್ತಿನಲ್ಲಿ ಕಾಣುವ ಎಲ್ಲಾ ಸಾಧ್ಯತೆಗಳಿಂದ ಅವನನ್ನು ಉಳಿಸಿಕೊಳ್ಳಲು ಯತ್ನಿಸುತ್ತಿದ್ದಾಗ, ಪ್ರತಿನಿತ್ಯ ಅವನ ಮೇಲೆ ವಿನಾಕಾರಣ ಹಿಂಸಾತ್ಮಕವಾಗಿ ದಾಳಿ ಮಾಡುತ್ತಾ ಕ್ಯಾನ್ಸರ್ ಕಣಗಳು ಅವರ ಒಂದೊಂದು ಪ್ರಯತ್ನವನ್ನೂ ವಿಫಲಗೊಳಿಸುತ್ತಾ ಬಂದಿದ್ದವು.


ಕರ್ನಾಟಕ ಸರ್ಕಾರದ ಉನ್ನತ ಹುದ್ದೆಗಳಲ್ಲಿ ಅಧಿಕಾರಿಯಾಗಿದ್ದ ಬಿ.ಎನ್.ಸುರೇಶ್ ಮತ್ತು ಸುಜಾತ ಅವರ ಮಗ ಬಂಟಿ ಹುಟ್ಟಿದಾಗಿನಿಂದ ಇತರ ಬಂಧುಗಳಂತೆ ಓರ್ವನಾಗಿ ತಿಳಿದಿದ್ದರೂ ನನಗೆ ಹತ್ತಿರವಾಗಿದ್ದು ಅವನ ರಂಗಭೂಮಿಯ ಒಲವಿನಿಂದ. ತಾನು ರಂಗಭೂಮಿಯ ಚಟುವಟಿಕೆಗಳಲ್ಲಿ ತೊಡಗಿಕೊಳ್ಳಬೇಕು ಎಂದು ಆಸಕ್ತಿ ತೋರಿ ನನ್ನೊಡನೆ ಅಲ್ಪವೇ ಆದರೂ, ಒಂದಷ್ಟು ಕಾಲ ಕಳೆದಿದ್ದ. ಆದರೆ, ಅವನು ತೆಗೆದುಕೊಳ್ಳುತ್ತಿದ್ದ ಚಿಕಿತ್ಸೆಗಳೂ ಮತ್ತು ಅವುಗಳ ಸಲುವಾಗಿ ಪಡೆಯಬೇಕಿದ್ದ ವಿಶ್ರಾಂತಿಗಳ

▶▶ 19

ತನ್ನ ಕಾಲ ಮೇಲೆ ತಾನೇ ಕಲ್ಲು ಹಾಕಿಕೊಂಡ ಮೋ



ಕಳೆದ ವಾರದ ಸಂಚಿಕೆಯಲ್ಲಿ ಜಿ.ರವಿಕಿರಣ್ ಅವರು "ಹಿಟ್ಲರ್ ಮತ್ತು ತುಘಲಕ್ ಇಬ್ಬರೂ ಒಬ್ಬ ಮೋದಿಯಲ್ಲಿಯೇ ಆವಿರ್ಭವಿಸಿದಾಗ" ಎಂಬ ಪತ್ರದಲ್ಲಿ ಮೋದಿಯ ನೋಟು ರದ್ದತಿ ಯೋಜನೆಯ ಹಿಂದೆ ದೂರಾಲೋಚನೆ ಮತ್ತು ದುರಾಲೋಚನೆ ಎರಡೂ ಇರುವ ಬಗ್ಗೆ ಬರೆದಿರುವುದು ಸರಿಯಾಗಿದೆ. ಮೋದಿಗೆ ಭಾರತದ ಸರ್ವಾಧಿಕಾರಿ ಆಗುವ ದುರಾಲೋಚನೆ ಇರುವುದು ಸ್ಪಷ್ಟ. ಅದಕ್ಕಾಗಿಯೇ ಅವರು ಯಾವಾಗಲೂ ನಮ್ಮ ಯೋಧರನ್ನು ಕೃತ್ರಿಮವಾಗಿ ಹೊಗಳುತ್ತಾ ಇರುವುದು. ಯಾಕೆಂದರೆ ಮೋದಿ ಸರ್ವಾಧಿಕಾರಿ ಆಗಲು ಅಡ್ಡಿ ಇರುವುದು ಕೇವಲ ನಮ್ಮ ಸೇನೆ ಮಾತ್ರ. ಸೇನೆಯ ಬೆಂಬಲವಿದ್ದರೆ ಮಾತ್ರ ಜಗತ್ತಿನಲ್ಲಿ ಯಾವುದೇ ದೇಶದಲ್ಲಿ ಒಬ್ಬ ರಾಜಕಾರಣಿ ಸರ್ವಾಧಿಕಾರಿ ಆಗಲು ಸಾಧ್ಯ. ಆದಕ್ಕಾಗಿ ನಮ್ಮ ಸೇನೆಯನ್ನು ಬುಟ್ಟಿಗೆ ಹಾಕಿಕೊಳ್ಳಲು ಯೋಧರನ್ನು ಅಟ್ಟಕ್ಕೇರಿಸುವ ಹೊಗಳಿಕೆಗಳು ಮೋದಿಯಿಂದ. ಜತೆಗೆ ಹಲವಾರು ಮಾಜಿ ಸೇನಾ ಜನರಲ್‌ಗಳಿಗೆ ತಮ್ಮ ಕ್ಯಾಬಿನೆಟ್ಟಿನಲ್ಲಿ ಮಂತ್ರಿಗಿರಿ ಅಥವಾ ಪಕ್ಷದಲ್ಲಿ ಉನ್ನತ ಹುದ್ದೆ ಕೊಟ್ಟಿರುವುದೂ ಸೇನಾಧಿಕಾರಿಗಳನ್ನು ಮಾನಸಿಕವಾಗಿ ಕೈವಶ ಮಾಡಿಕೊಳ್ಳಲೋಸುಗವೇ. ನೋಟು ರದ್ದತಿಗೆ ಮುಂಚೆ ಮೂರೂ ಸೇನಾಧಿಕಾರಿಗಳನ್ನು ಕರೆದು ಅವರೊಂದಿಗೆ ಸಮಾಲೋಚಿಸಿಲು ಕಾರಣ ಸೇನಾಧಿಕಾರಿಗಳು ಅಥವಾ ಅವರ ಸಂಬಂಧಿಕರಲ್ಲಿ ದೊಡ್ಡ ಪ್ರಮಾಣದ ಹಳೆಯ ನೋಟುಗಳು ಇದ್ದರೆ .ಅದನ್ನು ಬದಲಾಯಿಸಿಕೊಳ್ಳಲು ಅನುವು ಮಾಡಿಕೊಡುವ ಉದ್ದೇಶ ಇತ್ತು ಎಂಬ ಆರೋಪಗಳಿವೆ. ಏನೇ ಆಗಲಿ ಮೋದಿಯವರು ಈ ನೋಟು ರದ್ದತಿ ಯೋಜನೆ ಜಾರಿ ಮಾಡದೇಹೋಗಿದ್ದರೆ ಇನ್ನೊಂದು ಇಪ್ಪತ್ತು ವರ್ಷ ಅವರನ್ನು ಪ್ರಧಾನಿ ಕುರ್ಚಿಯಿಂದ



ಅಲ್ಲಾಡಿಸುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ. ಅವರು ಯುಗಪುರುಷ ಎಂಬ ಹುಸಿ ಭಾವನೆಯಲ್ಲಿಯೇ ಜನರು ಮುಳುಗಿ, ಅವರು ಏನೂ ಅಭಿವೃದ್ಧಿ ಮಾಡದಿದ್ದರೂ ಜನರು ಅವರನ್ನೇ ಮತ್ತೆ ಮತ್ತೆ ಆರಿಸಿ ಕಳುಹಿಸುತ್ತಿದ್ದರು. ಆದರೆ ಈಗ ಅವರು ಇಷ್ಟು ದೊಡ್ಡ ಪ್ರಮಾದ ಮಾಡಿರುವುದರಿಂದ ಜನರಿಗೆ ಅವರ ಸೀಮಿತ ಬುದ್ಧಿಶಕ್ತಿ ಹಾಗೂ ಅರ್ಥಶಾಸ್ತ್ರದ ಜ್ಞಾನವೇ ಅವರಿಗಿಲ್ಲ ಎಂಬುದು ಬಹಿರಂಗವಾಯಿತು. ಈ ರೀತಿ ಮೋದಿಯವರ ರಾಜಕೀಯ ವರ್ಚಸ್ಸು ಕಳೆಗುಂದಿ ಅವರು ಕೇವಲ ಈ ಅವಧಿ ಮಾತ್ರ ಪೂರೈಸುವುದು ಸಾಧ್ಯ. ಮೋದಿ ತನ್ನ ಕಾಲ ಮೇಲೆ ತಾವೇ ಕಲ್ಲು ಹಾಕಿಕೊಂಡಿದ್ದು ಮಾತ್ರವಲ್ಲ ಬಿಜೆಪಿ ಪಕ್ಷದ ತಲೆಯ ಮೇಲೂ ಕಲ್ಲು ಎತ್ತಿ ಹಾಕಿದ್ದಾರೆ ಎಂದು ಬಿಜೆಪಿಯವರೇ ಈಗ ಒಪ್ಪಿಕೊಂಡಿದ್ದಾರೆ. ಆದರೆ ಕೇವಲ ಇತರ ಜನರ ಎದುರು ಮಾತ್ರ ಎಲ್ಲಾ ಬಿಜೆಪಿ ಸದಸ್ಯರು ಮೋದಿಯ ನೋಟು ರದ್ದತಿ ಯೋಜನೆ ಸಮರ್ಥಿಸುವ ನಾಟಕ ಆಡುತ್ತಿದ್ದಾರೆ ಅಷ್ಟೇ, ಆದರೆ ಒಳಗಿಂದೊಳಗೆ ಎಂತಹ ನಿರ್ದಯಿ ಮೂರ್ಖ ವ್ಯಕ್ತಿಯ ಕೈಯಲ್ಲಿ ತಮ್ಮ ಪಕ್ಷ ಸಿಕ್ಕಿಬಿದ್ದಿದೆ ಎಂದು ಪರಿತಪಿಸುತ್ತಿದ್ದಾರೆ.

ಹೆಚ್ಚಿನ ಬಿಜೆಪಿ ಮತ್ತು ಸಂಘ ಪರಿವಾರದ ಸದಸ್ಯರಿಗೆ ಅವರ ಮನೆಯ ಹೆಂಗಸರೇ ದಿನಾಲೂ ಮಂಗಳಾರತಿ ಮಾಡುತ್ತಿದ್ದಾರೆ. ಸ್ವದ್ಯೋಗಿ ಮಹಿಳೆಯರೇ ಮಾಡುತ್ತಿದ್ದ ಸಣ್ಣಪುಟ್ಟ ವ್ಯಾಪಾರಗಳಾದ ಮೀನು, ತರಕಾರಿ, ಮಲ್ಲಿಗೆ ಮಾರುವುದು ಮುಂತಾದವುಗಳಿಂದ ಬದುಕು ಕಟ್ಟಿಕೊಂಡಿದ್ದ ಬಡ ಮಹಿಳೆಯರು ಈಗ ತಮ್ಮ ವ್ಯಾಪಾರ ಕುಸಿದು ಮಕ್ಕಳು ಮನೆಯಲ್ಲಿ ಉಪವಾಸ ಬೀಳಬೇಕಾಗಿ ಬಂದಿರುವುದರಿಂದ, ನೋಟು ರದ್ದತಿಯು ಭವಿಷ್ಯದಲ್ಲಿ ಒಳ್ಳೆಯ ದಿನಗಳನ್ನು ತರುತ್ತದೆ ಎಂಬ ತಮ್ಮ ಗಂಡಸರ ಮೊಂಡುವಾದದಿಂದ ಹೆಂಗಸರು ರೋಸಿ ಹೋಗಿದ್ದಾರೆ. ಈ ರೀತಿ ವ್ಯತಿರಿಕ್ತ ಜನಾಭಿಪ್ರಾಯ ರೂಪುಗೊಂಡಿದ್ದರಿಂದ ಮುಂದಿನ ದಿನಗಳಲ್ಲಿ ಮೋದಿಯ ರಾಜಕೀಯ ಜೀವನ ಸುಗಮವಾಗಿರುವುದಿಲ್ಲ, ಪಕ್ಷದೊಳಗೆಯೇ ಬಂಡಾಯ ಏಳಬಹುದು. ಮೋದಿಯ ಸೂಪರ್-ಮ್ಯಾನ್ ಇಮೇಜ್ ಧ್ವಂಸಗೊಂಡಿದೆ. ಅವರಿಂದ ನೇರ ಲಾಭ ಪಡೆದ ಕೆಲವು ಭಕ್ತರು ಮಾತ್ರ ಮೋದಿಯ ಬಗ್ಗೆ ಕುರುಡು ಧೃತರಾಷ್ಟ್ರ ಪ್ರೇಮ ತೋರಿಸುತ್ತಿದ್ದಾರೆ ಅಷ್ಟೇ.




ಇಂದಿರಾ ಗಾಂಧಿ 1975 ರಲ್ಲಿ ತುರ್ತು ಪರಿಸ್ಥಿತಿ ಹೇರುವ ಬದಲು ಅವರು ಮಧ್ಯಾವಧಿ ಚುನಾವಣೆಗೆ ಹೋಗುತ್ತಿದ್ದರೆ ಅವರ ಪಕ್ಷವೇ ಮತ್ತೆ ಗೆದ್ದು ಅಧಿಕಾರ ಹಿಡಿಯುತ್ತಿತ್ತು ಹಾಗೂ ನಂತರ ಕನಿಷ್ಠ ಇನ್ನೆರಡು ಅವಧಿಗೆ ಇಂದಿರಾ ಗಾಂಧಿಯನ್ನು ಪ್ರಧಾನಿ ಹುದ್ದೆಯಿಂದ ಯಾರೂ ಅಲ್ಲಾಡಿಸಲು ಸಾಧ್ಯವಾಗುತ್ತಿರಲಿಲ್ಲ. ಆದರೆ ತುರ್ತು ಪರಿಸ್ಥಿತಿ ಹೇರುವ ಅವರ ಬಾಲಿಶ ನಡೆಯಿಂದಾಗಿ ಕಾಂಗ್ರೆಸ್ ವಿರುದ್ಧ ಜನಾಭಿಪ್ರಾಯ ರೂಪುಗೊಂಡಿತು ಮತ್ತು 1978 ರಲ್ಲಿ ಜನರು ತಮ್ಮ ರೊಚ್ಚು ತೋರಿಸಿ ಇಂದಿರಾರನ್ನು ಮನೆಗೆ ಕಳುಹಿಸಿದರು. ಅದೇ ಪ್ರಕಾರ ನೋಟು ರದ್ಧತಿಯಂತಹ ಜನವಿರೋಧಿ ನೀತಿಯಿಂದಾಗಿ ಪಕ್ಷದ ಮೇಲೆ ಮೋದಿಯವರ ಪ್ರಭಾವವೂ ದುರ್ಬಲಗೊಂಡಿದ್ದು ಐದೇ ವರ್ಷಕ್ಕೆ ಅವರು ನಿರ್ಗಮಿಸುವ ಸಾಧ್ಯತೆಯೇ ಹೆಚ್ಚು. ಈಗಾಗಲೇ ಆಗಿರುವ ಒಂದು ತಪ್ಪನ್ನು ಸರಿಪಡಿಸುವ ಅಥವಾ ಸಮರ್ಥಿಸುವ ಭಂಡ ಪ್ರಯತ್ನದಲ್ಲಿ ಮೋದಿಯವರಿಂದ ಇನ್ನೂ ಹೆಚ್ಚು ಹೆಚ್ಚು ತಪ್ಪುಗಳು ಘಟಿಸುತ್ತಿವೆ. ಇದು ಅವರನ್ನು ಕೆಸರಿನಲ್ಲಿ ಹೆಚ್ಚು ಹೆಚ್ಚು ಆಳಕ್ಕೆ ನೂಕುವುದು ಖಚಿತ. ಆದರೆ ಯಾವಾಗಲೂ ಅಧಿಕಾರಸ್ಥರ ವಿಕ್ಷಿಪ್ತತೆಗೆ ಕೊನೆಗೆ ಬಲಿಯಾಗುವುದು ಮಾತ್ರ ಸಾಮಾನ್ಯ ಜನರು.

- ಅಭಿಷೇಕ್ ಪಡಿವಾಳ್, ಸುಳ್ಯ

ಬಿಜೆಪಿಯ ಜಯಭೇರಿ ಹೇಗಾಗುತ್ತದೆ?

ಇತ್ತೀಚಿನ ಮಹಾರಾಷ್ಟ್ರದ ಪೌರಾಡಳಿತ ಚುನಾವಣೆಯಲ್ಲಿ ಬಿಜೆಪಿಯ ಗೆಲುವು ನೋಟು ರದ್ದತಿ ಮಹಾರಾಷ್ಟ್ರದ ಜನರಲ್ಲಿ ಆಕ್ರೋಶ ಹುಟ್ಟಿಸಿಲ್ಲ ಎನ್ನುವುದಕ್ಕೆ ಸಾಕ್ಷಿ ಎಂಬ ಪೇಡ್ ಮೀಡಿಯಾಗಳ ವಾದ ಸರಿಯಲ್ಲ. ಕಾರಣ ಅಲ್ಲಿ ಫಲಿತಾಂಶ ಪ್ರಕಟವಾದ 118 ನಗರಸಭೆಗಳಲ್ಲಿ ಬಿಜೆಪಿ ಕೇವಲ 47ರಲ್ಲಿ ಜಯ ಗಳಿಸಿದ್ದರೆ ಬಿಜೆಪಿಗೆ ವಿರುದ್ಧವಾಗಿದ್ದ ಮೂರು ಪಕ್ಷಗಳಾದ ಶಿವಸೇನೆ, ಕಾಂಗ್ರೆಸ್ ಮತ್ತು ಎನ್‌ಸಿಪಿ ಕೂಡಿ ಒಟ್ಟು 71 ನಗರಸಭೆಯಲ್ಲಿ ಜಯ ಗಳಿಸಿವೆ. ವಿಧಾನ ಸಭೆಯಲ್ಲಿ ಶಿವಸೇನೆ ಬಿಜೆಪಿಯ ಪಾರ್ಟ್ನರ್ ಆಗಿದ್ದರೂ ಪೌರಾಡಳಿತ ಚುನಾವಣೆಯಲ್ಲಿ ಶಿವಸೇನೆ ಮತ್ತು ಬಿಜೆಪಿ ವಿರುದ್ಧವಾಗಿ ಸ್ಪರ್ಧಿಸಿದ್ದವು. ಅಂದರೆ ವಿರೋಧ ಪಕ್ಷಗಳು 2/3 ಅಂಶ ಸೀಟು ಗೆದ್ದಿದ್ದರೆ ಬಿಜೆಪಿ ಕೇವಲ ಮೂರನೇ ಒಂದಂಶ ಮಾತ್ರ ಗೆದ್ದಿದೆ. ಹಾಗಿರುವಾಗ ಇದು ಬಿಜೆಪಿಯ ಜಯಭೇರಿ ಹೇಗಾಗುತ್ತದೆ? ಹಿಂದಿನ ಬಾರಿಗೆ ಹೋಲಿಸಿದರೆ ಈ ಬಾರಿ ಬಿಜೆಪಿಯ ಸಾಧನೆ ಉತ್ತಮಗೊಂಡಿರುವುದು ನಿಜ. ಆದರೆ ಇದರಲ್ಲಿ ಹೆಚ್ಚುಗಾರಿಕೆ ಏನಿಲ್ಲ, ಕಾರಣ ಯಾವುದೇ ರಾಜ್ಯದಲ್ಲೂ ಆಡಳಿತದಲ್ಲಿರುವ ಪಕ್ಷ ಹೆಚ್ಚು ಸ್ಥಾನ ಗೆಲ್ಲುವುದು ಲಾಗಾಯ್ತಿನಿಂದ ನಡೆದು ಬಂದ ಸಂಗತಿ. ಯಾಕೆಂದರೆ ಆಡಳಿತದಲ್ಲಿರುವ ಯಾವುದೇ ಪಕ್ಷ ಧನಬಲ, ರಟ್ಟೆಬಲ ಮತ್ತು ಅಧಿಕಾರ ಬಲದಿಂದ ಚುನಾವಣೆಗಳನ್ನು ಗೆಲ್ಲುತ್ತದೆ. ಆದರೆ ಮಹಾರಾಷ್ಟ್ರದಲ್ಲಿ ಆಗಿರುವುದೇನು? ಬಿಜೆಪಿ ಮಹಾರಾಷ್ಟ್ರದ ವಿಧಾನ ಸಭೆಯಲ್ಲಿ ಶಿವಸೇನೆ ಮೈತ್ರಿಯೊಂದಿಗೆ ಅಧಿಕಾರದಲ್ಲಿ ಇದ್ದರೂ ಪೌರಾಡಳಿತ ಚುನಾವಣೆಯಲ್ಲಿ ಏಕಾಂಗಿಯಾಗಿ ಸ್ಪರ್ಧಿಸಿ ಯಾಕೆ ಇಷ್ಟೊಂದು ದುರ್ಬಲ ಪ್ರದರ್ಶನ ಮಾಡಿದೆ? ಇದರ ಅರ್ಥ ಜನರು ಬಿಜೆಪಿ ಪಕ್ಷದ ಆಡಳಿತದಿಂದ ಸಂತುಷ್ಟರಾಗಿಲ್ಲ ಎಂದಾಗಿದೆ. ಹೀಗಿದ್ದರೂ ಕೇಸರಿ ಆಸ್ಥಾನ ಪತ್ರಿಕೆಗಳು ಮತ್ತು ಟಿವಿ ಚಾನೆಲ್ಲಿನವರು ನೋಟು ರದ್ದತಿಯಿಂದಾಗಿ ಮಹಾರಾಷ್ಟ್ರದಲ್ಲಿ ಬಿಜೆಪಿಗೆ ಏನೂ ಹಾನಿಯಾಗಿಲ್ಲ ಎಂದು ಬೊಬ್ಬೆ ಹಾಕುತ್ತಿರುವುದು ಆಶ್ಚರ್ಯ.



ಗುಜರಾತಿನ ಪೌರಾಡಳಿತ ಚುನಾವಣೆಯಲ್ಲಿ ಬಿಜೆಪಿ ಜಯಭೇರಿ ಬಾರಿಸಿರುವುದು ಸತ್ಯ. ಒಟ್ಟು 123 ನಗರಸಭೆಗಳಲ್ಲಿ ಬಿಜೆಪಿಗೆ 106 ಸ್ಥಾನ ಸಿಕ್ಕಿದ್ದು ಕಾಂಗ್ರೆಸ್ಸಿಗೆ ಕೇವಲ 17 ಸ್ಥಾನ ಮಾತ್ರ ಸಿಕ್ಕಿದೆ. ಆದರೆ ಗುಜರಾತಿನಲ್ಲಿ ಆಡಳಿತ ಪಕ್ಷದ ಹಣಬಲ, ರಟ್ಟೆಬಲ ಮತ್ತು ಅಧಿಕಾರ ಬಲದ ಜತೆಗೆ ಇನ್ನೊಂದು ಅತೀ ಮುಖ್ಯ ... ಚುನಾವಣೆಯ ಮೇಲೆ ಪ್ರಭಾವ ಬೀರಿದೆ. ... ನೆರೆಹೊರೆಯಲ್ಲಿ ನೆಲೆಸಿರುವ ಗುಜರಾತಿಗಳೇ ... ಅವರ ಗುಜರಾತ್ ರಾಜ್ಯದ ಜನರಿಗೆ ಆ... ಮೊದಲೇ ದೀಪಾವಳಿ ಹಬ್ಬ... ನೋಟು ಅಮಾನ್ಯವಾಗು... ಮುಂಚಿತವಾಗಿ ಗೊತ್ತಿತ್ತು, ಹಾ... ದೀಪಾವಳಿಗೆ ಮುಂಚೆಯೇ ... ಹಳೆಯ ನೋಟುಗಳನ್ನು ಚ... ಸ್ಥಿರಾಸ್ತಿಯಾಗಿ ಪರಿವರ್ತಿಸಿಬಿಟ್ಟ... ಗುಜರಾತಿಗಳಿಗೆ ನೋಟು ರ... ಯಾವುದೇ ತೊಂದರೆ ಆಗದಿದ್ದ... ಅವರು ಬಿಜೆಪಿ ಪಕ್ಷದ ಬಗ್ಗೆ... ಅಮಿತ್ ಶಾ ಬಗ್ಗೆ ಭಾರಿ ... ಬೆಳೆಸಿಕೊಂಡಿದ್ದಾರೆ. ಈ ಸಾ... ಮಮತೆ ಬಿಜೆಪಿಯನ್ನು ಭಾರಿ ... ಗೆಲ್ಲಿಸಿದ್ದು ನಿಜ. ಈಗಲಾದರೂ ಅರ್ಥವಾಯಿತೆ ... ನಾಡಿನಲ್ಲಿ ಬಿಜೆಪಿ ಜಯಭೇರಿಯ ಗುಟ್ಟು!


- ಅನಿಲ್ ಕುಮಾರ್ ಪೂಜಾರಿ, ಬೆ...

ಸತ್ಯವಾದ ಶಂಕರಾಚಾರ್ಯರ ...

ಕಾವಿಧಾರಿಗಳು ಅತ್ಯಾಚಾರ ಮಾಡಿದರೂ ... ಏನು ಅಪದ್ಧ ಮಾತನಾಡಿದರೂ ತಪ್ಪಿಲ್ಲ ಎನ್ನು... ನೀತಿ ಅನುಸರಿಸುತ್ತಿದ್ದ ಸಂಘ ಪರಿವಾರದ... ಮಾತ್ರ ಉಲ್ಟಾ ಹೊಡೆದು ದ್ವಾರಕೆಯ ಶಂಕರಾ... ಕಾವಿಧಾರಿಗಳಾಗಿದ್ದರೂ ಅವರ ವಿರುದ್ಧ ಕೆ... ಕಾರುತ್ತಿದ್ದಾರೆ. ಶಂಕರಾಚಾರ್ಯರ ಭಕ್ತರು ಮತ್ತು ... ಭಕ್ತರ ನಡುವೆ ಈಗ ಮುಸುಕಿನ ಗುದ್ದಾಟ... ನೋಟು ನಿಷೇಧ ಮಾಡಿರುವ ಪ್ರಧಾನಿ ... ಮೋದಿಯ ವಿರುದ್ಧ ಕಳೆದ ವಾರ ವಾಗ್ದಾಳಿ ... ದ್ವಾರಕೆಯ ಶಂಕರಾಚಾರ್ಯ ಸ್ವರೂಪಾನಂ... ಸ್ವಾಮೀಜಿ, ಕೋಟ್ಯಾಂತರ ಸಾಮಾನ್ಯ ಜ... ಮೋದಿಯನ್ನು ತಟ್ಟಲಿದೆ ಎಂದು ಕಟುವಾಗಿ ... ದೇಶದ ಪ್ರತಿಯೊಬ್ಬ ಪ್ರಜೆಯನ್ನೂ ಸಂಕಷ್ಟದ... ವ್ಯಕ್ತಿಯೊಬ್ಬ ಪ್ರಧಾನ ಮಂತ್ರಿ ಆಗಿದ್ದರೆ ... ಪ್ರಜಾಪ್ರಭುತ್ವ ಎಂದು ಮೋದಿ ಸರ್ಕಾರದ ... ಖಂಡಿಸುವ ಮೂಲಕ ದ್ವಾರಕಾದ ಶಂಕರಾ... ಮೋದಿಯ ವಿರೋಧಿ ಬಣ ಸೇರಿಕೊಂಡಂತಾಗಿ... ಇಡೀ ಭಾರತದಲ್ಲಿ ದ್ವಾರಕಾ ಶಂಕರಾಚಾಯ... ಮೋದಿಯ ವಿರುದ್ಧ ಮಾತನಾಡುವಷ್ಟು ಧೈಯ... ಏಕೈಕ ಕಾವಿಧಾರಿ. ಬೇರೆಲ್ಲಾ ಕಾವಿಧಾರಿಗಳು ... ಚೇಲಾಗಳು. ಮೋದಿ ಅವರ ನಿರ್ಧಾರದಿಂ... ಪರಿಸ್ಥಿತಿ ಹದಗೆಡುತ್ತಿದೆ ಹಾಗೂ ಬಡ ಜನರು...

ಮೂರ್ಛೆ ಹೋಗಿರುವ ಊರ್ಜಿತ್ ಪಟೇ...

ಮಾನವನ ಜೀವನದಲ್ಲಿ ಆಧುನಿಕ ಸೌಲಭ್ಯಗಳು ಒದಗಿ ಹೊಸ ಹೊಸ ಪರಿಕರಗಳು ಹುಟ್ಟಿಕೊಂಡ ಮೇಲೆ ಮನುಷ್ಯನ ನಿತ್ಯ ಬದುಕು ಅವುಗಳ ಮೇಲೆಯೇ ಬಹಳಷ್ಟು ನಿರ್ಭರವಾಯಿತು. ಈ ಬದಲಾದ ಜೀವನ ಶೈಲಿಗೆ ಅನುಗುಣವಾಗಿಯೇ ಹೊಸ ಹೊಸ ದೈಹಿಕ ಹಾಗೂ ಮಾನಸಿಕ ರೋಗಗಳೂ ಹುಟ್ಟಿಕೊಂಡಿರುವುದರಿಂದ ವೈದ್ಯಕೀಯ ಕ್ಷೇತ್ರ ಮತ್ತು ಮನೋವಿಜ್ಞಾನ ಕ್ಷೇತ್ರದಲ್ಲೂ ಹೊಸ ಹೊಸ ಶಾಖೆ ಹುಟ್ಟಿಕೊಂಡಿವೆ. ಉದಾಹರಣೆಗೆ ಮೊಬೈಲುಗಳ ಮೇಲೆ ಜನರು ಅತಿಯಾಗಿ ಅವಲಂಬಿತರಾದ ಮೇಲೆ ಜನರಲ್ಲಿ ಹಲವು ಮಾನಸಿಕ ತೊಂದರೆಗಳು ಸುರುವಾದವು. ಅದರಂತೆ ಮೊಬೈಲುಗಳ ಬಳಕೆಯನ್ನು ಆಧರಿಸಿ ಜನರ ಮೂಲ ಗುಣಗಳನ್ನು ವಿಶ್ಲೇಷಿಸುವ ಯತ್ನಗಳೂ ಆಗುತ್ತಿವೆ. ಯಾವನು ಅತಿಯಾಗಿ ಸೆಲ್ಫೀ ತೆಗೆಯುತ್ತಾನೋ ಅವನು ಅತಿಯಾದ ಸೆಲ್ಫಿಶ್ ಅರ್ಥಾತ್ ಸ್ವಾರ್ಥಿಯಾಗಿರುತ್ತಾನಂತೆ. ಅದರಂತೆ ಹೋದಹೋದಲ್ಲೆಲ್ಲಾ ಫೋಟೋಗೆ ಪೋಜು ಕೊಡುವ ಗೀಳು ಇರುವವನು ಸ್ವಭಾವತಃ ಪ್ರದರ್ಶನಕಾರಿ ಮತ್ತು ಆಷಾಢಭೂತಿ ಸ್ವಭಾವದವರಾಗಿರುತ್ತಾನೆ ಎಂದು ಕಂಡುಬಂದಿರುವುದಾಗಿ ಮನೋವಿಜ್ಞಾನಿಗಳು ಹೇಳುತ್ತಾರೆ. ಈ ನಿಯಮವನ್ನು ನಮ್ಮ ಭಾರತೀಯ ರಾಜಕೀಯಕ್ಕೆ ಹೋಲಿಸಿದರೆ ಸೆಲ್ಫೀ ಕ್ರೇಜ್ ಹಾಗೂ ಎಲ್ಲೆಡೆ ಫೋಟೋಗೆ ಪೋಸ್ ಕೊಡುವ ಗೀಳಿರುವ ನರೇಂದ್ರ ಮೋದಿ ಅತೀ ಹೆಚ್ಚು ಸ್ವ-ಕೇಂದ್ರಿತ ವ್ಯಕ್ತಿ ಹಾಗೂ ಪ್ರದರ್ಶನಕಾರಿ ಸ್ವಭಾವವುಳ್ಳವರು ಎಂದು ಕಂಡುಬರುತ್ತದೆಯಂತೆ. ಇಂತಹ ಸ್ವಕೇಂದ್ರಿತ ಮತ್ತು ಆಷಾಢಭೂತಿ ರಾಜಕಾರಣಿ ತಾನು ದೇಶಕ್ಕಾಗಿ ಮನೆ ಮಠ ಕುಟುಂಬ ತ್ಯಾಗ ಮಾಡಿರುವುದಾಗಿ ಬಡಾಯಿ ಕೊಚ್ಚಿಕೊಂಡರೆ ಅದನ್ನು ನಂಬವುದು ಸಾಧ್ಯವೇ?



ಆರ್‌ಬಿಐ ಗವರ್ನರ್ ಊರ್ಜಿತ್ ಪಟೇಲರನ್ನು ಹಿಂದಿ ಪತ್ರಿಕೆಗಳು 'ಮೂರ್ಛಿತ್' ಪಟೇಲ್ ಎಂದು ಕರೆಯುತ್ತಿವೆ. ಕಾರಣ ನೋಟು ರದ್ದತಿಯಾಗಿ ಒಂದು ತಿಂಗಳಾಗುತ್ತಾ ಬಂದಿದೆ, ಆದರೆ ಸಂಪೂರ್ಣ ಭಾರತ ಇನ್ನೂ ಗೊಂದಲಮಯವಾಗಿದೆ, ನೋಟು ಬದಲಾವಣೆಯ ಅವ್ಯವಸ್ಥೆಯಿಂದ ದೇಶದ ಎಲ್ಲಾ ನಾಗರಿಕರೂ ರೋಸಿಹೋಗಿದ್ದಾರೆ. ಆದರೆ ನೋಟು ಮುದ್ರಣದ ಸ್ಥಿತಿ ಹೇಗಿದೆ? ಒಟ್ಟು ಸೆಕ್ಯೂರಿಟಿ ಮುದ್ರಣಾಲಯಗಳ ಪ್ರತಿ ದಿನದ ನೋಟು ಮುದ್ರಣ ಸಾಮರ್ಥ್ಯ ಎಷ್ಟು? ಸುಮಾರು 16 ಲಕ್ಷ ಕೋಟಿ ಹೊಸ ನೋಟು ಮುದ್ರಣ ಆಗಬೇಕಾದರೆ ಎಷ್ಟು ತಿಂಗಳು ಬೇಕಾಗುತ್ತವೆ? ಎಷ್ಟು ಸೆಕ್ಯೂರಿಟಿ ಕಾಗದ ಆಮದು ಮಾಡಬೇಕಾಗುತ್ತದೆ? ಎಂಬ ವಿವರಗಳನ್ನು ಜನತೆಗೆ ನೇರವಾಗಿ ತಿಳಿಸಬೇಕಾದ ಹೊಣೆ ಆರ್‌ಬಿಐ ಗವರ್ನರ್ ಊರ್ಜಿತ್ ಪ... ಹೊರತು ಅದು ವಿತ್ತ ಸಚಿವರ ಹೊಣೆಯಲ್ಲ. ಹಾಗಿದ್ದರೂ ಇಂತಹ... ಪ್ರಜಾಪ್ರಭುತ್ವದಲ್ಲಿ ಹೊಸ ಆರ್‌ಬಿಐ ಗವರ್ನರ್ ತಮ... ನಿಭಾಯಿಸುವಲ್ಲಿ ಪೂರ್ಣ ವಿಫಲರಾಗಿ ಮೌನವಾ... ಊರ್ಜಿತರು ಮೂರ್ಛಿತರಾಗಿರುವರೇ ಎಂಬ ಅನುಮಾ... ಮೂಡುವುದು ಸಹಜ. ದೇಶ ಎದುರಿಸುತ್ತಿರುವ... ಕಠೀಣ ಸಂದಿಗ್ಧ ಸಮಯದಲ್ಲಿ ತನ್ನ ಜವಾಬ್ದಾರಿ ನಿ... ಆರ್‌ಬಿಐ ಗವರ್ನರ್ ನಮಗೆ ಬೇಕೇ? ಈಗಿನ ಎಲ್ಲಾ... ಮುದ್ರಣಾಲಯಗಳೂ ಮೂರು ಶಿಫ್ಟ್‌ಗಳಲ್ಲಿ ಕೆಲಸ ಮ... ಪರಿಸ್ಥಿತಿ ಸಾಮಾನ್ಯ ಸ್ಥಿತಿಗೆ ಮರಳಬೇಕಾದರೆ ನಾಲ್ಕೈದು ... ಬೇಕಾಗುತ್ತವೆ ಎಂದು ವಿತ್ತ ಸಚಿವರೇ ಹೇಳಿರುವಾಗ ... ಪ್ರಕಾರ ಆರ್‌ಬಿಐ ಗವರ್ನರ್ ನೈಜಸ್ಥಿತಿಯ ಬಗ್ಗೆ ... ಜನತೆಗೆ ಅಧಿಕೃತ ವಿವರ ಕೊಡಲು ಬಾಧ್ಯಸ್ಥರು ಎಂದು... ಪಕ್ಷಗಳು ಯಾಕೆ ಒತ್ತಾಯಿಸುತ್ತಿಲ್ಲ?

ಏನೇ ಆಗಲಿ ಈಗ ಹಿಂದಿನ ಒಂದು ತಿಂಗಳಲ್ಲಿ ... ಮತ್ತು ತಂಡದ ಮೇಲೆ ಹುಟ್ಟಿಕೊಂಡಷ್ಟು ಅಚ್ಚ ಹೊಸ ಜೋಕುಗಳು ... ಭಾರತದ 69 ವರ್ಷದ ಇತಿಹಾಸದಲ್ಲಿ ಎಂದೂ ಹುಟ್ಟಿರಲಿಲ್ಲ. ನೋಟು ರದ್ದ... 125 ಕೋಟಿ ಭಾರತೀಯರನ್ನು ಅಪಾರ ತೊಂದರೆಗೆ ನೂಕಿರುವ ಹೊರ... ಇಷ್ಟೊಂದು ಹೊಸ ಜೋಕುಗಳ ಹುಟ್ಟಿಗೆ ಕಾರಣೀಭೂತರಾದುದಕ್ಕೆ ... ಮೋದಿಯವರಿಗೆ ಧನ್ಯವಾದಗಳು.

ನೋಟು ರದ್ದತಿಗೆ ಬಲಿಯಾಗಿ 108 ಜನ ಸತ್ತಿದ್ದಕ್ಕೆ ದುಃಖವಾಗುತ್ತಿದ್ದರೂ ... ಒಂದು ತಿಂಗಳಿಂದ ಫಕೀರ ಮೋದಿಯ ಮೇಲಿನ ಹೊಸ ಜೋಕುಗಳನ್ನು ಭಾರ... ಹಂಚಿಕೊಂಡು ಹೊಟ್ಟೆ ಹುಣ್ಣಾಗುವಷ್ಟು ನಕ್ಕಿದ್ದು ಮಾತ್ರ ನಿಜ. ಇದ... ಸಾಮಾಜಿಕ ಜಾಲತಾಣಕ್ಕೆ ಋಣಿಯಾಗಿರಬೇಕು. ಮೋದಿಯ ಡಿಜಿಟಲ್ ... ಇಷ್ಟಾದರೂ ಉಪಯೋಗವಾಯಿತು ಬಿಡಿ.


■ ಆರ್.ಬಿ.ಶೇಣವ, ಮಂಗ...



ಮಡಿದುಣ್ಣುವ ಮಹಿಳೆಯರು ದುಡ್ಡಿಗಾಗಿ ಪರದಾಡುತ್ತಿದ್ದಾರೆ ಎಂದಿರುವ ಸ್ವಾಮೀಜಿ ಮೋದಿ ಆಳ್ವಿಕೆ ಬ್ರಿಟಿಷ್ ಆಡಳಿತಕ್ಕಿಂತ ಕೆಟ್ಟದಾಗುತ್ತಿದೆ ಎಂದಿದ್ದಾರೆ. ಮೂರು ವರ್ಷಗಳ ಹಿಂದೆ ಲೋಕಸಭಾ ಚುನಾವಣೆಗೆ ಮುಂಚೆ ಪತ್ರಕರ್ತರೊಬ್ಬರು ಕೇಳಿದ ಪ್ರಶ್ನೆಗೆ ಇದೇ ದ್ವಾರಕೆಯ ಶಂಕರಾಚಾರ್ಯರು "ಮೋದಿ ಭಾರತದ ಪ್ರಧಾನಿಯಾದರೆ ಇಡೀ ದೇಶಕ್ಕೆ ಶನಿ ಹಿಡಿದಂತಾಗುತ್ತದೆ" ಎಂದು ಹೇಳಿದ್ದರು. ಆಗ ಅನೇಕರು ಇಂತಹ ಅಪದ್ಧ ಹೇಳಿಕೆ ಕೊಟ್ಟ ಶಂಕರಾಚಾರ್ಯರನ್ನೇ ತುಂಬಾ ಟೀಕಿಸಿದ್ದರು. ಆದರೆ ಶಂಕರಾಚಾರ್ಯರು ಮೂರು ವರ್ಷದ ಹಿಂದೆ ಹೇಳಿದ ಭವಿಷ್ಯ ಈಗ ಸತ್ಯವಾಗಿದೆ ಹಾಗೂ ದೇಶಕ್ಕೆ ಶನಿ ಹಿಡಿದಿರುವುದು ನಿಜ ಎಂದು ಸ್ವಾಮೀಜಿಯನ್ನು ಮೊದಲು ಟೀಕಿಸಿದವರೇ ಇಂದು ಒಪ್ಪಿಕೊಳ್ಳುತ್ತಿದ್ದಾರೆ.

ದಾರ್ಶನಿಕ ಸಾಕ್ರೆಟೀಸ್ ಹೇಳಿದ ಒಂದು ನಾಣ್ಣುಡಿಯ ಅರ್ಥ ಹೀಗಿದೆ: "ಬುದ್ಧಿವಂತನ ಜತೆ ಬದುಕುವುದು ಸುಲಭ ಯಾಕೆಂದರೆ ಅವನು ಎಲ್ಲರ ಕಷ್ಟಗಳನ್ನು ಅರ್ಥ ಮಾಡಿಕೊಳ್ಳುತ್ತಾನೆ. ದಡ್ಡರೊಂದಿಗೆ ಬದುಕುವುದೂ ಕಷ್ಟವಾಗಲಾರದು. ಯಾಕೆಂದರೆ ಅವನು ಇತರರ ಮಾರ್ಗದರ್ಶನಕ್ಕೆ ತನ್ನನ್ನು ತಾನು ತೆರೆದುಕೊಳ್ಳುತ್ತಾನೆ. ಆದರೆ ತಾನು 'ಮಹಾ ಬುದ್ಧಿವಂತ' ಎಂದು ತಿಳಿದುಕೊಂಡಿರುವ ದಡ್ಡನೊಂದಿಗೆ ಬದುಕುವದು ಮಾತ್ರ ತುಂಬಾ ಕಷ್ಟ. ಯಾಕೆಂದರೆ ಅವನಿಗೆ ಸ್ವಂತ ಬುದ್ಧಿಯೂ ಇರುವುದಿಲ್ಲ, ಜತೆಗೆ ಇತರರ ಮಾರ್ಗದರ್ಶನವನ್ನೂ ಸ್ವೀಕರಿಸುವುದಿಲ್ಲ, ಹಾಗಾಗಿ ಆತ ತಾನೇ ಏನೋ ಮಾಡಲು ಹೋಗಿ ಇನ್ನೇನೋ ಮಾಡಿ ಮನೆಯ ಎಲ್ಲರಿಗೂ ಅಪಾಯ ತರುತ್ತಾನೆ."

ತಾನು ಮಹಾ ಬುದ್ಧಿವಂತನೆಂದು ತಿಳಿದು ಮೂರ್ಖ



ನಿರ್ಣಯಗಳನ್ನು ತೆಗೆದುಕೊಂಡು ಇಡೀ ದೇಶವನ್ನು ಅಲ್ಲೋಲಕಲ್ಲೋಲ ಮಾಡಿ ಬಡಜನರ ಜೀವನ ಅಸ್ತವ್ಯಸ್ತ ಮಾಡಿರುವ ವ್ಯಕ್ತಿಯೇ ಈಗ ನಮ್ಮ ದೇಶವನ್ನು ಆಳುತ್ತಿರುವುದು. ಇವರು ಮಾಡಿದ್ದೆಲ್ಲಾ ಸರಿ ಎನ್ನುವ ಮೂರ್ಖರು ಸುತ್ತಮುತ್ತ ತುಂಬಿರುವಾಗ ಮುಂದಿನ ದಿನಗಳಲ್ಲಿ ದೇಶಕ್ಕೆ ಒಳ್ಳೆಯದಾಗುತ್ತದೆ ಎಂದು ಮೂಗಿಗೆ ತುಪ್ಪ ಸವರಿ ಆಕಾಶ ತೋರಿಸಿ ಎಷ್ಟು ದಿನ ಜನರನ್ನು ಮಂಗ ಮಾಡಲು ಸಾಧ್ಯ? ಇಂದು ಹೊಟ್ಟೆಗಿಲ್ಲದೇ ಸಾಯುವವರು ನಾಳೆಯ ನಿರೀಕ್ಷೆಯಲ್ಲಿ ಜೀವ ಹಿಡಿದುಕೊಳ್ಳಲು ಸಾಧ್ಯವೇ? ಮೋದಿಯ ಮೂರ್ಖ ಭಕ್ತರಲ್ಲಿ ಸಾಕ್ರೆಟೀಸನ ಜ್ಞಾನನುಡಿಗಳನ್ನು ಅರ್ಥಮಾಡಿಕೊಳ್ಳುವಷ್ಟು ಬೌದ್ಧಿಕ ಶಕ್ತಿ ಉಳ್ಳವರು ಯಾರಾದರೂ ಇದ್ದಾರೆಯೇ ಎಂಬ ಅನುಮಾನ ಜನರಿಗಿದೆ.


ಕರಾವಳಿಯಲ್ಲಿ ಇನ್ನೊಂದು ಒಳ್ಳೆಯ ಹಳೇ ಗಾದೆ ಇದೆ: "ಗಂಡ ಹೊಸ ಸೀರೆ ತರುತ್ತಾನೆ ಎಂದು ಹೆಂಡತಿ ತನ್ನ ಹಳೆಯ ಸೀರೆಗಳನ್ನೆಲ್ಲಾ ಬಚ್ಚಲಿನ ಬೆಂಕಿಗೆ ಹಾಕಿ ಬೆತ್ತಲೆ ಕಾದು ಕುಳಿತಳಂತೆ". ಈ ಗಾದೆ ಇಂದಿನ ನೋಟು ರದ್ದತಿಯ ಪರಿಸ್ಥಿತಿಗೆ ಸರಿಯಾಗಿ ಅನ್ವಯವಾಗುತ್ತದೆ. ಆದರೆ ಭಕ್ತಿಯ ಭರದಲ್ಲಿ ವಿವೇಚನಾ ಶಕ್ತಿ ಕಳೆದುಕೊಂಡಿರುವ ಮೋದಿಯ ಪಾದ ಪೂಜಕರಿಗೆ ಇವೆಲ್ಲಾ ಅರ್ಥವಾಗುವುದಿಲ್ಲ. ಶ್ರೀಕೃಷ್ಣನು ಧರ್ಮ ರಕ್ಷಣೆಗಾಗಿ ಘೋರ ಕುರುಕ್ಷೇತ್ರ ಯುದ್ಧ ರಚಿಸಿದ್ದು ಎಂದು ವೈದಿಕರು ಸಮರ್ಥಿಸುತ್ತಾರೆ. ಆದರೆ ಕುರುಕ್ಷೇತ್ರ ಯುದ್ಧದಲ್ಲಿ ದೇಶದಲ್ಲಿದ್ದ ಗಂಡಸರೆಲ್ಲಾ ಸತ್ತು ಹೆಂಗಸರೆಲ್ಲಾ ವಿಧವೆಯರಾಗಿ ಮಕ್ಕಳೆಲ್ಲಾ ಅನಾಥರಾದ ಮೇಲೆ ಕೃಷ್ಣ ರಕ್ಷಿಸಿದ್ದ ಧರ್ಮ ಯಾರದೇ ಪ್ರಯೋಜನಕ್ಕೆ ಬರಲಿಲ್ಲ. ಹಾಗೆಯೇ ಹಿಟ್ಲರ್ ಕಟ್ಟಿದ ಜರ್ಮನಿಯೂ ಸ್ವತಃ ಜರ್ಮನರ ಉಪಯೋಗಕ್ಕೆ ಬರಲಿಲ್ಲ. ವಿಕ್ಷಿಪ್ತ ಮೋದಿಯ ಭಾರತವೂ ಕೊನೆಗೆ ಆತ ಹೇಳಿದ ಒಳ್ಳೆಯ ದಿನ ಬರುವ ಹೊತ್ತಿಗೆ ಒಳ್ಳೆಯವರು ಸತ್ತು ಹೂತು ಮುಗಿದಿರುತ್ತದೆ. ಆಗ ಮೋದಿಯ ಒಳ್ಳೆಯ ದಿನ ಕೇವಲ ಬೃಹತ್ ಕಾರ್ಪೊರೇಟ್‌ಗಳಿಗಾಗಿ ಮಾತ್ರ ಆಗಿ ಉಳಿಯುತ್ತದೆ.

- ಉದಯರಾಜ್ ಬಿ ಆಳ್ವಾ, ಕಾಟಿಪಳ್ಳ

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು.ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕವಾಗಿ SMS ಕಳುಹಿಸಬಹುದು.

ನೂರರ ಸಂಭ್ರಮವೇ ಖುಷಿಕೊಡುವಂಥದ್ದು: ರಮೇಶ್ ಅರವಿಂದ್

ನಟ, ನಿರ್ದೇಶಕ ರಮೇಶ್ ಅರವಿಂದ್ ನೂರು ಚಿತ್ರಗಳನ್ನು ಪೂರೈಸಿದ್ದಾರೆ. 'ಪುಷ್ಪಕ ವಿಮಾನ' ಇವರ ನೂರನೇ ಚಿತ್ರ. ಈ ನೆಪದಲ್ಲಿ ಅವರು ವಿಶ್ವಪರ್ಯಟನೆ ಕೈಗೊಂಡಿದ್ದಾರೆ. ಈ ಮೂಲಕ ತಮ್ಮ ಅಭಿಮಾನಿಗಳಿಗೆ ಕೃತಜ್ಞತೆ ಸಲ್ಲಿಸಲಿದ್ದಾರಂತೆ.



'ಸುಂದರ ಸ್ವಪ್ನಗಳು' ಚಿತ್ರದ ಮೂಲಕ ಸಿನಿಮಾ ರಂಗಕ್ಕೆ ಎಂಟ್ರಿ ಕೊಟ್ಟವರು ರಮೇಶ್ ಅರವಿಂದ್. ಇದೀಗ ಅವರು ನೂರು ಚಿತ್ರಗಳನ್ನು ಪೂರೈಸಿದ್ದಾರೆ. 'ಪುಷ್ಪಕ ವಿಮಾನ' ಇವರ ನೂರನೇ ಚಿತ್ರ. ಈ ನೆಪದಲ್ಲಿ ಇವರು ವಿಶ್ವಪರ್ಯಟನೆಗೆ ಸಿದ್ಧವಾಗಿದ್ದಾರೆ. ವಿವಿಧ ದೇಶಗಳಲ್ಲಿರುವ ಅಭಿಮಾನಿಗಳ ಜತೆ ನೇರವಾಗಿ ಮಾತಾಡುವ ಮೂಲಕ ಕೃತಜ್ಞತೆ ಸಲ್ಲಿಸಲು ಪ್ಲಾನ್ ಮಾಡಿಕೊಂಡಿದ್ದಾರೆ. ಲಂಡನ್‌ನಿಂದ ಶುರುವಾಗುವ ಈ ಪಯಣ, ಹಲವು ದೇಶಗಳನ್ನು ಸುತ್ತಿ ಮತ್ತೆ ಭಾರತದಲ್ಲಿ ಕೊನೆಗೊಳ್ಳಲಿದೆ. ನೂರ ಚಿತ್ರಗಳನ್ನು ಪೂರೈಸಿರುವ ಸಂದರ್ಭದಲ್ಲಿ ತಮ್ಮ ಹಳೆಯ ದಿನಗಳನ್ನೂ ಮೆಲುಕು ಹಾಕಿದ್ದಾರೆ.

** ರಮೇಶ್ ಅರವಿಂದ್ ಕನ್ನಡದ ಮಿಸ್ಟರ್ ಫರ್‌ಫೆಕ್ಟ್ ಅಂತಾರೆ. ವಿರೋಧಿಗಳೇ ಇಲ್ಲದ ಜೀವನವನ್ನು ಕಟ್ಟಿಕೊಂಡಿದ್ದು ಹೇಗೆ?*

ನನ್ನ ಬೆಳವಣಿಗೆಗೆ ನನ್ನ ತಂದೆ ತಾಯಿಗಳ ಪ್ರೋತ್ಸಾಹವೇ ಕಾರಣ. ನನಗೆ ಅವರು ಕಲಿಸಿಕೊಟ್ಟ ಮೌಲ್ಯಗಳು ದಾರಿದೀಪವಾದವು. ಕಲಾವಿದರಿಗೆ ಫ್ಯಾಮಿಲಿಯ ಸಪೋರ್ಟ್ ಇದ್ದರೆ ಖಂಡಿತಾ ಚೆನ್ನಾಗಿ ಇರುತ್ತಾರೆ. ನನ್ನ ಇಡೀ ಕುಟುಂಬ ನನ್ನ ಏಳಿಗೆಗೆ ಶ್ರಮಿಸಿದೆ. ಹಾಗಾಗಿ ಎಲ್ಲವೂ ನನಗೆ ಮನೆಯಲ್ಲೇ ಸಿಕ್ಕಿದೆ. ನಾವು ಮೊದಲು ಪ್ರೀತಿಸೋಕೆ ಶುರು ಮಾಡಿದರೆ, ನಮ್ಮನ್ನು ಜನರು ಪ್ರೀತಿಸೋಕೆ ಶುರು ಮಾಡುತ್ತಾರೆ. ಈ ಮಂತ್ರವೇ ವಿರೋಧಿಗಳು ಇಲ್ಲದಂತೆ ಮಾಡಿದೆ. ನಾವು ಯಾರನ್ನೂ ವಿರೋಧಿಗಳು ಅಂತ ಭಾವಿಸಬಾರದು.

** ನೂರನೇ ಸಿನಿಮಾದ ಹೊಸ್ತಿಲಲ್ಲಿ ಇದ್ದೀರಿ. ಸಿನಿಮಾರಂಗಕ್ಕೆ ಬರಬೇಕು ಅಂತ ಆಸೆ ಇತ್ತಾ?*

ಕಾಲೇಜು ದಿನಗಳಲ್ಲಿ ನನಗೆ ಕಲೆಯ ಬಗ್ಗೆ ಒಲವಿತ್ತು, ಹಾಗಾಗಿ ಸಾಂಸ್ಕೃತಿಕ ಉತ್ಸವಗಳಲ್ಲಿ ಮೂಕಾಭಿನಯ, ಏಕಪಾತ್ರಾಭಿನಯ ಮಾಡುತ್ತಿದ್ದೆ. 'ಸುಂದರ ಸ್ವಪ್ನ'ಗಳಿಂದ ಶುರುವಾದ ಜರ್ನಿ ಹಾಗೆಯೇ ಮುಂದುವರೆದಿದೆ. ನೂರನೇ ಸಿನಿಮಾ ಮಾಡುತ್ತಿದ್ದೇನೆ ಅನ್ನುವುದನ್ನು ನಂಬುವುದಕ್ಕೆ ಆಗುತ್ತಿಲ್ಲ. 'ಪುಷ್ಪಕ ವಿಮಾನ' ಚಿತ್ರ ಮಾಡುವಾಗ ಸ್ನೇಹಿತರು, ಇದು ನೂರನೇ ಸಿನಿಮಾ ಅಂತ ನೆನಪಿಸಿದರು. ನಿಜಕ್ಕೂ ನನಗೆ ಥ್ರಿಲ್ ಆಯಿತು. ಇದೆಲ್ಲ ಆಗೋಕೆ ನನ್ನ ಪ್ರೇಕ್ಷಕರು ಕಾರಣ. ಅವರಿಗೆ ಈ ಗೆಲುವನ್ನು ಅರ್ಪಿಸುತ್ತೇನೆ.

** ನಿಜ ಜೀವನದಲ್ಲಿ ಯಾವತ್ತೂ ನೀವು ನೆಗೆಟಿವ್ ಆಗಿ ಯೋಚನೆ ಮಾಡಿದವರು. ಅಲ್ಲ. ಆದರೆ 'ಅಮೃತವರ್ಷಿಣಿ'ಯಲ್ಲಿ ನೆಗೆಟಿವ್ ರೋಲ್ ಮಾಡಿದೀರಿ. ಆಗ ಹೇಗೆ ಅನ್ನಿಸಿತು?*

ನಾನು ಕಲಾವಿದ. ಪಾತ್ರ ಹೇಗಿದ್ದರೂ ಅಭಿನಯಿಸಬೇಕು. 'ಮಂದಾರ ಹೂವೆ' ಹಿಟ್ ಆದ ಸಮಯದಲ್ಲಿ ನಾನು ಈ ಪಾತ್ರವನ್ನು ಒಪ್ಪಿಕೊಂಡೆ. ಇಂತಹ ಪಾತ್ರ ಈ ಸಮಯದಲ್ಲಿ ಮಾಡಬೇಕಾ ಅಂತ ಅನ್ನಿಸಿತ್ತು, ಆದರೆ, ನಿರ್ದೇಶಕರಿಗೆ ನನ್ನ ಮೇಲೆ ಭರವಸೆ ಇತ್ತು, ಹಾಗಾಗಿ ಪಾತ್ರ ಒಪ್ಪಿಕೊಂಡೆ. ಕಲಾವಿದನ ಜೀವನಕ್ಕೂ, ಮತ್ತು ಪಾತ್ರಗಳಿಗೂ ಸಂಬಂಧವಿರುವುದಿಲ್ಲ, ಹಾಗಾಗಿ ಅದನ್ನು ನಾನು ಪಾತ್ರವಾಗಿ ನೋಡಿದೆ. ಆದರೂ 'ಅಮೃತ ವರ್ಷಿಣಿ' ಸಿನಿಮಾದಲ್ಲಿ ಶರತ್‌ಬಾಬು ನಿರ್ವಹಿಸಿದ ಪಾತ್ರವನ್ನು ಕೊಂದು ಬಂದಿರುತ್ತೇನೆ. ಅದನ್ನು ನಾನು ಸುಹಾಸಿನಿ ಅವರಿಗೆ ಹೇಳಬೇಕು. ನಿಜಕ್ಕೂ ಆ ಸನ್ನಿವೇಶವನ್ನು ನನ್ನಿಂದ ಮಾಡುವುದಕ್ಕೆ ಆಗಿರಲಿಲ್ಲ.

** ಕಮಲ್ ಹಾಸನ್ ನಿಮ್ಮ ಜೀವದ ಗೆಳೆಯ. ಅವರನ್ನು ಬಣ್ಣಿಸುವುದಾದರೆ?*

ಅವರು ನನ್ನ ಜೀವನಕ್ಕೆ ಸಿಕ್ಕ ಅತ್ಯುತ್ತಮ ಜೀನಿಯಸ್. ಬಿಡುವಿಲ್ಲದೇ ಕೆಲಸ ಮಾಡುತ್ತಾರೆ. ಪಾತ್ರ ಎಂಥದ್ದೇ ಆಗಿರಲಿ, ಸನ್ನಿವೇಶ ಹೇಗೆ ಇರಲಿ ಯೋಚನೆಯನ್ನೇ ಅವರು ಮಾಡುವುದಿಲ್ಲ. ಅದ್ಭುತ ಪ್ರತಿಭೆ ಅವರಲ್ಲಿದೆ. ಅವರೊಳಗೆ ಕೇವಲ ನಟ ಮಾತ್ರವಿಲ್ಲ, ಪ್ರಜ್ಞಾವಂತ ಬರಹಗಾರ ಇದ್ದಾನೆ. ವಿಭಿನ್ನವಾಗಿ ಆಲೋಚನೆ ಮಾಡುವ ನಿರ್ದೇಶಕ ಇದ್ದಾನೆ. ಮಗು ಮನಸ್ಸು ಅವರದ್ದು.

** 'ಪುಷ್ಪಕ ವಿಮಾನ' ನಿಮ್ಮ ನೂರನೇ ಚಿತ್ರ. ಅದರಲ್ಲಿ ಏನೆಲ್ಲ ವಿಶೇಷತೆಗಳು ಇವೆ?*

ಸಿನಿಮಾದ ಕಲ್ಪನೆಯೇ ವಿಶೇಷವಾಗಿದೆ. ಇದೇ ಮೊದಲ ಬಾರಿಗೆ ನಾನು ಬುದ್ಧಿಮಾಂದ್ಯ ತಂದೆಯಾಗಿ ನಟಿಸುತ್ತಿದ್ದೇನೆ. ನಿರ್ದೇಶಕರ ಕಲ್ಪನೆಗೆ ಶರಣಾಗಿಯೇ ನಾನು ಈ ಪಾತ್ರವನ್ನು ಮಾಡಿದ್ದೇನೆ. 'ಪುಷ್ಪಕ ವಿಮಾನ' ಅಂತ ಟೈಟಲ್ ಇಟ್ಟುಕೊಂಡು ದೊಡ್ಡ ಜವಾಬ್ದಾರಿಯನ್ನೇ ಹೆಗಲ ಮೇಲೆ ಹಾಕಿಕೊಂಡಿದ್ದೇವೆ. ಅದಕ್ಕೆ ತಕ್ಕ ನ್ಯಾಯ ಸಲ್ಲಿಸುತ್ತೇವೆ ಎಂಬ ಭರವಸೆ ನನಗಿದೆ. ಹೊಸ ತಂಡ ಸಿನಿಮಾದಲ್ಲಿದ್ದರೂ, ಅವರ ಆಲೋಚನೆಗೆ ನಾನಂತೂ ಬೆರಗಾಗಿದ್ದೇನೆ. ಇದು ನನ್ನ ಜೀವನದ ಅತ್ಯುತ್ತಮ ಸಿನಿಮಾಗಳಲ್ಲಿ ಒಂದು ಎಂದು ಹೇಳಿಕೊಳ್ಳಲು ಹೆಮ್ಮೆ ಪಡುತ್ತೇನೆ.

** ನೂರನೇ ಚಿತ್ರಕ್ಕಾಗಿ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದೀರಂತೆ?*

ಈ ಸಂಭ್ರಮವನ್ನು ವಿಭಿನ್ನವಾಗಿ ಆಚರಿಸಲು ಸಿದ್ಧತೆ ಮಾಡಿಕೊಂಡಿದ್ದೇನೆ. ವಿಶ್ವಪರ್ಯಟನೆ ಮಾಡುವ ಮೂಲಕ ಅಭಿಮಾನಿಗಳಿಗೆ ಥ್ಯಾಂಕ್ಸ್ ಹೇಳಬೇಕು ಅಂದುಕೊಂಡಿದ್ದೇನೆ. ಈ ಕಾರ್ಯಕ್ರಮ ಈಗಾಗಲೇ ಲಂಡನ್‌ನಿಂದ ಶುರುವಾಗಿದೆ. ವಿಶ್ವದ ಪ್ರಮುಖ ದೇಶಗಳಲ್ಲಿ ಸುತ್ತಿಕೊಂಡು ಕರ್ನಾಟಕದಲ್ಲಿ ಇದು ಕೊನೆಗೊಳ್ಳಲಿದೆ. ನೇರವಾಗಿ ನಾನು ಪ್ರೇಕ್ಷಕರ ಜತೆ ಹರಟೆ ಹೊಡೆಯುತ್ತೇನೆ. ಖುಷಿ ಕ್ಷಣಗಳನ್ನು ಹಂಚಿಕೊಳ್ಳುತ್ತೇನೆ. ■

ಶರಣರ ಬಾಳನು ಮರಣದಿ ಕಾಣು

17 ◀◀

ಕಾರಣದಿಂದ ಅವನು ಆಸೆ ಪಟ್ಟಂತೆ ನನ್ನಿಂದ ರಂಗದೀಕ್ಷೆ ಪಡೆಯಲು ಆಗಲಿಲ್ಲ. ಆದರೆ, ನನಗೆ ಅವನು ಹೃದಯಕ್ಕೆ ಹತ್ತಿರವಾಗಿದ್ದು ಅವನ ನಿರಹಂಕಾರದ ಮುಗ್ಧತೆ ಮತ್ತು ಮುಕ್ತತೆಯಿಂದ.

ಮದುವೆಯೊಂದರಲ್ಲಿ ಸಿಕ್ಕಾಗ ತಾನೇ ತನ್ನ ಟೋಪಿಯನ್ನು ತೆಗೆದು, ಸರ್ಜರಿಯಾಗಿರುವ ಬೋಳು ತಲೆಯನ್ನು ತೋರಿಸಿ (ಆಗ ಅದೆಷ್ಟು ಸರ್ಜರಿಗಳಾಗಿದ್ದವೋ ನೆನೆಪಿಲ್ಲ) ಮತ್ತೊಂದು ಸರ್ಜರಿ ಆಗುವಂತಹ ಸಂದರ್ಭವೊದಗಿದರೆ ನಾನಿನ್ನು ಇರುವುದಿಲ್ಲ ಎಂಬರ್ಥದ ಮಾತನ್ನಾಡುವಾಗ ಅವನ ನಿರ್ಮಲ ಕಣ್ಣುಗಳನ್ನೇ ನೋಡುತ್ತಾ ನಿರ್ಭಾವುಕತೆಯಿಂದ ಬರುತ್ತಿದ್ದ ಅವನ ಮಾತುಗಳನ್ನು ಕೇಳುತ್ತಾ ನನ್ನ ಹೊಟ್ಟೆಯಲ್ಲಿ ಸಂಕಟವಾಗತೊಡಗಿತ್ತು.

ಮನೆಯಲ್ಲಿ ಅದೆಂತಹ ರಾಜಕೀಯ ಮತ್ತು ಅಧಿಕಾರಗಳ ಘನತೆ ಹಾಗೂ ಪ್ರಭಾವಗಳಿದ್ದರೂ ಅದ್ಯಾವುದರ ಸೋಂಕೇ ಇಲ್ಲದೇ, ಸಾಮಾನ್ಯರಂತೆ ಸರಕಾರಿ ಶಾಲೆಯ ವಿದ್ಯಾರ್ಥಿಯಾಗಿ, ಎಲ್ಲರೊಡನೆ ಪ್ರೀತಿ ಮತ್ತು ನಿರಹಂಕಾರದಿಂದ ಅವನು ವರ್ತಿಸುತ್ತಿದ್ದ ರೀತಿ ಲೌಕಿಕ ಬದುಕಿನಲ್ಲಿ ಸೋಜಿಗವೆನಿಸುತ್ತಿತ್ತು. ಚಿಕಿತ್ಸೆಗಳನ್ನು ತೀವ್ರಗೊಳಿಸಿದ ಸಂದರ್ಭಗಳಲ್ಲಿ, ಬಹುಶಃ ಅವನು ಆಸ್ಪತ್ರೆಯಲ್ಲಿದ್ದಾಗಲೇ ಅವನ ಮತ್ತು ನನ್ನ ನಡುವೆ ಅನೇಕ ಎಸ್‌ಎಂಎಸ್ ಸಂದೇಶಗಳು ಹರಿದಾಡುತ್ತಿದ್ದವು. ಆಗ ಅವನ ಆ ಚಿಕ್ಕವಯಸ್ಸಿಗೆ ಇದ್ದಂತಹ ಪ್ರಬುದ್ಧತೆಯ ಬಗ್ಗೆ, ವಿಚಾರಗಳ ಆಳದ ಬಗ್ಗೆ, ಭಾವನೆಗಳ ಶ್ರೇಷ್ಠತೆಯ ಬಗ್ಗೆ ಅಚ್ಚರಿಪಟ್ಟಿದ್ದೇನೆ.

ಮೃತ್ಯುಮುಖದಲ್ಲಿ ನಚಿಕೇತ

ಸಾವಿಗೆ ಮುಖಾಮುಖಿಯಾಗಿದ್ದ ಬಂಟಿ, ಅದನ್ನು ಎದುರಿಸಲು ಅಥವಾ ಸ್ವೀಕರಿಸಲು ಅವನು ಹೊಂದಿದ್ದಂತಹ ಮನಸ್ಥಿತಿಯನ್ನು ಗಮನಿಸಿದಾಗ ನನಗೆ ಯಮನಿಗೆ ಮುಖಾಮುಖಿಯಾದ ಕಠೋಪನಿಷತ್ತಿನ ನಚಿಕೇತ ನೆನಪಿಗೆ ಬಂದ. ಎಲ್ಲವನ್ನೂ ವಾಸ್ತವದ ಅಥವಾ ಸೈದ್ಧಾಂತಿಕ ನೆಲೆಗಟ್ಟಿನಿಂದ ನೋಡುವ ನನಗೆ ಕಠೋಪನಿಷತ್ತನ್ನು ಮತ್ತೊಂದು ರೀತಿಯಲ್ಲಿ ಓದುವ ಸ್ಫೂರ್ತಿಯಾದ ಬಂಟಿ.

ಈಗ ನಮಗೆ ಲಭ್ಯವಿರುವ ಕಠೋಪನಿಷತ್ತು ಮೂಲದಲ್ಲಿ ಬೇರೆಯೇ ಇದ್ದು ಕಾಲಾನುಕ್ರಮದಲ್ಲಿ ಭಿನ್ನ



ವಿಷಯಗಳು ಸೇರ್ಪಡೆಯಾಗುತ್ತಾ ಬೆಳೆದುಬಂದಿದೆ ಎಂದು ತೋರುತ್ತದೆ. ಶ್ರೇಯಸ್ಸು ಮತ್ತು ಪ್ರೇಯಸ್ಸುಗಳ ವ್ಯತ್ಯಾಸವನ್ನು ಹೇಳುತ್ತಾ ಲೌಕಿಕವನ್ನು, ಭೌತಿಕ ಜೀವನವನ್ನು ಅಪಮೌಲ್ಯಗೊಳಿಸುವ ಸಾಲುಗಳು ಚಾರ್ವಾಕರನ್ನೋ, ಲೋಕಾಯತರನ್ನೋ ಗುರಿಯಾಗಿಸಿಕೊಂಡಂತೆ ಕಾಣುತ್ತದೆ. ಲೌಕಿಕ ಅಪೇಕ್ಷೆಯ ಒಲವಿಂದ ಮಾಡುವ ಪೊಳ್ಳು ಆಚರಣೆಗಳನ್ನು (ಹುಸಿ) ಶ್ರದ್ಧೆಯಿಂದ ಮಾಡುವ ಯಜ್ಞವನ್ನು ಪ್ರಶ್ನಿಸುವ ಶ್ರದ್ಧಾವಂತ ಬಂಡಾಯ ಹುಡುಗನೊಬ್ಬನ ಕಥೆ, ಅದರ ಸೂಕ್ಷ್ಮಾಶಯಗಳನ್ನೇ ಬಿಟ್ಟು ಸಟೀಕಾ ವ್ರತರತ್ನಂನ ಯಾವುದೋ ಒಂದು ವ್ರತದ ಕಥೆಯ ಫಲಶೃತಿಯಂತೆ ಪರಿವರ್ತಿತವಾಗುವ ಕಠೋಪನಿಷತ್ತು ಖಂಡಿತವಾಗಿ ಮಾರ್ಪಾಡುಗಳಿಗೊಳಗಾಗಿದೆ ಅಥವಾ ವೃದ್ಧಿಸಲಾಗಿದೆ ಅಥವಾ ತಿರುಚಲ್ಪಟ್ಟಿದೆ.

ಒಟ್ಟಾರೆ ಮೃತ್ಯುವಿನೊಡನೆ ಮುಖಾಮುಖಿಯಾಗುವ ಆಗಿನ ನಚಿಕೇತ ಮತ್ತು ಈಗಿನ ಬಂಟಿ ಒಟ್ಟಿಗೇ ನನಗೆ ಕಾಣಿಸಿಕೊಂಡರು. ಅದನ್ನೇ ಆಧರಿಸಿಕೊಂಡು ಅಮೃತ ಎಂಬ ಕಾದಂಬರಿಯನ್ನು ಬರೆದೆ.

ಕಿದ್ವಾಯ್ ಸ್ಮಾರಕ ಗಂಥಿ ಆಸ್ಪತ್ರೆಯ ಮಕ್ಕಳ ವಿಭಾಗದಲ್ಲಿ ಶ್ರೀನಿವಾಸ ಮಳೂರುರವರಿಂದಾಗಿ ಅನೇಕ ಮೃತ್ಯುಮುಖವಾಗಿರುವ ನಚಿಕೇತರನ್ನು ಕಾಣುವಂತಾಯಿತು. ಅವರು ಹೆದರುವುದು ಸಾವಿಗಲ್ಲ, ನೋವಿಗೆ ಎಂದೇ ನನಗೆ ತೋರಿದ್ದು. ಆ ಮಕ್ಕಳ ಮುಗ್ಧತೆ ಮತ್ತು ಮುಕ್ತತೆಗಳು ಕಣ್ಣಂಚನ್ನು ತೇವ ಮಾಡುತ್ತವೆ.

ಅದೇ ಕಿದ್ವಾಯ್ ಸ್ಮಾರಕ ಗಂಥಿ ಆಸ್ಪತ್ರೆಯಲ್ಲಿ ತಾವು ನಿವೃತ್ತರಾದರೂ ಮಕ್ಕಳಿಗೆ ಕ್ಯಾನ್ಸರ್ ವಿರುದ್ಧವಾಗಿ ಹೋರಾಡಿ ಜೀವನೋತ್ಸುಖರಾಗಲು ಶ್ರಮಿಸುತ್ತಲೇ ಇರುವ ಡಾ. ಎಲ್.ಅಪ್ಪಾಜಿ ಮತ್ತು ಅರುಣಾರವರಂತಹ ಅನೇಕಾನೇಕ ವೈದ್ಯರನ್ನು ನಾನು ಅಭಿಮಾನದಿಂದ ವಂದಿಸುತ್ತೇನೆ. ■

Registered No.RNP/KA/BGS/2036/2014-16 Posted at :Bangalore, PSO, Mysore Road BG-560026 Thursday R B P LANKESH, Kannada Weekly 21-12-2016 RNI No. KARKAN2005/



ಬಬ್ಲಿ ಪಾತ್ರದಲ್ಲಿ ಅಮೂಲ್ಯ

'ಮುಗುಳುನಗೆ' ಸಿನಿಮಾದಲ್ಲಿ ಗಣೇಶ್ ಮತ್ತು ಅಮೂಲ್ಯ ಮತ್ತೆ ಒಂದಾಗಿದ್ದಾರೆ. ಅಲ್ಲದೇ ಈ ಸಿನಿಮಾದಲ್ಲಿ ಇನ್ನೂ ಮೂವರು ನಟಿಯರು ಕಾಣಿಸಿಕೊಂಡಿದ್ದಾರೆ. ಹೀಗಾಗಿ ಬರೋಬ್ಬರಿ ನಾಲ್ಕು ನಾಯಕಿಯರ ಜತೆ ಗಣೇಶ್ ಈ ಬಾರಿ ಡ್ಯುಯೆಟ್ ಹಾಡಲಿದ್ದಾರೆ. 'ಚೆಲುವಿನ ಚಿತ್ತಾರ'ದಲ್ಲಿ ಮೊದಲು ಒಂದಾದ ಗಣೇಶ್ ಮತ್ತು ಅಮೂಲ್ಯ ಆನಂತರ ಕೆಲವು ಸಿನಿಮಾಗಳಲ್ಲಿ ಒಟ್ಟಾಗಿ ನಟಿಸಿದರು. ಎರಡು ವರ್ಷಗಳ ಹಿಂದೆಯಷ್ಟೇ ಈ ಜೋಡಿಯ ಸಿನಿಮಾ ರಿಲೀಸ್ ಆಗಿತ್ತು. ಈಗ 'ಮುಗುಳುನಗೆ' ಮೂಲಕ ಮತ್ತೆ ಜತೆಯಾಗಿ ತೆರೆ ಹಂಚಿಕೊಳ್ಳುತ್ತಿದ್ದಾರೆ. ಗಣೇಶ್ ಈ ಚಿತ್ರದಲ್ಲಿ ಉಡಾಫೆ ಹುಡುಗನಾಗಿ ಕಾಣಿಸಿಕೊಳ್ಳುತ್ತಿದ್ದು, ಅಮೂಲ್ಯ ಬಬ್ಲಿ ರೀತಿಯ ಪಾತ್ರ ನಿರ್ವಹಿಸಲಿದ್ದಾರೆ. ಈ ಚಿತ್ರವನ್ನು ನಿರ್ದೇಶಿಸುತ್ತಿರುವವರು ಯೋಗರಾಜ್ ಭಟ್. 'ಗಾಳಿಪಟ' ನಂತರ ಗಣೇಶ್ ಮತ್ತು ಭಟ್ಟರ ಕಾಂಬಿನೇಷನ್‌ನ ಚಿತ್ರ ಇದಾಗಿದೆ. ಅಮೂಲ್ಯ ಜತೆ ಆಶಿಕಾ ಮತ್ತು ನಿಖಿತಾ ನಾರಾಯಣ್ ಕೂಡ ನಾಯಕಿಯ ಸ್ಥಾನವನ್ನು ಹಂಚಿಕೊಂಡಿದ್ದಾರೆ. ಜಾಕಿ ಖ್ಯಾತಿಯ ಭಾವನಾ ಅತಿಥಿ ಪಾತ್ರದಲ್ಲಿ ಬಂದು ಹೋಗಲಿದ್ದಾರೆ. ಹತ್ತು ಹಲವು ವಿಶೇಷತೆಗಳನ್ನು ಚಿತ್ರ ಹೊತ್ತು ತರಲಿದ್ದು, ವಿಲನ್ ಪಾತ್ರವೇ ಚಿತ್ರದಲ್ಲಿ ಇಲ್ಲವಂತೆ. ಶುರುವಿನಿಂದ ಕೊನೆಯತನಕ ನಗಿಸುವುದೇ ಈ ಚಿತ್ರದ ಕಾಯಕವಂತೆ. ಹಾಗಾಗಿ ಹೊಸ ರೀತಿಯ ಸ್ಕ್ರಿಪ್ಟ್ ಬರೆದಿದ್ದಾರಂತೆ ನಿರ್ದೇಶಕರು. ■

ರಜನಿ ವಿಲನ್ ಪಾತ್ರ?



ಶಂಕರ್ ನಿರ್ದೇಶನದ ಮತ್ತೊಂದು ಅದ್ದೂರಿ ಬಜೆಟ್ ಸಿನಿಮಾ '2.0'ದಲ್ಲಿ ರಜನಿಕಾಂತ್ ಯಾವ ರೀತಿಯ ಪಾತ್ರ ನಿರ್ವಹಿಸುತ್ತಿದ್ದಾರೆ ಅನ್ನುವ ಕುತೂಹಲ ಹಾಗೆಯೇ ಉಳಿದುಕೊಂಡಿದೆ. ಸಿನಿಮಾ ತಂಡದಿಂದಲೇ ಬಂದಿರುವ ಮಾಹಿತಿಯಂತೆ ರಜನಿ ಅವರದ್ದು ವಿಲನ್ ರೀತಿಯ ಪಾತ್ರವಂತೆ. ಅಲ್ಲದೇ ಸ್ವತಃ ರಜನೀ ಅವರೇ ಹೇಳಿದಂತೆ ಈ ಸಿನಿಮಾದಲ್ಲಿ ಅಕ್ಷಯ್ ಕುಮಾರ್ ನಿಜವಾದ ನಾಯಕ. ಹಾಗಾಗಿ ರಜನಿಕಾಂತ್ ಪಾತ್ರದ ಬಗ್ಗೆ ಮತ್ತಷ್ಟು ಕ್ಯೂರಿಯಾಸಿಟಿ ಮೂಡಿದೆ. ಈ ಸಿನಿಮಾದಲ್ಲಿ ತಲೈವಾ ಹಾಕಿರುವ ಗೆಟಪ್ ಕೂಡ ಸುದ್ದಿಗೆ ಪುಷ್ಟಿಕೊಡುವಂತಿವೆ. ಇದು ವೈಜ್ಞಾನಿಕ ಮತ್ತು ರೊಮಾಂಚಕ ಸಾಹಸ ಚಿತ್ರ. ಹಾಲಿವುಡ್ ಮಾದರಿಯಲ್ಲಿ ಮೂಡಿಬಂದಿರುವ ಚಿತ್ರದಲ್ಲಿ ಸಾಕಷ್ಟು ಥ್ರಿಲ್ ನೀಡುವ ಅಂಶಗಳಿವೆ. ಶಂಕರ್ ನಿರ್ದೇಶನದ ಬಹುತೇಕ ಚಿತ್ರಗಳು ಬಹುಕೋಟಿ ಬಜೆಟ್ ಬೇಡುತ್ತವೆ. ಈ ಸಿನಿಮಾಗೂ ಬರೋಬ್ಬರಿ ನಾಲ್ಕು ನೂರು ಕೋಟಿ ರೂಪಾಯಿ ಖರ್ಚು ಮಾಡಲಾಗಿದೆಯಂತೆ. ಅದರಲ್ಲೂ ರಜನಿ ಗೆಟಪ್‌ಗಾಗಿಯೇ ಲಕ್ಷಾಂತರ ರೂಪಾಯಿ ವ್ಯಯಿಸಲಾಗಿದೆ. ಹಾಗಾಗಿ '2.0' ಚಿತ್ರದ ಬಗ್ಗೆ ಈಗಿನಿಂದಲೇ ನಿರೀಕ್ಷೆ ಶುರುವಾಗಿದೆ. ಸದ್ಯ ಸಿನಿಮಾದ ಶೂಟಿಂಗ್ ಚೆನ್ನೈನಲ್ಲಿ ನಡೆದಿದೆ. ಚಿತ್ರದ ಪ್ರಮುಖ ದೃಶ್ಯದ ಚಿತ್ರೀಕರಣ ವೇಳೆ ರಜನಿಕಾಂತ್ ಮೊಣಕಾಲಿಗೆ ಪೆಟ್ಟು ಮಾಡಿಕೊಂಡಿದ್ದರಿಂದ ಚಿತ್ರೀಕರಣ ನಿಲ್ಲಿಸಲಾಗಿದೆ. ಚಿಕಿತ್ಸೆ ಪಡೆದುಕೊಂಡಿರುವ ರಜನಿ ಮನೆಯಲ್ಲಿ ವಿಶ್ರಾಂತಿ ಪಡೆಯುತ್ತಿದ್ದಾರೆ. ■

ಚಾಕೊಲೇಟ್ ಗರ್ಲ್ ನೇ

'ಮುಂಗಾರು ಮಳೆ 2' ಖ್ಯಾತಿಯ ನೇಹಾ ಶೆಟ್ಟಿ ಸದ್ಯ ಏನು ಮಾ… ಅನ್ನುವ ಕುತೂಹಲ ಅವರ ಅಭಿಮಾನಿಗಳಲ್ಲಿತ್ತು. ಮಳೆ ಸುರಿದು … ತಿಂಗಳಾದರೂ ಅವರು ಯಾವುದೇ ಸಿನಿಮಾದಲ್ಲಿ ನಟಿಸದಿರುವ ಕಾರಣ … ರಂಗ ಬಿಟ್ಟು ಮತ್ತೆ ಮಾಡೆಲಿಂಗ್ ಕಡೆಗೆ ವಾಲಿದರು ಅನ್ನುವ ಮಾ… ಬಂದಿತ್ತು. ಆದರೆ ಅವರು ಸಿನಿಮಾರಂಗದಿಂದ ದೂರವಾಗಿಲ್ಲ ಅನ್ನು… ಸುದ್ದಿಗಳು. ಬಾಲಿವುಡ್‌ಗೆ ಹೋಗುವುದಕ್ಕಾಗಿಯೇ ಅವರು ಈಗ ಹೈದರಾ… ನೃತ್ಯ ತರಬೇತಿ ಪಡೆಯುತ್ತಿದ್ದಾರಂತೆ. ಅಲ್ಲದೇ ಚಂದನ್ ಶೆಟ್ಟಿ ಅವರ 'ಚಾ… ಗರ್ಲ್' ಎಂಬ ಸಂಗೀತ ವಿಡಿಯೋದಲ್ಲಿ ಕಾಣಿಸಿಕೊಳ್ಳಲಿದ್ದಾರಂತೆ.

ಮೊನ್ನೆಯಷ್ಟೇ ಸ್ಟಾರ್ ಹೋಟೆಲ್‌ನಲ್ಲಿ ಬರ್ತ್‌ಡೇ ಪಾರ್ಟಿಯನ್ನು ಆಚ… ನೇಹಾ, ಅವತ್ತು ತನ್ನ ಮುಂದಿನ ಕನಸುಗಳನ್ನು ಹಂಚಿಕೊಂಡಿದ್ದಾರೆ. ಈಗಾಗಲೇ ತೆಲುಗು ಮತ್ತು ತಮಿಳು ಸಿನಿಮಾರಂಗದಿಂದ ಅವಕಾಶ ಕೇಳಿಕೊಂಡು ಬಂದಿದ್ದರೂ, ಅದನ್ನು ನಯವಾಗಿಯೇ ತಿರಸ್ಕರಿಸಿದ್ದಾರಂತೆ. ಕಾರಣ, ಅವರಿಗೆ ಬಾಲಿವುಡ್‌ನಿಂದ ಆಫರ್ ಬಂದಿದೆಯಂತೆ. ಅಲ್ಲದೇ ಈವರೆಗೂ ಕೇಳಿರುವ ಕತೆಗಳಲ್ಲಿ ನಾಯಕಿಯ ಪಾತ್ರಕ್ಕೆ ಅಷ್ಟೊಂದು ಮಹತ್ವ ಇರಲಿಲ್ಲವಂತೆ. ಹಾಗಾಗಿ ನೇಹಾ ಇನ್ನೊಂದಿಷ್ಟು ತಿಂಗಳಗಳ ಕಾಲ ಯಾವುದೇ ಸಿನಿಮಾಗಳನ್ನು ಒಪ್ಪಿಕೊಳ್ಳುವುದಿಲ್ಲವಂತೆ. ■



ತೂಕ ಹೆಚ್ಚಿಸಿಕೊಂಡು ನಿಧಿ

ಕೊಡಗಿನ ಬೆಡಗಿ ನಿಧಿ ಸುಬ್ಬಯ್ಯ ಬರೋಬ್ಬರಿ ಹತ್ತು ಕೇಜಿ ತೂಕ ಹೆಚ್ಚಿಸಿಕೊಂಡಿದ್ದಾರೆ. ತೆಳ್ಳಗೆ ಬಳುಕುತ್ತಿದ್ದಾಕೆ ಇದ್ದಕ್ಕಿದ್ದಂತೆ ತೂಕ ಹೆಚ್ಚಿಸಿಕೊಳ್ಳಲು ಕಾರಣ 'ಸಾರಥಿ' ಚಿತ್ರವಂತೆ. 'ಲವ್ ಶಗುನ್' ಚಿತ್ರದ ನಂತರ ಬಾಲಿವುಡ್‌ನಲ್ಲಿ 'ಸಾರಥಿ' ಚಿತ್ರ ಒಪ್ಪಿಕೊಂಡಿರುವ ನಿಧಿ ಆ ಚಿತ್ರದಲ್ಲಿ ವೇಶ್ಯೆಯ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರಂತೆ. ಈ ಪಾತ್ರಕ್ಕಾಗಿಯೇ ಅವರು ತೂಕ ಹೆಚ್ಚಿಸಿಕೊಂಡಿದ್ದಾರಂತೆ.

"ರಾಜೀವ್ ರುಯಾ ನಿರ್ದೇಶನದಲ್ಲಿ ಚಿತ್ರ ಮೂಡಿಬರುತ್ತಿದ್ದು ರಾಜಪಾಲ್ ಯಾದವ್ ಸೇರಿದಂತೆ ಹಲವು ನಟರು ತಾರಾಗಣದಲ್ಲಿದ್ದಾರೆ. ನಾನು ಈವರೆಗೂ ಇಂತಹ ಪಾತ್ರವನ್ನು ಮಾಡಿರಲಿಲ್ಲ. ನಿರ್ದೇಶಕರು ಈ ರೀತಿ ಪಾತ್ರ ನಿನ್ನದು ಅಂತ ಹೇಳಿದಾಗ ಥ್ರಿಲ್ ಆದೆ. ಹೊಸ ರೀತಿಯ ಕ್ಯಾರೆಕ್ಟರ್ ಅದಾಗಿದ್ದರಿಂದ ಒಪ್ಪಿಕೊಂಡೆ. ಸಾಕಷ್ಟು ಕಷ್ಟಪಟ್ಟು ಒಪ್ಪಿಕೊಂಡೆ" ಅಂದಿದ್ದಾರೆ ನಿಧಿ.

ಉರ್ದು ಮಿಶ್ರಿತ ಮಾತುಗಳು ಸಿನಿಮಾದಲ್ಲಿದ್ದು ದಾಟಿಗಾಗಿ ತಯಾರಿಯನ್ನೂ ಮಾಡಿಕೊಂಡಿದ್ದಾರಂತೆ ಈ ನಟಿ. ಸದ್ಯ ಕನ್ನಡದಲ್ಲೂ ಒಂದು ಸಿನಿಮಾ ಮಾಡುತ್ತಿದ್ದು ಆ ಚಿತ್ರಕ್ಕೆ '5ಜಿ' ಎಂದು ಹೆಸರಿಡಲಾಗಿದೆ. ■



ಜಾನ್ ಜಾನಿಯಲ್ಲಿ ಅಜಯ್ ರಾವ್

ಅಜಯ್ ರಾವ್ ನಟನೆಯ 'ಜಾನ್ ಜಾನಿ ಜನಾರ್ದನ್' ಚಿತ್ರ ಈ ವಾರ ರಿಲೀಸ್ ಆಗುತ್ತಿದೆ. ಸಿನಿಮಾ ರಂಗದಲ್ಲಿ 13 ವಸಂತಗಳನ್ನು ಪೂರೈಸಿರುವ ಅಜಯ್‌ಗೆ ಇದು ಮಹತ್ವದ ಚಿತ್ರವಂತೆ. ಇದು ಮಲ್ಟಿಸ್ಟಾರ್ ಸಿನಿಮಾವಾಗಿದ್ದರೂ, ಅಜಯ್‌ಗೆ ಒಳ್ಳೆಯ ಪಾತ್ರ ಸಿಕ್ಕಿದೆಯಂತೆ. ಅಲ್ಲದೇ ಮಾಸ್ ಚಿತ್ರದ ಸಾಕಷ್ಟು ಅಂಶಗಳು ಸಿನಿಮಾದಲ್ಲಿ ಇರುವುದರಿಂದ ಪ್ರೇಕ್ಷಕರು ಖಂಡಿತಾ ಇಷ್ಟಪಡುತ್ತಾರೆ ಅನ್ನುವ ನಂಬಿಕೆ ಅಜಯ್‌ಯದ್ದು. ಈ ಚಿತ್ರದಲ್ಲಿ ಮದರಂಗಿ ಕೃಷ್ಣ ಲೂಸ್‌ಮಾದ ಯೋಗಿ ಕೂಡ ನಾಯಕರಾಗಿ ಕಾಣಿಸಿಕೊಂಡಿದ್ದು ಗುರು ದೇಶಪಾಂಡೆ ನಿರ್ದೇಶನದಲ್ಲಿ ಚಿತ್ರ ಮೂಡಿಬಂದಿದೆ. ಐಂದ್ರಿತಾ ರೇ ಸ್ಪೆಷಲ್ ಸಾಂಗ್‌ಗೆ ಹೆಜ್ಜೆ ಹಾಕಿದ್ದಾರೆ. "ಮೂವರು ನಾಯಕ ನಟರ ಪಾತ್ರ ವಿಭಿನ್ನವಾಗಿದೆ. ನಾನು ಇಲ್ಲಿ ಜನಾರ್ದನ್ ಪಾತ್ರವನ್ನು ಪೋಷಿಸಿದ್ದೇನೆ. ಅಲ್ಲದೇ ಭಾರೀ ಬಜೆಟ್‌ನಲ್ಲಿ ಚಿತ್ರ ಮೂಡಿಬಂದಿದ್ದರಿಂದ ನನ್ನ ಕೆರಿಯರ್‌ನಲ್ಲೇ ಇದು ಬೆಸ್ಟ್ ಚಿತ್ರ" ಅಂದಿದ್ದಾರೆ ಅಜಯ್. ಇದೇ ವಾರ ರಾಜ್ಯಾದ್ಯಂತ ರಿಲೀಸ್ ಆಗುತ್ತಿರುವ ಸಿನಿಮಾ ಕಳೆದ ತಿಂಗಳೇ ಬಿಡುಗಡೆ ಆಗಬೇಕಿತ್ತು. ಆದರೆ ಆಗ ಐನೂರು ಮತ್ತು ಸಾವಿರ ರೂಪಾಯಿ ನೋಟು ಬ್ಯಾನ್ ಆಗಿದ್ದರಿಂದ ಈ ವಾರ ಥಿಯೇಟರ್‌ಗೆ ಬರುತ್ತಿದೆ. ■

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com